ಈ ಪ್ರತಿ ಒಂದಾಣೆ

ಕಂಠೀರವ

KANTEERAVA
THE ONLY KANARESE
BI-WEEKLY.

ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾಸ್ವಯಃ।
ಶಸ್ತ್ರಸ್ತದ್ವದಮೀಷು ಸಂಯ್ಯವಹೃತಿಪ್ರಾಗಲ್ಭ್ಯಮಾತ್ಮೋಽನ್ವಹಂ
ಜೀಯಾದ್ವಿಶ್ವಜನೀನವೃತ್ತಿಚತುರಶ್ಶ್ರೀಕಂಠಕಂಠೀರವಃ ॥

ನರರ ಕುಲಗಳೊಳಾರ್ಯವಂಶವು, ಧರೆಯ ದೇಶಗಳೊಳಗೆ ಭಾರತ
ವರಸುತನಗಳೊಳಾಂಗ್ಲರೊಡೆತನ, ಸುಡಿಗ್ಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂದೊ। ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ಸ್ವಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೪ | ಮಂಗಳೂರು, ೧೯೩೬ನೇ ಇಸವಿ ನವಂಬರ ತಾರೀಕು ೨೪ನೇ ಮಂಗಳವಾರ | ಸಂಚಿಕೆ ೬೭
VOL. XVIII | MANGALORE, TUESDAY, NOVEMBER 24, 1936. | NO. 67

ಸರ್ವರೋಗ ನಿವಾರಿಣಿ

ಅಮೃತಾಂಜನ

(Regd.)

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೊ

AMRUTANJAN DEPOTS
BOMBAY. MADRAS. CALCUTTA

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Estd. 1908
Church Gate Street, Fort - - BOMBAY.

SPECIAL FEATURES.

(1) Rebate on yearly payment of policies.
(2) Rebate for larger assurances.
(3) Accident Risk covered on small extra premiums.
(4) Attractive Bonuses.

It pays you to represent this Company.
Wanted Agents in unrepresented parts.

APPLY TO:
KOCHIKAR BROTHERS,
Madras Branch Secretaries.

——1936——
OUR VALUATION YEAR

Take a BOMBAY LIFE Policy now, and share in the profits



Branches at:	P. B. 337 Mount Rd. Madras.	Visveswarapuram Circle Bangalore City.	Soumyalayam Puthiyara Calicut.	Car Street Mangalore.	Udipi S. India.	Charni Rd. Bombay No. 4.

Absolute Safety of Investments, Complete Security to Depositors,
Comprehensive and Efficient Service to the Public,
ARE THE OUTSTANDING FEATURES OF

The Canara Industrial & Banking Syndicate, Limited,

(Incorporated in British India.)

THE PIONEER AND HIGHLY PROGRESSIVE COSMOPOLITAN BANK OF

KARNATAKA

With 25 Branches spreading over 8 Districts in South India.

ESTD. 1925.) Head Office:—"Mukunda Nivas", UDIPI.

ANNOUNCEMENT.

We have much pleasure in announcing that two Branches of our Bank have been opened in October, 1936, one at KASARGODE (S. Kanara Dt.) & the other at SAGAR (Shimoga Dt.) on the 24th and on the 29th respectively, where all kinds of Banking business are transacted. It gives us greater pleasure to announce that four more Branches will be opened in 1936 at Byadgi, Prodattur, Tadpatri, and Nandyal on the 29th November, 3rd December, 16th December, and 18th December respectively. The large number of our clients as well as the general public are requested to take advantage of the numerous facilities offered by us at low rates.

"Mukunda Nivas",
UDIPI,
3—11—1936.

P. A. Pai Brothers,
Managing Agents.

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

ನೆಲ್‌ಸನ್ನ ಯುಟ್ರೋವನ್ ಹೆಂಗಸರ

ಎಲ್ಲಾ ರೋಗಗಳಿಗೂ ಖಂಡಿತವಾದ ದಿವ್ಯ ಔಷಧ

ಉಪಯೋಗಗಳು

ಅಲ್ಪ ಸಮಯದಲ್ಲಿ ಲುಕೋರಿಯಾ, ಮೆಟ್ರೊರೊಡಿಯ, ಮನೊರಿಜಿಯಾ, ಮಿಸ್‌ಕೆರಿಜ್, ಬೆನ್ನೋವು ಮತ್ತು ಡಿಸ್‌ಮೆನೊರಿಯಾ ಗುಣಪಡಿಸುತ್ತದೆ. ಅನೇಕ ಡಾಕ್ಟರುಗಳಿಂದ ಪರೀಕ್ಷಿಸಲಾಗಿರುತ್ತದೆ.

Nelson's Convulsion Cure

Best For

INFANTILE CONVULSIONS

ಇಂಪೀರಿಯಲ್ ಫಾರ್ಮಸ್ಯೂಟಿಕಲ್ ಕಂಪೆನಿ,

ಪೋಸ್ಟ್ ಬೋಕ್ಸ ನಂಬ್ರ 3559, :: ಬೊಂಬಾಯಿ.

ಇವರಿಂದ ತಯಾರಿಸಲ್ಪಡುತ್ತದೆ.

ದಿ ರಿಲೈಯನ್ಸ್ ಅಪ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೊಸತರುಗು ಪೇಟೆ, ಬೆಂಗಳೂರು ಸಿಟಿ.

ಕ್ಲೈಮ್ ಹಣ ರೂ. 3,16,000 (3 ಲಕ್ಷ ರೂ.ಗೆ)ಗೆ ಮೇಲ್ಪಟ್ಟು ಪಾವತಿಯಾಗಿರುತ್ತೆ.

ಮೈಸೂರು ಸರ್ಕಾರದ ಕಂಪೆನಿ ರೆಗ್ಯುಲೇಷನ್ ನಂ. VIII 1917ರ ಪ್ರಕಾರ ಸ್ಥಾಪಿತವಾದದ್ದು; ಮತ್ತು ಇಂಡಿಯನ್ ಲೈಫ್ ಅಪ್ಯೂರೆನ್ಸ್ ಆಕ್ಟ್ VI (1912)ರ ಪ್ರಕಾರ ಠೇವಣಾತಿ (Deposit) ಇಟ್ಟು, ಅದರ ನಿಯಮಗಳಿಗೊಳಪಟ್ಟಿದೆ.

ಈ ಕಂಪೆನಿಯ ಅತಿ ಮುಖ್ಯವಾದ ಮತ್ತು ಲಾಭಕರವಾದ ನವೀನ ಪರತ್ತುಗಳನ್ನು ಗಮನಿಸಿರಿ. (1) ಶುರುವಾದ ಲಾಗಾಯ್ತು ವರ್ಷ ಒಂದಕ್ಕೆ ರೂ. 1000ಗೆ ರೂ. 15ರಂತೆ ಗ್ಯಾರಂಟಿಯಾದ ಬೋನಸ್ಸನ್ನು ಕೊಡುವ ಪಾಲಿಸಿಗಳು. (2) ಸರೆಂಡರ್ ವ್ಯಾಲ್ಯುವಿನ ಶೇಕಡ 90% ರಷ್ಟು ಸಾಲ ಪಡೆಯುವಿಕೆ. (3) ಇಮ್ಮಡಿ ವಿಮೆ ಹಣ ಪಡೆಯುವಿಕೆ; (4) ಸ್ಥಿರವಾದ ಅಶಕ್ತತೆಯ ರಿಯಾಯಿತಿ; (5) ವೈದ್ಯಪರೀಕ್ಷೆಯೇ ಇಲ್ಲದೆ ಮಕ್ಕಳ ಹೆಸರಿನಲ್ಲಿ 5000 ರೂ.ಗೆ ವಿಮೆ ಮಾಡಿ, ಪಾಲಿಸಿಯೊಂದನ್ನು ಹೊಂದಬಹುದಾದ ನವೀನ ಕ್ರಮ. (6) ಸ್ತ್ರೀ ಜೀವ ವಿಮೆ ಮಾಡುವ ಕ್ರಮ. ನಮ್ಮ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಸಮರ್ಥರಾದ ಮತ್ತು ಅನುಭವ ಶಾಲಿಗಳಾದ ಏಜಂಟರುಗಳು ಬೇಕು.

1936ನೇ ಸಪ್ಟಂಬರ ತಿಂಗಳಲ್ಲಿ 16 ಮರಣಗಳು ರಿಪೋರ್ಟಾಗಿರುವದರಿಂದ ಮ್ಯೂಚುವಲ್ ಬೆನೆಫಿಟ್ ಸ್ಕೀಮಿನ ಎಲ್ಲಾ ಮೆಂಬರರೂ ಎಂದಿನಂತೆ ಒಂದು ತಿಂಗಳೊಳಗಾಗಿ ತಮ್ಮ ಚಂದಾ ಹಣವನ್ನು ಕಳುಹಿಸಬೇಕಾಗಿ ಅರಿಕೆ ಮತ್ತು ಅವರು ಇಷ್ಟಪಟ್ಟಲಿ ತಮ್ಮ ಸರ್ಟಿಫಿಕೇಟುಗಳನ್ನು ಜೀವವಿಮೆ ಪಾಲಿಸಿಗಳಿಗೆ ಬದಲಾಯಿಸಬಹುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ

ತಿರುಪತಿ ಬಲಿಜಾ ಅಂಡ್ ಕಂಪೆನಿ, ಮ್ಯಾನೇಜಿಂಗ್ ಏಜಂಟರುಗಳು.

ನಾಮುಂದಾರರಿಗೆ ಮುಖ್ಯವಾದ ಒಳ್ಳೆಯ ವರ್ತಮಾನ. ನಾವು ಕರಾವಳಿ ಜೀವಸು, ಕಬ್ಬಿಣದ ಪುಟ್ಟಿರಿ, ಗಾಜಿನ ಸಾಮಾನು, ಇಂಗ್ಲಿಷ್ ಪುಟ್ಟು ಪೇಟಿಂಗ್ ಮುಂತಾದ ಸಾಮಾನುಗಳನ್ನೂ ಬಗೆಯ ಪರಕಾರಗಳನ್ನೂ ವಿತರಣೆ ಮಾಡುವ ಕಮಿಶನ್ ದರದಲ್ಲಿ ಏಜಂಟರನ್ನು ಕೆಲವು ಪ್ರದೇಶಗಳಲ್ಲಿ ಏಜೆನ್ಸಿಯನ್ನು ಕೊಡಲಿಕ್ಕೆ ಇದ್ದೇವೆ. ಒಳ್ಳೆ ಪರಿಚಯವುಳ್ಳ ಯಾವಾಗಲೂ ತರಿಸುವಂತಾದೀತು. ಇಲ್ಲ ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ನಡೆಯುತಕ್ಕದ್ದು.

THE KING O[illegible] D'
Royale
Special
Hair
Dye

1935ನೇ ಇಸ್ವಿಯ ಎ. ಐ. ಐ. ಪ್ರದರ್ಶನದಲ್ಲಿ ಬಂಗಾರದ ಬಹುಮಾನ ಪದಕವು ದ್ದೊರಕಿದೆ.

ನಿಮ್ಮ ಕೂದಲು ತನ್ನ ಸ್ವಾಭಾವಿಕ ಬಣ್ಣವನ್ನು ತಳೆಯುತ್ತದೆ ಮತ್ತೂ ಹೊಳಪಿನ ಮೃದುತ್ವವನ್ನು ಪಡೆಯುತ್ತದೆ– ಈ ನಿಮ್ಮೆ ಗುಟ್ಟನ್ನು ಯಾರೂ ತಿಳಿಯರು. ಇಂದೇ ಒಂದು ಬಾಟಲಿಯನ್ನು ತರಿಸಿ– ಆದರಪ್ಪು ಒಳ್ಳೆದು ಇಂಡಿಯದಲ್ಲಿ ಇನ್ನೊಂದಿಲ್ಲ.

1 ಪೆಟ್ಟಿಗೆಗೆ ರೂ. 1—2. 6 ಪೆಟ್ಟಿಗೆಗಳಿಗೆ ರೂ. 5-0.
3 ಪೆಟ್ಟಿಗೆಗಳಿಗೆ ,, 2-12. 12 ಪೆಟ್ಟಿಗೆಗಳಿಗೆ ರೂ. 9-0.
ಪೋಸ್ಟೇಜಿನ ಸಹಿತ ಬೆಲೆ ಇಂಡಿಯಕ್ಕೆ ಮಾತ್ರ.

ಇಂಡಿಯಕ್ಕೆ ಸೋಲ್ ಡಿಸ್ಟ್ರಿಬ್ಯೂಟರ್ಸ್:—
THE MAQBOOL AGENCY,
Bombay 3. Tel: "AGENCY."

ನ್ಯೂ-ಮೊಡಲ್ ಗಡಿಯಾರ.

3 ವರುಷಗಳ ಗ್ಯಾರಂಟಿ.

(ಪಿಡಪಕ್ಕೆ ಒಂದಾವರ್ತಿ ಬೀಗ ಕೊಡುವುದು.)

ಈ ಗಡಿಯಾರಗಳು ಹೊಸದಾಗಿ ತಯಾರು ಮಾಡಿ ತರಿಸಿದ್ದೇವೆ. ಸೀಮೆಯ ನಿಕ್ಕಲ್ ಲೋಹದ ಸ್ಟ್ಯಾಂಡಿನಲ್ಲಿ ತಯಾರಿಸಿದ್ದೇವೆ. ಈ ಗಡಿಯಾರವು ಖರಾರು ಗಂಟೆಯನ್ನು ತೋರಿಸುವುದು. ಖಾತ್ರಿಯಾದ 3 ವರುಷಗಳ ಗ್ಯಾರಂಟಿ ಕೊಡುವೆವು. ಈ ಗಡಿಯಾರಗಳನ್ನು ಗುಡಿ, ಸ್ಕೂಲು, ರೀಡಿಂಗ್ ರೂಮ್ ಹಾಲುಗಳಲ್ಲಿ ಮುಂತಾದ ಜಾಗದಲ್ಲಿ ಗೋಡೆಗೆ ತಗಲಿಸಿದರೆ ಅಂದವಾಗಿರುವುದು. ಕ್ರಯ ಗಡಿಯಾರ 1-ಕ್ಕೆ ರೂ. 3. ಟಪಾಲು ಖರ್ಚು ಪ್ರತ್ಯೇಕ.

ವಿ. ಎಸ್. ವಾಚ್ ಕಂಪೆನಿ,
8, 3-11 ಇರುಳಪ್ಪನ ಬೀದಿ, ಮದ್ರಾಸು

1936ನೇ ಮಾದರಿಯ

ಹೊಸ ಸೀರೆಗಳು

ಗಟ್ಟಿ ಬಣ್ಣದಲ್ಲಿ ಪ್ರಖ್ಯಾತಿ ಹೊಂದಿದ ನಮ್ಮ **"ಕಾಫಿ ಕಲ್ಲರ್"** ಸೀರೆಗಳನ್ನೇ ಉಪಯೋಗಿಸಿರಿ!

ಕಡಿಮೆ ಬೆಲೆಗೆ–ತರತರದ ಬಣ್ಣದ–ನಮೂನೆವಾರು ಅಂಚಿನ–ಸೀರೆಗಳು!

ಒಮ್ಮೆ ಬಂದು ನಮ್ಮ ಆಂಗಡಿಯನ್ನು ಸಂದರ್ಶಿಸಿರಿ!

ಪಿ. ಎ. ಪೈ ಬ್ರದರ್ಸ—ಉಡುಪಿ.

ದಿ ಕರ್ನಾಟಕ ಡ್ರಾಯಿಂಗ್ ಎಂಡ್ ವೀವಿಂಗ್ ಇಂಡಸ್ಟ್ರೀಯಲ್ ಏಜಂಟರು:—**ಸೂಜಿಕಾರ್ ಬ್ರದರ್ಸ್—ಮಂಗಳೂರು.**

For all kinds of
NEAT AND ACCURAE PTRINTING,
please consult
The Saraswathi Printing Works, Ltd.,
MANGALORE, S. K.

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು
ನಿತ್ಯವೂ ಉಪಯೋಗಿಸುವುದರ
ಪರಿಣಾಮವೇನೆಂದರೆ,
ಶಾರೀರಕ ಯೋಗ್ಯತೆಯು
ರಮ್ಯವಾದ ಅನುಭವವಾಗಿದೆ
ಅದು ಚರ್ಮವನ್ನು ಕೂಡ
ಕಾಪಾಡುತ್ತದಲ್ಲದೆ,
ಅದನ್ನು ಕೋಮಲವಾಗಿಯೂ
ನುಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ,
ಬಿ. ಪಿ. ಗುಣವಿಶೇಷದ
ಶುದ್ಧವಾದ ಮೈಸೂರು
ಗಂಧದ ಎಣ್ಣೆಯು
ಈ ತಯಾರಿಯ ಸ್ವಚ್ಛ ದಿನಸುಗ
ಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು
ಗಂಧದ ಸಾಬೂನು
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬಂಗಳೂರು.
GOVT. SOAP FACTORY,
BANGALORE.

ಶಿಶುಸಂಬಂಧವಾದ

ಯಕೃತ್ತು ಮತ್ತು ಪ್ಲೀಹದೋಷಗಳಿಗೆ

ಶಿಶುಸಂಬಂಧವಾದ ಯಕೃತ್ತು ಮತ್ತು ಪ್ಲೀಹದೋಷಗಳು ದೇಹದಲ್ಲಿ ಅಪರೂಪವಾಗಿ ಬರುವ ಜ್ವರದಿಂದಲೂ ಆಗಾಗ್ಗೆ ಮಲಬದ್ಧತೆಯಿಂದಲೂ ಆರಂಭವಾಗಿ, ಇದು ಗಣನೆಗೆ ಬಾರದೆ ಕ್ರಮೇಣ ಜ್ವರ, ಹೊಟ್ಟೆ ಬೆಳೆಯುವಿಕೆ, ವಾಂತಿ, ಲಕ್ಷಿಸತಕ್ಕ ಮಲಬದ್ಧತೆ ಅಥವಾ ಅನೇಕ ವೇಳೆ ಮಲವಿಸರ್ಜನೆಯುಂಟಾಗುತ್ತದೆ. ಶಿಶುವು ತನ್ನ ರುಚಿಯನ್ನೂ, ಉಲ್ಲಾಸವನ್ನೂ ಕಳಕೊಳ್ಳುತ್ತದೆ ಮತ್ತು ಕರ್ಕಶ ಸ್ವಭಾವಿಯೂ, ಕೃಶವೂ ಆಗುತ್ತಾ ಬರುತ್ತದೆ. ಮೋರೆಯು ಸಪ್ಪನಾಗಿ ಮೂತ್ರವು ಬಣ್ಣವನ್ನು ಹೊಂದಿ ಅದನ್ನು ಅಲ್ಲಿಯೇ ಆರಲು ಬಿಟ್ಟರೆ ಬಿಳಿ ಮಂಡಲವನ್ನು ಬಿಡುತ್ತದೆ. ಮಲವು ಬಹಳವಾಗಿಯೂ, ದೀರ್ಘವಾಗಿಯೂ, ಕೆಸರಿನಂತೆಯೂ ಆಗಿ ಪಚ್ಚೆಯಾ ಬಿಳಿ ವರ್ಣವುಳ್ಳುದಾಗಿ ದುರ್ವಾಸನೆಯನ್ನು ಕೊಡುತ್ತದೆ.

ಯಕೃತ್ತು ಬಹಳ ನೋವನ್ನುಂಟುಮಾಡುತ್ತದೆ, ಜ್ವರವು ಏರುತ್ತದೆ ಮತ್ತು ಅರಸಿನ ಮುಂಡಿಗೆಯು ಆರಂಭವಾಗುವದು; ಅನಂತರ ವೃದ್ಧಿಯಾಗಿ, ಚರ್ಮ, ಕಣ್ಣುಗಳು ಮತ್ತು ಮೂತ್ರ ಕಡುಹಳದಿ ಬಣ್ಣವನ್ನು ಹೊಂದುತ್ತವೆ. ಕಾಲುಗಳು, ಕೈಗಳು ಮತ್ತು ಕೆಲವು ಸಲ ಮುಖ ಕೂಡ ಬಾತುಕೊಳ್ಳುತ್ತವೆ. ಹೊಟ್ಟೆಯ ಮೇಲಣ ನರಗಳು ಕಾಣುವಂತೆ ಹೊರಕ್ಕೆ ಬರುತ್ತವೆ. ರೋಗಿಯು ಸರಿಯಾದ ಔಷಧೋಪಚಾರವನ್ನು ಪಡೆಯದಿದ್ದಲ್ಲಿ ಮೂರ್ಛಾಸ್ಥಿತಿಯಲ್ಲಿ ಮರಣವನ್ನು ಹೊಂದಬಹುದು.

ಅನೇಕ ವೈದ್ಯಕೀಯ ಜನರು ಈ ರೋಗವನ್ನು ಯಾವ ಔಷಧವೂ ಅಂಕೆಗೆ ತರುವದಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಆದರೆ ರುಜುವಾತುಗಳು ಸಿದ್ಧಾಂತಿಸುವದೇನೆಂದರೆ ಈ ಭಯಂಕರ **ಯಕೃತ್ತು ಮತ್ತು ಪ್ಲೀಹದೋಷಗಳು** ಗುಣಕಾರಿಯಾಗುವ ಔಷಧೋಪಚಾರವೆಂದರೆ **ಜಮ್ಮಿ ವೆಂಕಟರಮಣಯ್ಯನವರ ಲಿವರ್ ಕ್ಯೂರ್.**

ಪತ್ರಕಗಳಿಗೂ ವಿಶೇಷ ಮಾಹಿತಿಗೂ ಬರೆಯಿರಿ:—

ಡಾಕ್ಟರ್ ಜಮ್ಮಿ ವೆಂಕಟರಮಣಯ್ಯ
ಲಿವರ್ ಮತ್ತು ಸ್ಪ್ಲೀನ್ ಸ್ಪೆಶಲಿಸ್ಟ್
ಮೈಲಾಪುರ್, ಮದ್ರಾಸು

THE
Popular Insurance Co., Ltd.
Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಪ್ರಥಮ ಮೌಲ್ಯವೇತನದಲ್ಲಿಯೇ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/- ಬೋನಸ್ ಹಂಚಲಾಗಿದೆ.

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ



ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರವ್ಯಾಧಿಗಳಿಗೂ ಸಿದ್ಧೌಷಧವು. ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು.

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು:—**ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.**

ಸ್ಟೋಕಿಸ್ಟರು:— **ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.**

1890ನೇ ಇಸವಿಯಿಂದಲೂ ಪ್ರಖ್ಯಾತಿಯಲ್ಲಿರುವ ಅಲ್ಲದೆ ಎಷ್ಟೋ ಅಖಿಲ ಭಾರತ ಆಯುರ್ವೇದ ಸಮ್ಮೇಳನಗಳಲ್ಲಿ ಅನೇಕಾನೇಕ ಬಂಗಾರದ ಪದಕಗಳನ್ನು ಪಡೆದಿರುವ

ಗುಜರಾತ್ ಫಾರ್ಮಸಿ, ಅಹಮದಾಬಾದ್ ಇವರ

ಬ್ರಾಹ್ಮೀ ತೈಲ ಸುವಾಸನಾಯುಕ್ತವಾಗಿದ್ದು ಅನಿದ್ರೆ, ಆಯಾಸ, ತಲೆನೋವು, ತಲೆತಿರುಗುವುದು, ಮೆದುಳಿನ ಬಲಹೀನತೆ, ಜ್ಞಾಪಕಶಕ್ತಿ ಚೆನ್ನಾಗಿಲ್ಲದಿರುವಿಕೆ, ಕಣ್ಣುರಿ, ಕೆಣ್ಣಿನಲ್ಲಿ ನೀರು ಸುರಿಯುವುದು ಮುಂತಾದ ದೋಷಗಳನ್ನು ಹೋಗಲಾಡಿಸುವುದು.

ಜೀವನ್ ಚ್ಯವನಪ್ರಾಶವು ಯಾವ ತರದ ಬಲಹೀನತೆಗೂ ಅಮೃತದಂತೆ ಗುಣದಾಯಕವಾದ ರಸಾಯನ. ಎಲುಬುಚರ್ಮಗಳೆರಡೆ ಉಳಿದಿದ್ದರೂ ರಕ್ತಮಾಂಸಾದಿ ಧಾತುಗಳನ್ನು ತುಂಬಿಸಿ ದೇಹದಾರ್ಢ್ಯವನ್ನು ಇದರಂತೆ ಕೊಡುವ ಇನ್ನೊಂದು ಔಷಧಿಯಿಲ್ಲ. ಮಕ್ಕಳಿಗಾದರೆ **"ಬಾಲ ಜೀವನ್"**, ಮುದುಕರಿಗಾದರೆ **"ವೃದ್ಧ ಜೀವನ್"** ಎಂಬ ಪ್ರಾಯಕ್ಕನುಗುಣವಾಗಿ ತಯಾರಿಸಿದ ರಸಾಯನಗಳನ್ನು ಕೇಳಿರಿ.

ಇತರ ಎಲ್ಲಾ ಶಾಸ್ತ್ರೋಕ್ತ ಔಷಧಗಳೂ ಚಿಲ್ಲರೆಯಾಗಿಯೂ ರಟ್ಟುಂ ಆಗಿಯೂ ಸಿಗುವವು.

ಸೆಚ್ಚನ ಮಾಹಿತಿಗೆ ವಿಳಾಸ: ಡಾ। ಎ. ವೆಂಕಪ್ಪಯ್ಯ, ಬಿ. ಎ., ಆಯುರ್ವೇದ ಭಿಷಕ್,
ಬೋಳಾರ, ಮಂಗಳೂರು.

ಈ ವಾರದ ಕಥೆ:—

ಕ್ರಾಂತಿಕಾರ.

[ಒಂದು ಕಿರುಗಥೆ]

ಅನುವಾದಕ:—**ಬಿ. ರಾಮಕೃಷ್ಣಾಚಾರ್,**
ಬಿ. ಎ., ವಿಶಾರದ, ಉಡುಪಿ.

(೧)

ರಾತ್ರಿ ಹತ್ತು ಹೊಡೆದಿದ್ದಿತು. ನಗರದಲ್ಲಿ ನಿಸ್ತಬ್ಧತೆ. ಯೂರೋಪೀಯ ಉಡುಗೆಯ ಯುವಕನೊಬ್ಬನು ತವಕದಿಂದ ಎಲ್ಲೋ ಹೋಗುತ್ತಿದ್ದನು. ಇರುಳ ಟೊಪ್ಪಿಗೆಯಿಂದ ಅವನ ಹಣೆ ಮುಚ್ಚಿದೆ. ಗಲ್ಲವು ಮೇಲಂಗಿಯ ಕೊರಳ ಪಟ್ಟಿಯಿಂದ ಮರೆಯಾಗಿದೆ. ಬಲಗೈಯಲ್ಲಿ ವಿದ್ಯುದ್ದೀಪವಿದೆ. ಎಡಗೈ ಮೇಲಂಗಿಯ ಕಿಸೆಯೊಳಗಿದೆ.

ಅವನು ರಾಜಮಾರ್ಗವನ್ನು ಬಿಟ್ಟು ಪಕ್ಕದ ಕಿರುಮೋಣಿಯನ್ನು ಹೊಕ್ಕನು. ಆಗ ಮಧ್ಯವಯಸ್ಸಿನ ಭಿಕ್ಷುಕನೊಬ್ಬನು ಕೈನೀಡಿ 'ಬಾಬೂ, ಇಡೀ ದಿನ ಏನೂ ಸಿಕ್ಕಲಿಲ್ಲ. ಒಂದು ಕಾಸು ದಯಮಾಡಿರಿ!' ಎನ್ನಲು ಯುವಕನು ಕೋಪಗೊಂಡು ಆತನನ್ನೇ ನೆಟ್ಟದೃಷ್ಟಿಯಿಂದ ನೋಡಿದನು. ಭಿಕ್ಷುಕನು ಅದನ್ನು ಕಂಡು ಅತಿ ದೀನತೆಯಿಂದ ಹೇಳಿದನು— 'ಬಾಬೂ, ಹಸಿದಿದ್ದೇನೆ, ಏನಾದರೂ ಕೊಡಿ' ಯುವಕನು ಕಿಸೆಯೊಳಗಿಂದ ಒಂದಾಣೆಯನ್ನು ಆಯ್ದು ಅವನಿಗೆ ಕೊಟ್ಟು ಮುಂದೆ ನಡೆದನು.

ತುಸುದೂರ ಹೋಗಿ ಒಂದು ಬಾಗಿಲ ಬಳಿ ನಿಂತು ನಾಲ್ಕೂ ಕಡೆ ನೋಡಿದನು. ಅನತಿದೂರ ಅದೇ ಆ ಭಿಕಾರಿಯು ತಲೆವಾಗಿ ಮೆಲ್ಲಗೆ ಬರುತ್ತಿದ್ದಾನೆ. ತರುಣನು ಕದದ ಕೊಂಡಿಯನ್ನು ಅಲುಗಾಡಿಸಲು, ಅದು ತೆರೆಯಿತು. ಅವನೊಳಗೆ ಹೋಗುತ್ತಲೇ ಪುನಃ ಮುಚ್ಚಿತು.

ಕದ ತೆರೆದವನು ಒಬ್ಬ ಯುವಕ. ಬಂದವನೊಡನೆ ಕೇಳಿದನು, 'ರಮೇಶ, ಇಷ್ಟು ತಡವೇಕೆ?'

ರಮೇಶನು ಉದ್ವೇಗದಿಂದ ಮರುವಾಡಿದನು—'ರಾಮಚಂದ್ರ, ಎಷ್ಟು ದೂರದಿಂದ ಬರಲಿದೆಯೆಂದು ನಿನಗೆ ಗೊತ್ತೆ? ನಿನಗೇನು? ಯಾವಾಗಲೂ ಮನೆಯೊಳಗೇ ಇರುತ್ತೀ!' ಇಬ್ಬರೂ ಕೋಣೆಯೊಳಗೆ ಪ್ರವೇಶಿಸಿದರು. ಕೊಠಡಿಯ ಮಧ್ಯೇ ವೃತ್ತಾಕಾರದ ಮೇಜು; ಸುತ್ತಲೂ ನಾಲ್ಕೈದು ಆಸನಗಳು; ಮೂರು ವ್ಯಕ್ತಿಗಳು ಕುಳಿತಿದ್ದವರೆದ್ದು ರಮೇಶನ ಕೈಕುಲುಕಿ ಕುಳ್ಳಿರಿಸಿದರು.

ರಮೇಶನು ಇರುಳು ಟೊಪ್ಪಿಯನ್ನು ಮೇಜಿನ ಮೇಲೆ ಬಿಸುಟು, ಮೇಲಂಗಿ ಬಿಚ್ಚಿ ಗೂಟದಲ್ಲಿ ತೂಗಹಾಕಿದನು. ಅನಂತರ ಬಲಗೈಯಿಂದ ತಲೆಕೂದಲನ್ನು ಸವರುತ್ತ ಕುರ್ಚಿಯ ಮೇಲೆ ಕುಳಿತನು. ರಾಮಚಂದ್ರನೂ ಅಲ್ಲಿಯೇ ಕುಳಿತುಕೊಂಡನು.

ತುಸುಹೊತ್ತು ಎಲ್ಲರೂ ನೀರವ. ಉಳಿದ ನಾಲ್ವರೂ ರಮೇಶನ ಮುಖವನ್ನೇ ಉತ್ಸುಕತೆಯಿಂದ ನೋಡುತ್ತಿದ್ದರು. ಅವನು ಮುಖವೆತ್ತಿದನು—'ಈಗ ಈ ಕಿರುಮೋಣಿಯಲ್ಲಿ ನನಗೊಬ್ಬ ಭಿಕಾರಿ ಸಿಕ್ಕಿದನು. ಅವನಾರು ನಿಮಗೆ ಗೊತ್ತೆ?'

'ಭಿಕಾರಿಗಳ ಪರಿಚಯವು ನಮ್ಮ ಕಾರ್ಯಕ್ರಮದ ಅಂಗವಲ್ಲ. ಅದು ಆವಶ್ಯಕವೆ?' ಒಬ್ಬನು ಕೇಳಿದನು.

'ಅಹುದು—ಅವನು ಸಂದೇಹಾಸ್ಪದನಾಗಿದ್ದರೆ!'

'ನಿನಗೆ ಅವನು ಹೇಗೆ ತೋರಿದನು?' ಎರಡನೆಯ ವ್ಯಕ್ತಿ ಕೇಳಿದನು.

'ನನಗೆ ಸಂಶಯವಾದುದರಿಂದಲೇ ಕೇಳಿದೆನು—'ರಮೇಶನು ಹೇಳಿದನು.

ಎಲ್ಲರೂ ಗೊಳ್ಳೆಂದು ನಕ್ಕುಬಿಟ್ಟರು.

ರಮೇಶನು ಹುಬ್ಬು ಗಂಟಿಕ್ಕಿದನು—'ಏಕೆ? ನಗುವುದೇಕೆ? ನಾವು ಇರುವ ಪರಿಸ್ಥಿತಿಯಲ್ಲಿ ಎಲ್ಲರ ಮೇಲೂ ಸಂದೇಹ ಪಡುವುದು ಅತ್ಯಾವಶ್ಯಕ. ಬಲ್ಲಿರಾ?'

'ಆದರೆ ನಿನಗೆ ಸಂದೇಹಪಡಲು ಅಗತ್ಯವಿಲ್ಲ. ನಾವು ಆ ಭಿಕಾರಿಯನ್ನು ಬಲ್ಲೆವು. ಅವನು ಆಗಾಗ ಈ ಓಣಿಯೊಳಗೆ ಭಿಕ್ಷೆ ಬೇಡುತ್ತಾನೆ.'

'ನಿಮಗೆ ಅವನಲ್ಲಿ ಏನೂ ಸಂಶಯವಾಗಲಿಲ್ಲವೇ?'

'ಇಲ್ಲ.'

'ಹಾಗಾದರೆ ಸರಿ. ಚಿಂತೆಯೇನೂ ಇಲ್ಲ.'

ಕೆಲವು ನಿಮಿಷ ಎಲ್ಲರೂ ಮೌನ. ಒಬ್ಬ ತರುಣನು ಹೇಳಿದನು—'ಅದಿರಲಿ. ಏನು ಮಾಡಿ ಬಂದೆ. ಹೇಳು.'

ರಮೇಶ:—'ರುಪಾಯಿಯ ಏರ್ಪಾಡಾಗಲಿಲ್ಲ.'

ಹುಬ್ಬುಗಂಟಿಕ್ಕಿ ಒಬ್ಬನು ಕೇಳಿದನು—'ಏಕೆ?'

'ಆಗಲಿಲ್ಲ. ಅಷ್ಟೇ ಸಾಕು. ಹೆಚ್ಚಿಗೆ ಹೇಳಲಾರೆ—'

ರಮೇಶನು ತಟ್ಟನೆ ಉತ್ತರವಿತ್ತನು.

'ಏರ್ಪಾಡಾಗದಿರಲು ಯಾವುದೋ ಕಾರಣವಿರಬೇಕು.'

'ಎಲ್ಲಿ ಸಿಗುವುದಿದ್ದಿತೋ ಅಲ್ಲಿ ದೊರೆಯಲಿಲ್ಲ—ಇಷ್ಟೇ.'

'ಆಶ್ಚರ್ಯ!'

'ಅದೇಕೆ? ಹೀಗೆ ಆಗಾಗ ಆಗುವುದುಂಟು—'ವಿಕೃತ ಮುಖದಿಂದ ರಮೇಶನು ಹೇಳಿದನು.

'ಹಣ ಸಂಗ್ರಹಮಾಡುವೆನೆಂದು ನಂಬುಗೆಯಿತ್ತ ನೀನು ಹೀಗೆ ಹೇಳಿದರೆ ಆಶ್ಚರ್ಯವಾಗದೆ ಇರುವುದೆ?'

'ಅಹುದು. ನಂಬುಗೆಯಿತ್ತುದೇನೋ ನಿಜ. ಪರಂತು ವಿವಶನಾಗಿದ್ದೇನೆ. ಅದು ಸಿಕ್ಕುವುದೆಂಬ ಭರವಸೆಯಿದ್ದಿತು. ಆದರೆ ಸಮಯದ ಮಾತು; ಸಿಕ್ಕಲಿಲ್ಲ.'

'ಸಮಯದ ಮಾತು—ದೈವ—ಎಂದು ಮುಂತಾಗಿ ಹೇಳಿ ಬಿಡುಗಡೆ ಹೊಂದಬಲ್ಲೆ. ಆದರೆ ನಮ್ಮ ಎಲ್ಲಾ ಆಸೆಗಳ ಮೇಲೆ ಕಲ್ಲು ಬಿದ್ದಿತು!'

'ನನಗೆ ಹಾರ್ದಿಕ ದುಃಖವಾಗುವುದು. ಏನು ಮಾಡಲಿ?'

'ಏನು ಮಾಡಬೇಕೋ ಈಗಲೇ ಯೋಚಿಸೋಣ.'

'ರೂಪಾಯಿಗಳಿಲ್ಲದೆ ಕೆಲಸವಾಗದೆ?'

'ಒಂದು ಅಂಗುಲವೂ ಆಗಲಾರದು!'

ರಮೇಶನು ವಿಚಾರಸರಣಿಯಲ್ಲಿ ಬಿದ್ದನು. ಕೆಲಪು ನಿಮಿಷ ಯೋಚಿಸಿ ಹೇಳಿದನು—'ಆಗಲಿ. ನಾಳೆಯ ವರೆಗೆ 'ಅವಧಿ ಕೊಡಿರಿ; ಇನ್ನೊಂದು ಸಲ ಪ್ರಯತ್ನಿಸಿ ನೋಡುವೆನು.'

ಎಲ್ಲರೂ ಪರಸ್ಪರ ಮುಖ ನೋಡಿಕೊಂಡರು. ಅನಂತರ 'ಆಗಲಿ. ಒಂದು ದಿನದ ಅವಧಿ ಇನ್ನೂ ಕೊಡಲಾಗುವುದು—?' ಒಬ್ಬನು ಹೇಳಿದನು.

೨.

ರಮೇಶ ಪ್ರಸಾದನು ಧನಾಢ್ಯ ಪರಿವಾರದ ಹುಡುಗ. ಬಿ. ಎ. ವರೆಗೆ ಓದಿದ್ದಾನೆ; ಆದರೆ ಪದವಿ ದೊರೆಯಲಿಲ್ಲ. ಎರಡು ವರ್ಷ ಬಿಡದೆ ಅನುತ್ತೀರ್ಣನಾದ ಕಾರಣ ಓದು ನಿಲ್ಲಿಸಿದನು. ವಿದ್ಯಾಲಯದಲ್ಲಿ ಓದುತ್ತಿದ್ದಾಗ ಅವನಿಗೆ ಕ್ರಾಂತಿಯ ಮತ್ತು ಅದರ ಅನುಯಾಯಿಗಳ ವಿಷಯ ವಿಶೇಷ ಮನೋರಂಜನೆಯಾಗಿದ್ದಿತು. ವೃತ್ತಪತ್ರಗಳಲ್ಲಿ ಅದರ ಕುರಿತಾದ ಲೇಖನ, ಕಾರ್ಯವಾಹಿಗಳನ್ನು ಓದುವಾಗ ಶರೀರದಲ್ಲಿ ಮಿಂಚಿನ ಸಂಚಾರವಾಗುತ್ತಿದ್ದಿತು. ಕ್ರಾಂತಿಕಾರರ ಪರಿಚಯ ಹೊಂದುವುದಕ್ಕೆ ಯಾವಾಗಲೂ ಉತ್ಸುಕನಾಗಿದ್ದನು. ತನ್ನನ್ನು ಆ ದಳದವನೆಂದು ತಿಳಿಯುತ್ತಿದ್ದನು. ಅವರಂತೆ ಸಾವಧಾನವಾಗಿರುತ್ತಲೂ, ಎಲ್ಲಾ ವ್ಯಕ್ತಿಗಳಲ್ಲಿ ಸಂದೇಹಪಡುತ್ತಲೂ ಇದ್ದನು. ವ್ಯಕ್ತಿತ್ವವನ್ನು ಅಡಗಿಸುವುದರಿಂದಲೂ, ಕ್ರಾಂತಿಕಾರರ ಆಚರಣೆಗಳಿಂದಲೂ ಆನಂದ ದೊರೆಯುತ್ತಿದ್ದಿತು. ಅವರ ಉದ್ದೇಶಲಕ್ಷಗಳಿಂದ ಆತನಿಗೆ ಪ್ರಯೋಜನವಿರಲಿಲ್ಲ; ಅಥವಾ ದೇಶದ ಸ್ವಾತಂತ್ರ್ಯದ ಕಡೆಗೆ ವಿಶೇಷ ಪ್ರೇಮವಾಗಲೀ, ದೇಶಭಕ್ತಿ ಅಥವಾ ರಾಜದ್ರೋಹಾತ್ಮಕ ಲಕ್ಷ್ಯವಾಗಲೀ ಇರಲಿಲ್ಲ. ಅವರಂತೆ ತಾನೂ ರಹಸ್ಯಮಯ ವ್ಯಕ್ತಿಯಾಗಬೇಕೆಂದೂ ಎಲ್ಲರೂ ತನ್ನನ್ನು ಭಯಭೀತದೃಷ್ಟಿಯಿಂದ ನೋಡಬೇಕೆಂದೂ ಮಾತ್ರ ಅವನ ಉದ್ದೇಶ; ಅವರ ದಳದ ನಾಯಕನಾಗಬೇಕೆಂಬ ಮಹತ್ವಾಕಾಂಕ್ಷೆ!

ರಾತ್ರಿ ಹನ್ನೊಂದು ಹೊಡೆದಿದ್ದಿತು. ರಮೇಶನ ತಂದೆ ತನ್ನ ಕೋಣೆಯಲ್ಲಿ ಒಂಟಿಯಾಗಿ ಮಲಗಿದ್ದನು. ಆಕಸ್ಮಾತ್ ಸದ್ದು ಕೇಳಿಸಿದಾಗ ಆತನೆಚ್ಚತ್ತನು. ಕೋಣೆಯೊಳಗೆ ವಿದ್ಯುತ್ತಿನ್ನ ಮುಂದ ದೀಪವಿದ್ದಿತು. ಅದರ ಕ್ಷೀಣ ಪ್ರಕಾಶದಲ್ಲಿ ಅವನು ಒಂದು ನೆರಳನ್ನು ನೋಡಿದನು. ಕೂಡಲೇ ಎದ್ದು ಕುಳಿತನು. ಇನ್ನೊಂದು ದೀಪಮಾಡಲು ಗಂಬ್ಬಿಯನ್ನೊತ್ತುತ್ತಿದ್ದನು. ಕೈನೀಡಿದೊಡನೆಯೇ ಒಬ್ಬ ವ್ಯಕ್ತಿ ಕರಿ ಒಟ್ಟಿಯಿಂದ ಶರೀರವನ್ನು ಮುಚ್ಚಿ ಮುಖಕ್ಕೆ ಪರದೆ ಹಾಕಿಕೊಂಡು ಅವನ ಸಮೀಪ ಬಂದು ಬಲಗೈ ಪಸರಿಸಿ ಗಂಭೀರ ಧ್ವನಿಯಿಂದ ಹೇಳಿದನು—'ಎಚ್ಚರಿಕೆ!' ಅವನ ಕೈಯಲ್ಲಿ ಪಿಸ್ತೂಲು ಇದ್ದುದನ್ನು ವೃದ್ಧನು ನೋಡಿದನು.

'ಎಚ್ಚರಿಕೆ! ಗುಲ್ಲೆಬ್ಬಿಸಬೇಡ. ಇಲ್ಲವೆ ಪ್ರಾಣಬಲಿ ಕೊಡುವೆ!' ಪುನಃ ಅದೇ ಆ ವಜ್ರಧ್ವನಿ! ರಮೇಶನ ತಂದೆಯು ಕೈಹಿಂದೆಳೆದನು. ಎದೆ ಬಡೆಯುತ್ತಿದ್ದಿತು ಗಂಟಲು ಒಣಗಿದ್ದಿತು. ಭಯಚಕಿತಸ್ವರದಿಂದ ಕೇಳಿದನು—'ನಿನಗೇನು ಬೇಕು?'

'ಕಬ್ಬಿಣದ ಪೆಟ್ಟಿಗೆಯ ಬೀಗದ ಕೈ!'

ರಮೇಶನ ತಂದೆಯು ವಿಚಾರವಗ್ನನಾದನು. ವ್ಯಕ್ತಿಯು ಆತನ ಸಂಕೋಚವನ್ನು ನೋಡಿ ಬಿರುನುಡಿಯಿಂದ 'ಬೇಗ ಕೊಡು' ಎಂದನು.

ನಡುಗುವ ಕೈಯಿಂದ ತಲೆದಿಶೆಯಲ್ಲಿದ್ದ ಬೀಗದ ಕೈಯನ್ನು ಕೊಟ್ಟು ಬಿಟ್ಟನು. ಆ ವ್ಯಕ್ತಿಯು ಅದನ್ನು ತೆಗೆದುಕೊಂಡು ಹೇಳಿದನು—'ಜಾಗ್ರತೆ! ಅಲುಗಾಡ ಬೇಡ. ಶಬ್ದ ಮಾಡದಿರು. ಇಲ್ಲವೆ ಪ್ರಾಣಕ್ಕೆ ಸಂಚಕಾರ!'

ಹೀಗೆ ಹೇಳಿ ಗೋಡೆಯ ಬಳಿಯಿದ್ದ ಉಕ್ಕಿನ ಕವಾಟಿನ ಬಾಗಿಲನ್ನು ತೆರೆದು ಏನನ್ನೋ ಆರಿಸಿ ಪುನಃ ಮುಚ್ಚಿ ಬೀಗದ ಕೈಯನ್ನು ರಮೇಶನ ತಂದೆಯ ಕಡೆಗೆ ಎಸೆದು ಹೇಳಿದನು—'ಹುಷಾರು! ನಾನು ಹೊರಟು ಹೋಗುವ ವರೆಗೂ ಸುಮ್ಮನಿರಬೇಕು.' ಪಿಸ್ತೂಲನ್ನೆತ್ತಿ ದೀಪವನ್ನು ನಂದಿಸಿದನು. ಆಗ ತೀರಾ ಕತ್ತಲೆಯಾಯಿತು. ಕದ ತೆರೆವ ಮುಚ್ಚುವ ಶಬ್ದವನ್ನು ವೃದ್ಧನು ಕೇಳಿದನು. ಸ್ವಲ್ಪ ಕಾಲ ಮೌನವಾಗಿದ್ದು ಮೆಲ್ಲಗೆ ದೀಪದ ಗುಂಡಿಯನ್ನೆತ್ತಿದನು. ಕೋಣೆಯು ವಿದ್ಯುದ್ದೀಪ ಪ್ರಕಾಶದಿಂದ ಬೆಳಗಿತು. ಆತನೆದ್ದು ಕುಳಿತನು. ಬಾಗಿಲನ್ನು ತೆರೆದು ಹೊರಗೆ ಇಣಿಕಿದನು. ಅತ್ತ ಪೂರ್ಣ ನಿಸ್ತಬ್ಧ. ಅನಂತರ ಗಟ್ಟಿಯಾಗಿ ಅರಚಿದನು 'ಕಳ್ಳ! ಕಳ್ಳ!! ಹಿಡಿಯಿರಿ!!!'

ರಾತ್ರಿಯ ನೀರವತೆಯಲ್ಲಿ ಅವನ ಕಂಠಸ್ವರವು ಮನೆಯಲ್ಲೆಲ್ಲಾ ಪಡಿದನಿಗೊಟ್ಟಿತು. ತುಸು ಹೊತ್ತಿನಲ್ಲಿಯೇ ಅನೇಕ ಕದಗಳು ತೆರೆದು ಮೂರು ನಾಲ್ಕು ಸೇವಕರು ಕೂಗುತ್ತ ಹೊರಗೆ ಬಂದು ಸೇರಿದರು. ಯಜಮಾನನನ್ನು ನೋಡಿ—'ಸರಕಾರ್! ಏನಾಯಿತು?' ಎಂದರು.

'ಒಬ್ಬ ಕಳ್ಳನು ನನ್ನ ಕೋಣೆಯಿಂದ ಹೊರಗೆ ಈಗಲೇ ಹೋದನು'—ಅಂಜಿಕೆಯ ಸ್ವರದಿಂದ ರಮೇಶನ ತಂದೆ ಹೇಳಿದನು.

'ಏನು? ತಮ್ಮ ಕೊಠಡಿಯೊಳಗೆ ಕಳ್ಳನೆ? ಹೇಗೆ ಬಂದನು?'

(೬ನೇ ಪುಟಕ್ಕೆ ಮುಂದರಿಸಿದೆ)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

"ಗೊನೊಕಿಲರ್"

(ರಿಜಿಸ್ಟರ್ಡ್)

ಡಾ. ಜಸಾನಿಯವರ
ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಆಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲೀಭೂತವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ಸಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರಪಥಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗಕೊರುವಿಕೆ, ಧಾತುಸ್ರಾವ, ಬಿಳುಪು ಹರಿಯುವಪು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಪೆಟಿ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

GONO KILLER ORIGINAL TRADE MARK REGD.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಜಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಖಲಿತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ತೀಕ್ಷ್ಣದಿಂದ ಹೋಗಲಾಡಿಸುವುದು.

೩ಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

THE RADHA BANK, LTD.
MANGALORE. (*Branch*)
'TEMPLE VIEW' GANAPATHI TEMPLE ST., WEST.

ದಿ ರಾಧಾ ಬೇಂಕ್, ಲಿಮಿಟೆಡ್,
ಮಂಗಳೂರು. (ಬ್ರಾಂಚ್)
'ಟೆಂಪಲ್ ವ್ಯೂ' ಗಣಪತಿ ಟೆಂಪಲ್ ರಸ್ತೆ.

ಚಾಲ್ತಿ ಠೇವಣಾತಿಗಳು ಸಾ। ಶೇ। $2\frac{1}{2}$.
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ। ಶೇ। 4.
ಕಾಯಂ ಠೇವಣಾತಿಗಳು.
3 ತಿಂಗಳ ಬಾಬ್ತು ಸಾ। ಶೇ। 3. 6 ತಿಂಗಳ ಬಾಬ್ತು ಸಾ। ಶೇ। $4\frac{1}{2}$. 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾ। ಶೇ। 6
ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತವೆ.
ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೂಡಾ ಕೊಡುತ್ತದೆ
H. S. RAMA RAO, *Manager.*




ಹರಳೆಣ್ಣೆ ಯೊಡನೆ
CASTOPHENE
COMPOUND
CASTOR OIL
CHOCOLATES
A delicious Chocolate Laxative.
ಕೆಸ್ಟೊಫೇನಿನೊಡನೆ
ಕೆಸ್ಟೊಫೇನ್
ಹರಳೆಣ್ಣೆಯಿಂದ ಮಕ್ಕಳಿಗೆ ಎಷ್ಟೊಂದು ದುಃಖ! ಈಗ ಅದನ್ನು ಕೊಡಬೇಕಾಗಿಲ್ಲ. ಕಾರಣ, ವಿಜ್ಞಾನಿಗಳು ಅದರ ಬದಲು ಆದರ್ಶಪ್ರಾಯದ ಇನ್ನೊಂದನ್ನು ಪೂರ್ಣಮಾಡಿದ್ದಾರೆ–ಕೆಸ್ಟೊಫೇನ್ ಕೇಸ್ಟರ್ ಆಯಿಲ್ ಚಾಕೊಲೆಟ್‌ಗಳು. ಸೇವನೆಗೆ ಮಿಠಾಯಿಯಷ್ಟು ರುಚಿಯಾದ ಈ ಭೇದಿಯ ಬಿಲ್ಲೆಗಳನ್ನು ಡಾಕ್ಟರರೂ, ನರ್ಸುಗಳೂ ಅದರ ಸಂಪೂರ್ಣ ಆದರೆ ಮೃದುವಾದ ಕೆಲಸಕ್ಕಾಗಿ ಹೆಚ್ಚು ಶಿಫಾರಸು ಮಾಡುತ್ತಾರೆ. ಇದು, ಮಕ್ಕಳಷ್ಟೇ, ಪ್ರಾಯಸ್ಥರಿಗೂ ಆದರ್ಶಪ್ರಾಯವಾಗಿದೆ. ಯಾವಾಗಲೂ ಒಂದು ಬಾಟಲಿ ಕೈಯಲ್ಲಿಟ್ಟುಕೊಳ್ಳಿ.
CASTOPHENE
CASTOR OIL CHOCOLATES

ಜೇಫ್ ರೆಪ್ರೆಸೆಂಟೇಟಿವ್:—ಆರ್. ಸಿ. ದಲಾಲ್, ಕಲ್ಲಿಕೋಟೆ.

ದಿ ಝಾಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಮುಂಬಾಯಿ

ಜೀವಕಾಲದಲ್ಲೆಲ್ಲ ಆರೋಗ್ಯವಾಗಿರಲಿಕ್ಕೂ, ಆರೋಗ್ಯಕರವಾದ ದೀರ್ಘ ಜೀವನಕ್ಕೂ
ಝಾಂಡೂರವರ ಕೇಸರೀ ಜೀವನವನ್ನೇ ಸೇವಿಸಲು ಆರಂಭಿಸಿರಿ.
ನೂತನ ದೇಹದಾರ್ಢ್ಯವನ್ನೂ, ಹೊಸ ಶಕ್ತಿಯನ್ನೂ, ಧಾರಾಳವಾದ ರಕ್ತವನ್ನೂ ಉಂಟುಮಾಡುವ ಆದರ್ಶಪ್ರಾಯವಾದ 'ಟಾನಿಕ್' ಇದು.

ಝಾಂಡೂರವರ ಕೇಸರೀ ಜೀವನ

ಇದು, ವಕೀಲರು, ವಿದ್ಯಾರ್ಥಿಗಳು, ಪ್ರೊಫೆಸರುಗಳು ಇವರೇ ಮೊದಲಾದ ಮೆದುಳಿನ ಕೆಲಸ ಮಾಡುವವರಿಗೂ ಬಹಳ ಉಪಯೋಗಕರವಾಗಿದ್ದು ಅವರ ಮೆದುಳಿನ ಶಕ್ತಿಯನ್ನು ಹೆಚ್ಚಿಸುವುದೂ ಅಲ್ಲದೆ, ಜ್ಞಾಪಕಶಕ್ತಿಯನ್ನೂ ವೃದ್ಧಿಗೊಳಿಸುತ್ತದೆ.

1 ಪೌಂಡಿನ ಬುಡ್ಡಿ 1ಕ್ಕೆ ರೂ. 5—0—0. ½ ಪೌಂಡು ರೂ. 2—12—0.
¼ ಪೌಂಡು ರೂ. 1—9—0.

ನಮ್ಮ ಸೋಲ್ ಏಜಂಟರಲ್ಲಿ ದೊರಕುತ್ತವೆ. ನಮ್ಮ ಸಬ್ ಏಜಂಟರುಗಳಲ್ಲಿಯೂ ದೊರಕುತ್ತವೆ:—
(1) **ಷಾ ಅಂಡ್ ಕೋ.,** ಡೈಮಂಡ್ ಬಿಲ್ಡಿಂಗ್ಸ್, ಮಂಗಳೂರು.
(2) **ಪಿ. ಎ. ಪೈ ಬ್ರದರ್ಸ್,** ಉಡುಪಿ. (3) **ವಿ. ವಿ. ಶೆಣೈ,** ಕಾರ್ಕಳ.
ಏಜೆನ್ಸಿ ಷರತ್ತುಗಳಿಗೆ ಸೋಲ್ ಏಜೆಂಟರಿಗೆ ಬರೆದುಕೊಳ್ಳಿ:—
ದಾನೋದರ್ ಅಂಡ್ ಕೋ., 78, ಚೈನಾ ಬಜಾರ್ ರೋಡ್, ಮದ್ರಾಸ್.

'ಕಂಠೀರವ' ಪತ್ರಿಕೆಗೆ ಇಂದೇ ಚಂದಾದಾರರಾಗಿರಿ!

(೪ನೇ ಪುಟದಿಂದ)

'ನನಗೇ ಭ್ರಮೆಯಾಗಿದೆ. ಏನೂ ಗೊತ್ತಾಗುವುದಿಲ್ಲ.'

'ಯಾವ ಕಡೆಗೆ ಹೋದನು?'

'ಈಗ ಈ ಬಾಗಿಲಿನಿಂದಲೇ ಹೋದನು!'

'ಇದಿರು ಬಾಗಿಲು ಮುಚ್ಚಿದೆ. ಎಲ್ಲಿಗೆ ಹೋಗಬಹುದು? ಇಲ್ಲಿಯೇ ಅಡಗಿರುವನು.'

'ಎಚ್ಚರಿಕೆ. ಅವನ ಕೈಯಲ್ಲಿ ಪಿಸ್ತೂಲು ಇದೆ!'

ರಮೇಶನು ಆಗಲೇ ಕಣ್ಣೊರಸುತ್ತಾ ಬಂದು ಭಯಗೊಂಡು ಕೇಳಿದನು 'ಅಪ್ಪಾ, ಏನಾಯಿತು?'

ತಂದೆಯು ಎಲ್ಲಾ ಸುದ್ದಿಯನ್ನು ಹೇಳಿದನು.

ರಮೇಶ:—'ನಮ್ಮ ಮನೆಯಲ್ಲಿ ಕಳ್ಳರೆ? ಬಹಳ ಆಶ್ಚರ್ಯ!'

ಆಗ ಒಬ್ಬ ವ್ಯಕ್ತಿಯು ಬಂದು 'ಮಹಾ ಪ್ರಭು! ಇದಿರ ಬಾಗಿಲು ತೆರೆದಿದೆ. ಕಳ್ಳನು ಅದರಿಂದಲೇ ಹೋಗಿರಬೇಕು!'

ರಮೇಶ:—'ಇದೇನೋ ಅದ್ಭುತವಾಯಿತು. ನೀವು ಆತನನ್ನು ನೋಡಿದಿರಾ?'

ತಂದೆ—'ಅಹುದು. ಕರಿ ಅಂಗಿ ತೊಟ್ಟಿದ್ದನು; ಮುಖದ ಮೇಲೆ ಕರಿ ಪರದೆಯಿದ್ದಿತು; ಕೈಯಲ್ಲಿ ಪಿಸ್ತೂಲು ಹಿಡಿದಿದ್ದನು.'

ರಮೇಶ—'ಹಾಗಾದರೆ ಅವನು ಸಾಮಾನ್ಯ ಕಳ್ಳನಲ್ಲ. ಏನಾದರೂ ಎತ್ತಿಕೊಂಡು ಹೋಗಿರುವನೆ?'

ತಂದೆ:— 'ತೆಗೆದುಕೊಂಡೇ ಹೋಗಿರುವನು. ಆದರೆ ಏನೆಂದು ತಿಳಿಯದು. ನೋಡೋಣ ನಡೆ!'

(೩.)

ಮರುದಿನ ಬೆಳಿಗ್ಗೆ ಪೋಲೀಸರಿಗೆ ಸುದ್ದಿ ಕೊಡಲಾಯಿತು. ಅವರು ಬಂದು ಅವಸರ ನೋಡಿ ಅನುಸಂಧಾನ ಮಾಡತೊಡಗಿದರು. ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಈ ವಾರ್ತೆಯು ಪ್ರಕಟವಾಯಿತು. ಚೋರನ ವರ್ಣನೆ ಕೇಳಿದರೆ ಯಾರೋ ಕ್ರಾಂತಿಕಾರನ ಕೆಲಸವೆಂದು ಪೋಲೀಸರು ಅನುಮಾನ ಮಾಡಿಕೊಂಡರು. ಅಂತಹ ವೇಷದಿಂದಲೇ ಅವರು ಬರುವರೆಂದು ರಮೇಶನೇ ಅನೇಕ ಸಲ ಹೇಳಿದ್ದನು. ನಗರದಲ್ಲೆಲ್ಲಾ ಕೋಲಾಹಲವೆದ್ದಿತು. ಎಲ್ಲೆಲ್ಲಿಯೂ ಇದೇ ಚರ್ಚೆ!

* * * * *

ಸಂಜೆ. ಆ ಓಣಿಯ ಮನೆಯಲ್ಲಿ ಆ ನಾಲ್ಕು ಪೂರ್ವೋಕ್ತ ವ್ಯಕ್ತಿಗಳ ಸಭೆ ಸೇರಿದ್ದಿತು. ಇದೇ ವಿಷಯ ಮಾತು ನಡೆದಿದ್ದಿತು. ಒಬ್ಬನು ಹೇಳಿದನು.

'ಇಂದು ರಮೇಶನು ಬರಲಾರನೆಂದು ತೋರುವುದು.'

'ಹೌದು ಅವನ ಮನೆಯಲ್ಲಿ ಕಳವಾಗಿದೆ! ಬರಲಾರ!'

'ಏಕೆ? ಆ ಕಳ್ಳನಾರಿರಬಹುದು?'

'ಯಾರೋ ಚತುರ ವೀರನಿರಬಹುದು. ಪರರ ಮನೆಯಲ್ಲಿ ಈ ರೀತಿ ಹೊಕ್ಕು ಕಳವು ಮಾಡುವುದು ಪರಿಹಾಸ್ಯವಲ್ಲ.'

'ರಮೇಶನಿಂದ ಹಣ ದೊರೆಯುವುದು ಅಸಾಧ್ಯ.'

'ಹಾಗೆಯೇ ಕಾಣುವುದು.'

'ಏನು ಹೇಳಲಿ! ಪಕ್ಷಿಯೇನೋ ಸಿಕ್ಕಿಬಿಟ್ಟಿದ್ದಿತು. ಆದರೆ ತಡೆಯಾಯಿತು!'

'ಆದರೆ ಕೈತಪ್ಪಿ ಹೋಗಲು ಬಿಡಬಾರದು! ಅವನಿಂದಲೇ ಹಣ ಸಿಗುವುದು ನಿಶ್ಚಯ. ಈಗಲ್ಲದಿದ್ದರೆ ಇನ್ನೊಂದೆರಡು ತಿಂಗಳಲ್ಲಿ!'

'ರಾಮಚಂದ್ರನೇನೋ ಇದನ್ನೇ ಹೇಳುತ್ತಾನೆ. ಕ್ರಾಂತಿಕಾರನಾಗಬೇಕೆಂಬ ಹುಚ್ಚು ಅವನನ್ನು ಹಿಡಿದಿದೆ. ಅವನು ಕೊಟ್ಟೇ ಕೊಡುವನು!'

'ಮೊದಲು ಈ ದಿನ ಬರುವನೋ ಇಲ್ಲವೋ ನೋಡಬೇಕು.'

'ಹಣ ಬೇಕಾದರೆ ಸಿಕ್ಕದಿರಲಿ. ಅವನು ಬಂದೇ ಬರುವನು!'

ಈ ಮಾತುಕಥೆಗಳಾಗುವಷ್ಟರಲ್ಲಿಯೇ ಬಾಗಿಲಲ್ಲಿ ಸದ್ದಾಯಿತು. ರಾಮಚಂದ್ರನೆದ್ದು 'ಅದೋ ಬಂದೇ ಬಿಟ್ಟ!' ಎಂದು ಬಾಗಿಲನ್ನು ತೆರೆಯಲು ರಮೇಶನು ಒಳಗೆ ಬಂದು ರಾಮಚಂದ್ರನ ಸಂಗಡ ಕೋಣೆಯೊಳ ಹೊಕ್ಕನು. ಆತನನ್ನು ನೋಡಿ ಯುವಕನೊಬ್ಬನು ನಸುನಕ್ಕು 'ಬಂದು ಬಿಟ್ಟೆಯಾ? ನೀನು ಇಂದು ಬರಲಾರೆಯೆಂದಿದ್ದೆವು!' ಎಂದನು.

ರಮೇಶ—(ಕುಳಿತು) 'ಏಕೆ?'

'ನಿನ್ನ ಮನೆಯಲ್ಲಿ ಕಳವಾಗಿದೆಯಲ್ಲವೆ? ಅದಕ್ಕಾಗಿ!'

ರಮೇಶ (ಮುಖ ವಿಕಾರ)—'ಅದರಿಂದೇನಾಯಿತು? ಕಳವಾದರೆ ಆಯಿತು. ಅದರ ಹಿಂದೆ ಯಾರೂ ತನ್ನ ಕೆಲಸ ನಿಲ್ಲಿಸುವುದಿಲ್ಲವಷ್ಟೆ?'

'ನಿಜ. ನಿಜ. ಆದರೆ—ನೀನಿದ್ದಂತೆಯೇ ಚೋರಿಯಾಯಿತಲ್ಲ. ಅದೇ ಆಶ್ಚರ್ಯ!'

'ಇದರ ಅರ್ಥವೇನು?' ರಮೇಶನು ನಕ್ಕನು.

'ಕ್ರಾಂತಿಕಾರನ ಮನೆಯಲ್ಲಿ ಕಳ್ಳತನವೆಂದರೆ ಆಶ್ಚರ್ಯವಲ್ಲದೆ ಇನ್ನೇನು?'

ರಮೇಶ—'ಕ್ರಾಂತಿಕಾರನ ಮನೆಯಲ್ಲಿ ಕ್ರಾಂತಿಕಾರನೇ ಕಳವು ಮಾಡಬಲ್ಲನು. ಹೇಗೂ ಇರಲಿ, ವೀರತೆಯ ಕೆಲಸ ಮಾಡಿದನೆಂದು ಒಪ್ಪಲೇ ಬೇಕು.'

'ನಿಜ. ಇದನ್ನೊಪ್ಪಲೇ ಬೇಕು ಅವಶ್ಯ. ಆದರೆ ನಿನ್ನ ಪಾಲಿಗೆ ಇದು ಲಜ್ಜೆಯ ಮಾತೇ ಸರಿ!'

'ನೀವೆಲ್ಲರೂ ನಿಮ್ಮ ಕೆಲಸ ನೋಡಿರಿ. ಈ ಹರಟೆ ನಿಮಗೆ ಬೇಡ.'

'ಕೆಲಸವಾಗಬೇಕು ಹಣದಿಂದ. ತಂದೆಯಾ?'

'ಮಾತುಕೊಟ್ಟ ಮೇಲೆ ತಪ್ಪುವುದುಂಟೆ?' ಎಂದು ರಮೇಶನು ಕಿಸೆಯಿಂದ ನೋಟಿನ ಕಟ್ಟನ್ನು ತೆಗೆದು ಮೇಜಿನ ಮೇಲೆ ಇಟ್ಟನು. ರಾಮಚಂದ್ರನು ಅದನ್ನೆತ್ತಿ ಕೇಳಿದನು 'ಎಷ್ಟಿದೆ?'

'ಎರಡು ಸಾವಿರ. ನೀವು ಕೇಳಿದುದಿಷ್ಟೇ ತಾನೆ?'

'ಹೌದು. ಇಷ್ಟೇ, ಆದರೆ ಮಿತ್ರ, ಒಳ್ಳೆಯ ವೇಳೆಯಲ್ಲಿ ತಂದುಬಿಟ್ಟೆ. ನಾವು ಅದರ ಆಸೆ ಬಿಟ್ಟಿದ್ದೆವು!'

'ಏಕೆ?'

'ಈ ಕಳವಿನ ಕಾರಣ ನೀನು ಈ ಗಲಭೆಯಲ್ಲಿ ಬಿದ್ದಿರ ಬಹುದೆಂದೂ ರೂಪಾಯಿ ತರಲಾರೆ ಎಂದೂ ಭಾವಿಸಿದೆವು.'

ರಮೇಶ ನಕ್ಕನು—'ಇಷ್ಟು ಚಿಕ್ಕ ವಿಷಯಕ್ಕೆ ಕ್ರಾಂತಿಕಾರನು ವಿಚಲಿತನಾದರೆ ಅವನ ಕೆಲಸ ತೀರಿತು!'

ಯಾರೋ ಬಾಗಿಲಲ್ಲಿ ಸಡಪಣೆಯನ್ನು ಸದ್ದುಮಾಡಿದರು! ರಾಮಚಂದ್ರನು ಬೆಚ್ಚಿಬಿದ್ದು—'ಇದಾರು ಸದ್ದುಮಾಡಿದವರು?' ಎಂದನು.

ಎಲ್ಲರ ಮುಖಗಳೂ ಕೆಂಪಾದುವು. ಬಿಸಿಯುಸಿರು ಹೊರಟಿತು. ಪುನಃ ಸಡಪಣೆಯ ಶಬ್ದ!

'ನೋಡು ಯಾರು ಕರೆಯುವರೆಂದು, ಆದರೆ ಬಾಗಿಲನ್ನು ತೆರೆಯಬೇಡ. ಮೊದಲು ಯಾರೆಂದು ತಿಳಿದುಕೊ!'

ರಾಮಚಂದ್ರನು ಬಾಗಿಲ ಬಳಿ ಹೋಗಲು ಯುವಕನೊಬ್ಬನು ನೋಟಿನ ಕಟ್ಟನ್ನು ತನ್ನ ಕಿಸೆಯೊಳಿಟ್ಟು ಮೇಜಿನ ಅರಿಯಿಂದ ಇಸ್ಪೀಟುಗಳನ್ನು ತೆಗೆದು ಹಂಜಲಾರಂಭಿಸಿದನು.

ರಾಮಚಂದ್ರನು ಬಾಗಿಲ ಬಳಿ ಹೋಗಿ ಒಳಗಿಂದ ಕೇಳಿದನು—'ಯಾರದು?'

'ಈಗಲೇ ಒಬ್ಬ ಬಾಬು ಈ ಮನೆಯೊಳಗೆ ಬಂದರು. ಅವರದೊಂದು ವಸ್ತು ಬಿದ್ದಿದೆ. ಇದೇ—'

'ನೀನಾರು?' ರಾಮಚಂದ್ರನು ಕೇಳಿದನು.

'ನಾನು ಭಿಕ್ಷಾರಿ! ಬಾಬು ಸಾಹೇಬರು ನನಗೆ ಒಂದಾಣೆ ಕೊಡುವಾಗ ಇದು ಅವರ ಕಿಸೆಯಿಂದ ಬಿದ್ದು ಬಿಟ್ಟಿತು.'

'ಏನದು?'

'ಈ ಚಿಕ್ಕ ಪುಸ್ತಕ!'

'ನೋಟು ಬುಕ್ಕಾಗಿರಬಹುದು. ಆಗಲಿ ತಾ.' ರಾಮಚಂದ್ರನು ಬಾಗಿಲನ್ನು ತೆರೆದನು. ಕೂಡಲೇ ೬-೭ ಪೋಲೀಸ್ ಕೊನ್ಸ್ಟೇಬಲರು ಒಬ್ಬೊಬ್ಬರಾಗಿ ಒಳಗೆ ಪ್ರವೇಶಿಸಿಬಿಟ್ಟರು. ಒಬ್ಬನು ಆತನನ್ನು ಹಿಡಿದನು. ಉಳಿದವರೆಲ್ಲರೂ ಕೋಣೆಯೊಳಗೆ ಹೋದರು. ಮುಂದುಗಡೆ ಸಬ್ ಇನ್ಸ್‌ಪೆಕ್ಟರನು ಪಿಸ್ತೂಲನ್ನು ಗುರಿಯಿಟ್ಟು ಗರ್ಜಿಸಿದನು—'ಎಲ್ಲರೂ ಇದ್ದಂತೆಯೇ ಕುಳಿತಿರಬೇಕು!'

ಅವರನ್ನು ನೋಡುತ್ತಲೇ ಎಲ್ಲರ ಕೈಯಿಂದಲೂ ಇಸ್ಪೀಟು ಕಾರ್ಡುಗಳು ಕೆಳಗೆ ಬಿದ್ದುವು.

(೪.)

ಕೊನ್ಸ್ಟೇಬಲರು ಅವರು ನಾಲ್ವರನ್ನು ಸೆರೆಹಿಡಿದರು. ಶೋಧಿಸಿ ನೋಡಿದಾಗ ಒಬ್ಬನ ಕೈಯಲ್ಲಿ ನೋಟಿನ ಕಟ್ಟು ಸಿಕ್ಕಿತು. ಇನ್ಸ್ಪೆಕ್ಟರನು ಅದನ್ನು ಸ್ವಾಧೀನ ಮಾಡಿಕೊಂಡು, ಕೇಳಿದನು—'ಈ ಹಣ ಎಲ್ಲಿಂದ ಸಿಕ್ಕಿತು ಮಹಾಶಯರೆ?'

ರಾಮಚಂದ್ರ—'ಇದನ್ನು ಈಗಲೇ ರಮೇಶನು ನಮಗೆ ತಂದುಕೊಟ್ಟನು.'

ಇನ್ಸ್ಪೆಕ್ಟರನು ನಕ್ಕನು—'ಇದು ಗೊತ್ತೇ ಇದೆ. ಆದರೆ ನೀವೆಂತಹ ಕ್ರಾಂತಿಕಾರರು? ಇಷ್ಟು ತ್ವರೆಯಿಂದ ಗುಟ್ಟನ್ನು ಬಿಡಬಹುದೆ? ಮಿತ್ರನನ್ನು ಸಿಕ್ಕಿಸಿ ನೀವೇ ಉಳಿದುಕೊಳ್ಳಲು ಹವಣಿಸುತ್ತೀರೋ?' ಎಂದು ಹೇಳಿ ರಮೇಶನನ್ನು ತೀವ್ರದೃಷ್ಟಿಯಿಂದ ನೋಡಿದನು. ಅನಂತರ ಕೊನ್ಸ್ಟೇಬಲರೊಡನೆ ಹೇಳಿದನು—'ಇವರೆಲ್ಲರನ್ನೂ ಸ್ಟೇಶನಿಗೆ ಒಯ್ಯಿರಿ. ಒಂದು ಗಂಟೆಯೊಳಗೆ ಬರುತ್ತೇನೆ.' ರಮೇಶನನ್ನು ಕುರಿತು—'ನೀವೂ ನನ್ನ ಸಂಗಡ ಬರಬೇಕು!' ಎಂದನು.

* * * * *

FOR YOUR DIAMONDS
ENQUIRE AT
SOWCAR
SRINIVAS RANGAPAI
SOWCAR MAHAL,
Car Street,
MANGALORE.

ರಮೇಶನ ತಂದೆಯು ಹೊರ ಕೊಠಡಿಯಲ್ಲಿ ಕುಳಿತಿದ್ದನು. ಅವನ ಹತ್ತಿರ ಮೂರು ನಾಲ್ಕು ವ್ಯಕ್ತಿಗಳಿದ್ದರು. ಕಳವಿನ ವಿಷಯ ಚರ್ಚೆಯಾಗುತ್ತಿದ್ದಿತು. ಆಗಲೇ ಇನ್ಸ್ಪೆಕ್ಟರನೂ ರಮೇಶನನ್ನು ಕರೆದುಕೊಂಡು ಬಂದನು.

ಅವನನ್ನು ನೋಡಿ ರಮೇಶನ ತಂದೆಯು ಕೇಳಿದನು—'ಇನ್ಸ್ಪೆಕ್ಟರ್ ಸಾಹೇಬರೆ, ಏನಾದರೂ ಗೊತ್ತಾಯಿತೆ?'

'ಸ್ವಲ್ಪ ಬೇರೆ ಕಡೆಗೆ ಹೋಗೋಣ. ಹೇಳುವೆನು.'

ತಂದೆಯೆದ್ದು ಅವರಿಬ್ಬರನ್ನು ಕರೆದುಕೊಂಡು ಎರಡನೆ ಕೊಠಡಿಗೆ ಹೋಗಲು ಇನ್ಸ್ಪೆಕ್ಟರನು ಕದಮುಚ್ಚಿ ನೋಟುಗಳ ಕಟ್ಟನ್ನು ತೆಗೆದು ಅವನ ಮುಂದೆ ಇಟ್ಟನು. 'ಇದೋ, ತಮ್ಮ ಹಣ ಮತ್ತು ಕದ್ದ ಕಳ್ಳ!' ರಮೇಶನ ಕೈಯೆಳೆದು ಮುಂದೆ ಮಾಡಿದನು.

ರಮೇಶನ ತಂದೆ ಅವಾಕ್ಕಾಗಿ ಅವರಿಬ್ಬರ ಮುಖ ನೋಡ ತೊಡಗಿದನು. ರಮೇಶನು ತಲೆವಾಗಿ ಮೂರ್ತಿಯಂತೆ ನಿಂತಿದ್ದನು. ತಂದೆ ಕೇಳಿದನು—'ಇವನ ಕೆಲಸವೆ ಇದು.'?

'ಹೌದು ಸ್ವಾಮಿ!'

'ನನಗೆ ನಂಬುಗೆಯಾಗುವುದಿಲ್ಲ. ಒಪ್ಪಿದ್ದಾನೆಯೇ ಇವನು?'

'ಈಗಲೇ ಒಪ್ಪುವರು.'

ಇಷ್ಟನ್ನು ಹೇಳಿ ಇನ್ಸ್ಪೆಕ್ಟರನು ಜೇಬಿನಿಂದ ಒಂದು ಬಟ್ಟೆಯ ಚೂರನ್ನು ತೆಗೆದು ರಮೇಶನ ಅಂಗಿಯ ಗುಂಡಿ ಬಿಚ್ಚಿ ಒಳ ಅಂಗಿಯ ಮೇಲೆ ಆ ಚೂರನ್ನು ಹಿಡಿದು ಹೇಳಿದನು—'ನೋಡಿರಿ. ಈ ತುಂಡು ಈ ಬಟ್ಟೆಯ ಭಾಗವಲ್ಲವೆ?'

'ಹೌದು. ಅಂತೆಯೇ ಇದೆ.' ಆದರೆ ಆತನ ಮಾತನ್ನು ತಡೆದು ಇನ್ಸ್ಪೆಕ್ಟರನು 'ನಿಲ್ಲಿರಿ ಸ್ವಾಮಿ' ಎಂದನು. ಅನಂತರ ರಮೇಶನ ಅಂಗಿಯ ಅಂಚನ್ನು ಹಿಡಿದು ನೋಡಿ, ಅದರ ಹರಿದ ಸ್ಥಳದಲ್ಲಿ ಆ ತುಂಡನ್ನು ಹಿಡಿದು ತೋರಿಸಿದನು. ಅದು ಸರಿಯಾಗಿ ಸೇರಿತು.

ರಮೇಶನ ತಂದೆ:—'ಈ ಚೂರು ತಮಗೆಲ್ಲಿ ಸಿಕ್ಕಿತು?' ಇನ್ಸ್ಪೆಕ್ಟರ್— 'ತಮ್ಮ ಮಲಗುವ ಕೊಠಡಿಯ ಕೆಳಗಿನ ಕಿಟಿಕೆಯ ಜೌಕದ ಕೀಲು ತಪ್ಪಿದೆ. ಅದರಲ್ಲಿ ಈ ಚೂರು ಸಿಕ್ಕಿದ್ದು ಬೆಳಿಗ್ಗೆ ನಾನು ಶೋಧಿಸುವಾಗ ಸಿಕ್ಕಿತು. ಆಗಲೇ ಯಾರ ಕೆಲಸವಿರುವುದೆಂದು ತಿಳಿದುಕೊಂಡೆ. ಆದರೆ ಆಗಲೇ ಕೇಳಿದ್ದರೆ ಇಷ್ಟು ಸುಲಭವಾಗಿ ವತ್ತೆಯಾಗುತ್ತಿದ್ದಿಲ್ಲ. ಇವರ ಹಿಂದೆ ಗುಪ್ತಚರನನ್ನು ಬಿಟ್ಟು ಇವರು ಹೊಕ್ಕ ಮನೆಯು ಗೊತ್ತು ಹಚ್ಚಿ, ಒಬ್ಬ ಭಿಕ್ಷಾರಿಯ ಮೂಲಕ ಕದ ತೆರೆಯಿಸಿ ಇವರನ್ನೆಲ್ಲಾ ಕೈದು ಮಾಡಿದೆನು. ಅಲ್ಲವೆ ರಮೇಶರಾವ್?'

ರಮೇಶ ತಲೆಯಾಡಿಸಿ ಒಪ್ಪಿದನು.

'ಸಾಹೇಬರೇ, ಇನ್ನೇನು ಆಗುವುದು?'

'ಆಗುವುದೇನು? ತಮ್ಮ ಹಣ ಸಿಕ್ಕಿತು. ಕಳ್ಳನು ತಮ್ಮ ಮಗನೇ. ಇದರ ಮೇಲೆ ಏನು ಮೊಕದ್ದಮೆ ನಡೆಯಿಸುವಿರಿ?'

'ಇಲ್ಲ. ಏನು ಮಾಡಲಿ? ಮಗೂ, ಮನೆಯಲ್ಲಿಯೇ ಒಳ್ಳೇ ಬೇಟೆಯಾಡಿದೆ!'

ಇನ್ಸ್ಪೆಕ್ಟರ್—'ಮನೆಯಲ್ಲಿಯೇ ಶ್ರೀಗಣೇಶನಾದುದು ಮೇಲಾಯಿತು. ಪರರ ಮನೆಗೆ ನುಗ್ಗಿದ್ದರೆ ರಾಜ ಅತಿಥಿಯಾಗಿ ದೊಡ್ಡ ಮನೆಗೆ ಹೋಗಬೇಕಿದ್ದಿತು! ಇವರನ್ನು ನೋಡಿಕೊಳ್ಳಿರಿ. ಇವರ ಮೆದುಳಿನಿಂದ ಈಗ ಕ್ರಾಂತಿಕಾರರ ಮರುಳು ದೂರವಾಗಿರಬೇಕೆಂದು ಭಾವಿಸುತ್ತೇನೆ. ಬೆಳಿಗ್ಗೆ ಕ್ರಾಂತಿಕಾರನೇ ಈ ಕೆಲಸ ಮಾಡಿರಬೇಕೆಂದು ಇವರೇ ಸಾರಿ ಹೇಳಿದರು.'

'ಇವನ ಸಂಗಡಿಗರನ್ನೇನು ಮಾಡುವಿರಿ?'

'ನಾನು ಅವರನ್ನೆಲ್ಲ ಬಲ್ಲೆ; ದೊಡ್ಡ ಮನೆತನದ ಹುಡುಗರು. ಅವರಲ್ಲಿ ಕ್ರಾಂತಿಕಾರನಂತಿರಲಿ. ಒಬ್ಬನೂ ಅವನ ಬಾಲಕ್ಕೂ ಈಡಲ್ಲ. ಇವರಿಂದ ಹಣ ಸುಲಿಯುವುದಕ್ಕಾಗಿ ಈ ವೇಷ ಕಟ್ಟಿದ್ದಾರೆ. ಅವರಿಗೆ ಎಚ್ಚರಿಕೆ ಕೊಟ್ಟು ಬಿಡುತ್ತೇನೆ, ಅವರಿಗೆ ವಿರುದ್ಧವಾಗಿ ಯಾವ ಪ್ರಮಾಣವೂ ಇಲ್ಲ! ಸಾಹೇಬ—ಕುವೂರ! ಕ್ರಾಂತಿಕಾರನಾಗುವ ಹುಚ್ಚು ಮಾಡಬೇಡಿರಿ. ನಿಮ್ಮಂತಹ ಸಜ್ಜನರಿಗೆ ಅದು ಹೇಳಿಸಿದುದಲ್ಲ. ಗುಡ್ ಬಾಯ್!'

DIAMONDS! DIAMONDS!
BEST BRILLIANCY!

K. R. K. SHET,

Near Mission High School, MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್ಸ್ಟ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಿಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂಸ್ ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಕೂದಲು ರಂಗು ಬಿಡಿ.

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಲ್ಲುತ್ತದೆ. ಹೇರಿನಿಂದಲೇ, ಬಿಳಿ ಕೂದಲು ಕಪ್ಪಾಗಿ ಬೆಳೆದು, 60 ವರ್ಷದ ವರೆಗೂ ಹಾಗೇ ಉಳಿಯುತ್ತದೆ. ಹಾಗಾಗದಿದ್ದರೆ, ಎರಡಷ್ಟು ಬೆಲೆಯನ್ನು ಹಿಂದಿರುಗಿಸುವೆವೆಂದು ಗ್ಯಾರೆಂಟಿ. ಕೆಲವು ಬಿಳಿ ಕೂದಲುಗಳಿದ್ದರೆ, ರೂ. 3ರ ಬಾಟಲಿಗೂ, ಹೆಚ್ಚು ಬಿಳಿ ಕೂದಲಿದ್ದರೆ ರೂ. 5ರ ಬಾಟಲಿಗೂ ಅರ್ಧ ಭಾಗಕ್ಕೂ ಹೆಚ್ಚಾಗಿ ಅಥವಾ ಪೂರಾ ಭಾಗದಲ್ಲಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೂ ಆರ್ಡರ್ ಮಾಡಿ.

BAL KALA STORES,
12, 28-7. P. O. Kansi Simri (Darbhanga.)

ವರ್ಷಾಂತರಗಳ ಪ್ರಯತ್ನವೂ, ಸಾಹಸವೂ ತಾಜಾ ವಜ್ರಗಳ ಬದಲು ಈ ಯೋಗ್ಯ ಸಾಧನವನ್ನು ಕಲ್ಪಿಸಿದೆ.

MODERN DIAMONDS

ಅದರ ಅದ್ವಿತೀಯವಾದ ಸೌಂದರ್ಯವೂ ಕಣ್ಣನ್ನು ಕೊರೈಸುವ ಬಿಳಿ ಪ್ರಕಾಶವೂ ಕೂಡಲೇ ಚಿತ್ತವನ್ನು ಆಕರ್ಷಿಸುತ್ತದೆ.

ಶ್ರೀಮತಿ ಸರೋಜಿನಿದೇವಿಯವರ ಅಭಿಪ್ರಾಯ:

"ಮೊಡರ್ನ್ ಡಾಯಮಂಡ್ಸ್"ಗಳು ವೈಜ್ಞಾನಿಕ ಚಾತುರ್ಯದ ಬಹಳ ನಾಜೂಕಾದ ಮಾದರಿಗಳಾಗಿವೆ... ಇವುಗಳಲ್ಲಿ ಕಣ್ಣುಗಳನ್ನು ಸೆಳೆಯುವ ಪ್ರಕಾಶದ ಶುಭ್ರತೆಯಿದೆ. ಎಲ್ಲಿ ಹೆಂಗಸರು ವಜ್ರಗಳನ್ನು ಧಾರಾಳವಾಗಿ ಉಪಯೋಗಿಸುವರೋ ಮುಖ್ಯವಾಗಿ ಆ ಪಕ್ಷಿಣದಲ್ಲಿ ಕಲಾವಿಜಯವಾದ ಈ "ಮೊಡರ್ನ್ ಡಾಯಮಂಡ್ಸ್"ಗಳು ವಿಸ್ತಾರವಾಗಿಯೂ, ಸುಲಭವಾಗಿಯೂ ಮಾರಿಹೋಗುವದೆಂದು ನಾನು ನಂಬುತ್ತೇನೆ.

ನೀವು ಆಪೇಕ್ಷಿಸಿದಲ್ಲಿ ನಮ್ಮ ಸಚಿತ್ರ ಮಾಹಿತಿ ಪತ್ರವನ್ನೂ ಪ್ರಶಂಸಾ ಪತ್ರಗಳ ಪ್ರತಿಯನ್ನೂ ಆತ್ಯಾನಂದದಿಂದ ಕಳುಹಿಸಿಕೊಡುವೆವು.

C. C. Acharyulu & Son,
Jewellers for over a century,
63, Ponnappa Chetty Street,
Post Box No. 543, Park Town, Madras.

ಆರ್. ಮಾರ್ಟಿನ್ಸ್‌ರ
ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸಿದಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ, ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಈ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಸಿವಿಲ್ ಮತ್ತು ಮಿಲಿಟರಿ ಇಲಾಖೆಗೆ ಸೇರಿದ ಎಲ್ಲರಿಂದಲೂ ಹೊಗಳಲ್ಪಟ್ಟಿದೆ. ವೈದ್ಯರೂ ಪ್ರಶಂಸಿಸಿದ್ದಾರೆ. ಹೆಚ್ಚು ಮಾರಾಟವಾಗುತ್ತಿದೆ.

ಬೆಲೆ: ಸೀಸೆ ಒಂದಕ್ಕೆ ರೂ. 2—0—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟ್ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೆಟಿನ ಎದುರು,
ಫೋರ್ಟ್, ಬೊಂಬಾಯಿ.

The United India Life Assurance Co., Ltd.,

Head Office: **MADRAS.** { ESTABLISHED: 1906. } Branch for Karnatak: **UDIPI.**

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.
A policy in United India will give you the maximum benefits.

For particulars apply to:—

M. K. SRINIVASAN, B. A., B. L., *Managing Director.* OR PANGALKAR BROTHERS, *DISTRICT & GENERAL AGENTS,* KODIALBAIL, MANGALORE.

A Modern Way

A CURRENT Account saves you time and steps. The Bank keeps for you an excellent receipt—your paid cheque. And your cheque book gives you the whole story of just where every pie goes. It is a complete record on which to build your budget. Consider the advantages of this modern way to handle money and start a Current Account with any one of the offices of this Bank.

The Travancore National Bank, Ltd.

INCORPORATED IN TRAVANCORE 1912.
Head Office: ALLEPPEY.

Paid up Capital & Reserves ...	Rs.	13,71,000
Deposits	Rs.	1,49,00,000
Total Resources	Rs.	1,84,00,000



ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೪೭೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.

೨. ಮಸ್ಕ್ ಲವೆಂಡರ್—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾಪ ಸೆಂಟು.

೩. ಅನಿಂಸ್ ಸ್ನೋ—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. ಬ್ರಿಲಿಯರೆಂಟಾಯಿನ್—ಕೂದಲಿನ ಸೌಂದರ್ಯಕ್ಕೋಸ್ಕರ ಆರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. ಬ್ರಾಹ್ಮೀ ತೈಲ—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. ದ್ರಾಕ್ಷಾಸವ—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಕ್ರಮುವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. ಆರಾಮೇತಿಹಾಲ್—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. ವೆಜಿಟೇಬಲ್ ಪೈನ್-ಹಂಟರ್—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳಿಗೋಸ್ಕರ ಕುಡಿಯತಕ್ಕ ಔಷಧ.

೯. ರೆತ್ಸಾಂಜನ ಹೇನ್ ಬಾವ್—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ.

೧೦. ಕ್ರೀಸೋರಿಂಗಾ—ಕಪ್ಪು ಅಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.

೧೧. ಪಿಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್—ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, 3.

KOHINOOR WORKS,
60 Abdul Rehiman Street,
BOMBAY, No. 3.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

Apply for particulars:—

K. R. GURU, *Managing Director.*

ಕಳೆದ ವಾರ

ಸಮಜ್ಜಿಗೆಗೆ ಬಂದವರಿಗೆ ಎಮ್ಮೆಯ ಕ್ರಯವೇ'?

ಇದು ಬೇಡದ ಕೆಲಸವಲ್ಲವೇ? ಹೀಗೆಂದು ನಾವೂ, ನೀವೂ ಹೇಳಬಹುದು; ನಿಜ. ಆದರೆ ಅದನ್ನು ತಡೆಯುವವರಾರು? ಹೇಗೆ? ಉದಾಹರಣೆಗಾಗಿ, ಆಫ್ರಿಕದ ಡೆಲಿಗೇಶನಿನ ನಾಯಕರಾದ ಮಿ. ಹಾಫ್‌ಮೆಯರ್ ಸಾಹೇಬರು ತಮ್ಮದೊಂದು ಭಾಷಣದಲ್ಲಿ ಏನೆಂದರೋ ಕೇಳಿ! ಅವರನ್ನುವಂತೆ,–ದಕ್ಷಿಣ ಆಫ್ರಿಕದಲ್ಲಿರುವಷ್ಟು ತೀವ್ರಗತಿಯ ರಾಜಕೀಯ ಆಂದೋಲನವು, ಇಂಡಿಯದಲ್ಲಿಲ್ಲವಂತೆ! ಆದರೆ ಈ ಕುರಿತಾದ ಅಭಿಪ್ರಾಯವನ್ನು, ಈ ಮಹನೀಯರಿಂದ ಯಾರಾದರೂ ನಿರೀಕ್ಷಿಸಿದ್ದರೆ? ಅಥವಾ ನಿರೀಕ್ಷಿಸಿದ್ದರೂ, ಇಲ್ಲಿನ ಮಹಾಜನರ, ಮುಖಂಡರ ಸವಿೂಚೀನವಾದ ಅಭಿಪ್ರಾಯಸಂಗ್ರಹಕ್ಕಾಗಿ ಪ್ರಯತ್ನಪಡದ ಇವರು, ಇಂಡಿಯದ ಕುರಿತಾದ ತಮ್ಮ ಅರ್ಧಜ್ಞಾನದಿಂದಲೇ ಈ ಸರ್ವಜ್ಞಪೀಠವನ್ನೇರುವ ಸಾಹಸ ಮಾಡಿದರೆಂದರೆ, ಸ್ವಾರಸ್ಯವಲ್ಲವೇ?

× × × × ×

ಈ ಮಹನೀಯರು, 'ಇಂಡಿಯದಲ್ಲಿ ತಾವು ಕಂಡ'

ರಾಜಕೀಯ ಆಂದೋಲನದ ಸ್ಥಿತಿ ಇಂತದೇ ಎಂದು ವರ್ಣಿಸುವ ಹವ್ಯಾಸಕ್ಕೆ ಹೋಗದಿದ್ದರೂ, ತಮ್ಮ ಅನುಭವಕ್ಕೆ ಬಂದುದೆಂಬ ಇಲ್ಲಿನ 'ಸಾಮಾಜಿಕ ಕ್ಷೇಮಚಿಂತನೆ'ಯ ಚಳವಳಿದ ಅಭ್ಯುದಯದ ಕುರಿತು ಪ್ರಸ್ತಾವಿಸಿ, ಅದನ್ನು ತುಂಬ ಕೊಂಡಾಡಿ ಧನ್ಯರಾಗದೆ ಇರಲಿಲ್ಲ! ಇಲ್ಲಿನ ಆರೋಗ್ಯರಕ್ಷಣೆ, ಆಸ್ಪತ್ರೆಗಳು,–ಮೊದಲಾದ ಹಲವು ಪ್ರಜಾಸೌಕರ್ಯದ ಏರ್ಪಾಡುಗಳ ವಿಷಯದಲ್ಲಿ, ಇವರು ಸರಕಾರವನ್ನು ಬಾಯಿ ತುಂಬ ಹೊಗಳಿರುವರು. ಆದರೆ, ಈ ಕುರಿತಾದ ಅಭಿಪ್ರಾಯವನ್ನಾದರೂ ಇವರಿಂದ ಯಾರಾದರೂ ನಿರೀಕ್ಷಿಸಿದ್ದರೇ? ಯಾರಿಗೆ ಗೊತ್ತು? ಒಟ್ಟಿನಲ್ಲಿ, ಇದು ಮಜ್ಜಿಗೆಗೆ ಬಂದವರು, ಎಮ್ಮೆಯ ಜಾತಕವನ್ನೆಲ್ಲ ಸ್ಫುಟ ಮಾಡಿದ ಹಾಗಾಯಿತು ಇಷ್ಟಾಗಿ, ಈ ಡೆಲಿಗೇಶನಿನವರಿದ್ದುದಿಲ್ಲಿ ಕೆಲವು ದಿನಗಳೇ; ಇದ್ದವರೂ ಇದ್ದರು ನಮ್ಮ ಪ್ರಭುತ್ವದ ಅತಿಥಿಗಳಾಗಿಯೇ; ಇಷ್ಟೂ ಅಲ್ಲದೆ, ಇವರ ಮುಕ್ಕಾಲುಪಾಲು ಸಮಯವೆಲ್ಲಾ ವೆಚ್ಚವಾಗಿದೆ ಎಲ್ಲಿ? ಹಲವು ಬಗೆಯ 'ಸಾರ್ವಜನಿಕ ಸತ್ಕಾರ ಕೂಟಗಳಲ್ಲಿ. ಅನ್ನುವಾಗ, ಇವರ ಸಾಮಾಜಿಕ ಕ್ಷೇಮಚಿಂತನೆಯ ಅರ್ಧ ಅನುಭವವಾದರೂ ಅಪಾಯಕರವೆಂದೇ ಪ್ರತ್ಯೇಕ ಹೇಳಲೇಕೆ? ಭಾರತದ ಗ್ರಾಮಗಳಿಗೆ ತಾವೇ ತೆರಳಿ, ಅಲ್ಲಿನ ಆರೋಗ್ಯ, ವಿದ್ಯಾಭ್ಯಾಸದ ಸ್ಥಿತಿಗತಿಗಳನ್ನು ತಾವೇ ಪರೀಕ್ಷಿಸಿ ತಿಳಿದುಕೊಳ್ಳಲಾರದೆ ಹೋದ ಇವರು, ಸುಮ್ಮನೆ ಕೂತಲ್ಲಿಂದ ಕಾಲು ಜಾಜಿ, ನಮ್ಮ ಪ್ರಭುತ್ವದವರಿಗೊಂದು ಈ ಬಗೆಯ ಒಳ್ಳೆಯ ಸರ್ಟಿಫಿಕೆಟ್ ಕೊಟ್ಟುಬಿಟ್ಟರೆ ಸಾಕೆ? ಅದರಿಂದ ಫಲವೇನು?

× × × × ×

ಹೊಸ ಸುಧಾರಣೆಗಳ ಕಾಲದಲ್ಲಿ, ರಾಜ್ಯಭಾರದ ಖರ್ಚು,

ಹೆಚ್ಚಿಗೆ ಏನೂ ಇಲ್ಲವೆಂಬುದಕ್ಕೆ ಒಂದೊಂದೇ ದಾಖಲೆಗಳು ಇನ್ನು ಮುಂದೆ ಬರಬಹುದು. ಸದ್ಯ, ಇಂಡಿಯಾ ಸರಕಾರದ ಫೆಡರಲ್ ಕೋರ್ಟ್ ಅಪ್ಪಣೆಯೊಂದು ಪ್ರಕಟವಾಗಿದೆ. ಅದರಲ್ಲಿ ಈ ಖರ್ಚಿನ ಕುರಿತಾದ ಭವಿಷ್ಯದ ಸೂಚನೆ ಇದೆ. ಅದರಂತೆ, ಚೀಫ್ ಜಸ್ಟೀಸರ ತಿಂಗಳ ಸಂಬಳ ೭ ಸಾವಿರ ರೂಪಾಯಿಗಳೂ, ಇತರ ಜಡ್ಜಿಗಳ ತಿಂಗಳ ಸಂಬಳ ೫ ಸಾವಿರದ ೫೦೦ ರೂಪಾಯಿಗಳೂ ಆಗಬಹುದಲ್ಲದೆ, ೬೫ನೇ ವರ್ಷ ಪ್ರಾಯದಲ್ಲಿ, ಅಥವಾ ಅದಕ್ಕೂ ಮೊದಲು, ೧೨ ವರ್ಷಗಳ ಸರ್ವೀಸು ಪೂರ್ಣವಾದಾಗ ನಿವೃತ್ತರಾಗುವಲ್ಲಿ, ವರ್ಷಕ್ಕೆ ಸುಮಾರು ೨ ಸಾವಿರ ಪೌಂಡುಗಳಷ್ಟು ಪೆನ್‌ಶನಿನ ಮೊತ್ತವೂ ವಿೂಸಲಿರಿಸುವ ಸಂಭವವಿದೆ. ಸಾಲದುದಕ್ಕೆ, ಚೀಫ್ ಜಸ್ಟೀಸರೊಬ್ಬರು ಸರ್ವೀಸಿನಲ್ಲಿರುವಾಗ, ಅಥವಾ ಪೆನ್‌ಶನ್ ಪಡೆದ ಒಂದು ವರ್ಷದೊಳಗೆ ಗತಿಸಿದರೆ, ಅವರ ಹಕ್ಕುದಾರರಿಗೆ ೫ ಸಾವಿರ ಪೌಂಡುಗಳ 'ಗ್ರಾಟ್ಯುವಿಟಿ' ದೊರೆಯುವ ಸಂದರ್ಭವೂ ಇದೆ. ಇವೆಲ್ಲಾ ಈಗಲೇ ಪ್ರಕಟವಾಗಿಲ್ಲವೆಂಬುದೇನೋ ನಿಜ; ಆದರೆ ಮುಂದೆ ಒಂದು ದಿನ, ಈ ಸ್ಕೇಲೇ ಜಾರಿಗೆ ಬಂದರೆ, ಯಾರೂ ಆಶ್ಚರ್ಯಪಡಬೇಕಾಗಿಲ್ಲ!

× × × × ×

ಇರಾಕ್ ಸರಕಾರದಲ್ಲಿ ಅಗತ್ಯವಿರುವ ಬದಲಾವಣೆಗಳು,

ಈಚಿಗಿನ ಆ ಮಿಲಿಟರಿ ದಂಗೆಯ ಬಳಿಕ, ಅಲ್ಲಿ ಜಾರಿಗೆ ಬಂದಿರುವುದು ಸರಿಯಷ್ಟೆ. ಆದರೆ ಇದರ ಪರಿಣಾಮವೇನು? ಇರಾಕ್ ಮತ್ತೂ ಬ್ರಿಟನಿನ ಸಂಬಂಧವು ಇದರಿಂದ ಹೇಗೆ ನಿಂತೀತು? ಎಂದು ಬ್ರಿಟನಿನ ರಾಜಕಾರಣಪಟುಗಳು ಚರ್ಚಿಸುತ್ತ, ಮುಂದೆ ಅವೆರಡು ದೇಶಗಳೊಳಗಿನ ಹಿತಸಂಬಂಧವು ಸರಾಗವಾಗಿ ಬೆಳೆಯಲು ಅಡ್ಡಿಯೇ ಇಲ್ಲವೆಂದು ಅಂದಾಜು ಹಾಕಿದ್ದರೂ, ಕೈರೋವಿನ ಇದೊಂದು ವಾರ್ತೆಯಿಂದ ಅವರು ವಿಸ್ಮಯಗೊಳ್ಳದಿರರು. ಆ ವಾರ್ತೆಯ ಮೇರೆಗೆ, ಪೆಲಸ್ತೈನಿನ ಅರಬೀ ಮುಖಂಡನೂ ಆತನ ಸಂಗಾತಿಗಳೂ, ಇರಾಕ್ ಸರಕಾರದ ಅತಿಥಿಗಳಾಗಿ, ಸಾರ್ವಜನಿಕ ವೆಚ್ಚದಿಂದ ಅಲ್ಲಿನ ದೊಡ್ಡ ಹೊಟೆಲುಗಳಲ್ಲಿ ಸತ್ಕಾರವನ್ನು ಪಡೆದೂ, ಅರಸರಾದ ಗಾಜಿಯವರ ಸಂದರ್ಶನಲಾಭವನ್ನು ಸಂಪಾದಿಸಿಯೂ ಇರುವುದಷ್ಟೇ ಅಲ್ಲದೆ, ಅಲ್ಲಿನ ಮಿನಿಸ್ಟರುಗಳೆಲ್ಲರೂ ಸೇರಿ, ಅವರಿಗೆ ಔತನ ಸಮಾರಂಭಗಳನ್ನೂ ಜರುಗಿಸುತ್ತಿದ್ದಾರೆ. ಕಾರಣವೇನು? ಬ್ರಿಟಿಶರಿಗೆ ವಿರುದ್ಧವಾಗಿ ಅಲ್ಲದಿದ್ದರೂ, ಯೆಹೂದ್ಯರ ಎದುರು ನಿಂತು ದಿಟ್ಟತನದಿಂದ ಇವರು ಕಾದಾಡಿದರೆಂದಲ್ಲವೇ? ಹಾಗಾದರೆ, ಅರಬರ ಈ ಸತ್ಕಾರದ ಆತಿಥ್ಯದ ಕುರಿತು, ನಮ್ಮ ಆ ಬ್ರಿಟಿಶ್ ರಾಜಕಾರಣಪಟುಗಳು ಈಗ ಅನ್ನಲಿರುವುದೇನೋ!

× × × × ×

ಶಾಂತಿದಿನಾಚರಣೆಯಂದು, ಎಲ್ಲೆಲ್ಲಿಯೂ

ಶಾಂತಿಸ್ಥಾಪನೆಯ, ಸದ್ಭಾವನೆಗಳ ಸಂದೇಶಗಳ ಸುರಿಮಳೆಯಾಗುವುದೆಂದು ಎಲ್ಲರೂ ನಂಬಿದ್ದರು; ಆಯುಧಧಾರಣೆಯ ಹಾನಿಯ ಕುರಿತು ಉಜ್ವಲವಾದ ನೂರಾರು ಭಾಷಣಗಳಾಗುವುದೆಂದು ತಿಳಿದಿದ್ದರು. ಆದರೆ ಹಾಗಾಗಲಿಲ್ಲ ದೇವರ ದಯೆಯಿಂದ. ಎಲ್ಲರ ಮಾತುಗಳೂ ಆಯುಧಧಾರಣೆಯನ್ನು ಸಮರ್ಥಿಸಿಯೇ ಆಯಿತು. ಎಲ್ಲರೂ ಕೊಂಡಾಡಿ ಸಂತೋಷಪಟ್ಟುದು ಆ ಚಳವಳವನ್ನೇ. ಕಾಮನ್ಸ್ ಸಭೆಯಲ್ಲಿ ಸರ್ ಥಾಮಸ್ ಇನ್‌ಸ್ಕಿಪರವರು ಅಬ್ಬರಿಸಿದುದು ಆ ವಿಷಯದಲ್ಲಿಯೇ. ಬಂಗಾಳದ ಗವರ್ನರರೂ ಅಂದಿನ ಔತನಕಾಲದಲ್ಲಿ 'ಬ್ರಿಟನರು, ಮುಂದೆ, ಧೃಡ ವಿಶ್ವಾಸದಿಂದ, ಎದುರಿಸಲು ಸಮರ್ಥರಾಗುವಂತೆ, ತಾವೂ ಆಯುಧಧಾರಣೆಯನ್ನು ಮಾಡಲ್ಬೇಕೆಂಬುದನ್ನು ಆಗಲೇ ಅನುಭವಕ್ಕೆ ತಂದುಕೊಂಡಿದ್ದಾರೆ' ಎಂದು ಸಾರಿಯೇ ಕೃತಾರ್ಥರಾಗಿದ್ದಾರೆ. ಅಂದರೇನು? ಶಾಂತಿಯಲ್ಲ; ಯುದ್ಧವೆಂಬ ಸೂಚನೆ ತಾನೇ?

× × × × ×

ಪ್ರಾಂತಿಕ ನ್ಯಾಯವಿಧಾಯಕ ಸಭೆಗಳಿಗೆ ಕಾಂಗ್ರೆಸಿನ ಕಡೆಯಿಂದ

ಮೆಂಬರುಗಳಾಗಿ ಆರಿಸಲ್ಪಡಬಹುದಾದ ಉಮೇದುವಾರರುಗಳ ಕುರಿತು ಅಖಿಲ ಹಿಂದೂಸ್ಥಾನದ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಮತ್ತೂ ಕಾಂಗ್ರೆಸಿನ ಮುಖ್ಯಾಧಿಕಾರಿಗಳ, ಹೆಚ್ಚೇಕೆ?–ತದನ್ತರ್ಯಾಯಿಗಳಾದ ಜನಸಾಮಾನ್ಯದ ಧ್ಯೇಯವು ಕೇವಲ ಸಂಖ್ಯೆಯ ಮೇಲೇ ಹೊದ್ದಿರದೆ, ಮೆಂಬರುಗಳಾಗಲುಳ್ಳವರ ಯೋಗ್ಯತಾಗುಣದ ಮೇಲೆ ವಿಶೇಷವಾಗಿ ಹೊದ್ದಿರಬೇಕಾದುದು ಅತ್ಯಗತ್ಯವೆಂದೂ, ಹಾಗಿಲ್ಲದಿದ್ದರೆ, ಅಂತವರಲ್ಲಿ ಕಾಂಗ್ರೆಸ್ಸಿನ ಅಥವಾ ಜನತೆಯ ವಿಶ್ವಾಸವನಾಗಲಿ, ಕಾಂಗ್ರೆಸ್ಸಿನ ಉದ್ದೇಶಗಳಾಗಲಿ, ನೆರವೇರುವುದು ಸಾಧ್ಯವೇ ಅಲ್ಲವೆಂದೂ, ಶ್ರೀಯುತ ವಲ್ಲಭ ಭಾಯಿ, ಜವಾಹರಲಾಲ್, ರಾಜೇಂದ್ರ ಬಾಬೂ, ಅಬ್ದುಲ್ ಗಫಾರ್ ಖಾನ್ ಮತ್ತೂ ಬಜಾಜರು ತಮ್ಮ ಸ್ಟೇಟ್‌ಮೆಂಟಿನಲ್ಲಿ ಹೇಳುವುದನ್ನು ನಾವಿಲ್ಲಿ ಪುನಃ ಪುನಃ ಒತ್ತಿ ಹೇಳಬೇಕಾಗಿದೆ. ಉಮೇದುವಾರರಲ್ಲಿ ಹಲವರ ಹಿಂದಿನ ಚರ್ಯೆಯನ್ನೂ ಈಗಿನ ಸ್ಥಿತಿಯನ್ನೂ ಅನುಸರಿಸಿ ಅವರ ಮುಂದಿನ ಸ್ಥಿತಿಯ ಭವಿಷ್ಯವನ್ನು ನಾವು ನಿರ್ಣಯಮಾಡಬಹುದಾಗಿರುವಾಗ, ಅಂತವರ ಹೆಸರನ್ನೊನ್ಮೆಗೆ ಪಾರ್ಲಿಮೆಂಟ್ ಬೋರ್ಡಿನವರೇ ಪಾಸು ಮಾಡಿದ್ದರೂ, ಧ್ಯೇಯವನ್ನು ಅನುಸರಿಸಲು ಅಸಾಧ್ಯವೆಂದು ತಿಳಿವ ಅಂತಹ ಉಮೇದುವಾರರು ಈಗಲಾದರೂ ಹಿಂತೆಗೆದು ಕಾಂಗ್ರೆಸಿನ ದೃಷ್ಟ್ಯೈಯೋಗ್ಯರಾದ ಇತರ ಉಮೇದುವಾರರಿಗೆ ಎಡೆಗೊಡುವುದು ಕೇವಲ ಯುಕ್ತವೂ ಜನತೆಯ ದೃಷ್ಟ್ಯೈಯಶಸ್ಕರವೂ ಆಗಿದೆ. ಸುಮ್ಮನೆ ತಾತ್ಕಾಲಿಕ ಕಾಂಗ್ರೆಸ್ ಪಾರ್ಟಿಯ ಸೋಗು ಹಾಕಿಕೊಂಡ, ಗುಣವಿಲ್ಲದ, ಕೇವಲ ಸಂಖ್ಯಾಭಿವೃದ್ಧಿಯ, ಉಮೇದುವಾರರ ಚುನಾವಣೆಯನ್ನು ಜನತೆ ಎಷ್ಟು ಮಾತ್ರವೂ ಅನುಮೋದಿಸುವುದರಲ್ಲಿ ಅರ್ಥವಿಲ್ಲವೆಂದು ನಮ್ಮ ಅಭಿಪ್ರಾಯ.

ESTD. 1906

CANARA BANK,

LIMITED.

OFFICES AT

ALLEPPEY	CHIKMAGALUR	KASARGOD
ARSIKERE	COCHIN	MANGALORE-BUNDER
BADAGARA	COONDAPOOR	MANGALORE-CITY
BANGALORE-CITY	DAVANGERE	MANJESHWAR
BOMBAY-FORT	DODBALLAPUR	MOOLKY
BOMBAY-MANDVI	ERNAKULAM	PAYYANNUR
BUNTWAL	GANGULI	PUTTUR
CALICUT	HUBLI	UDIPI
CANNANORE	KARKALA	

TOTAL WORKING FUNDS RS. 75,00,000

ಕೆವ್ವಡರಿಗೆ

"ಡೆಫ್‌ಕಿಲ್ಲರ್" ಕಿವುಡತನವನ್ನೂ, ಕಿವಿಗೆ ಸಂಬಂಧಿಸಿದ ಇತರ ಎಲ್ಲ ರೋಗಗಳನ್ನೂ ಶಾಶ್ವತವಾಗಿ ಗುಣಪಡಿಸುವ ಹೊಸದೊಂದು ಅತ್ಯಾಶ್ಚರ್ಯಕರವಾದ ಔಷಧ. ಕಿವುಡತನವು ಎಷ್ಟೇ ಹಳೆಯದಾಗಿರಲಿ, ಅದು ಯಾವ ಸಂದೇಹವೂ ಇಲ್ಲದೆ, ಯಾವತ್ಕಾಲಕ್ಕೂ ಗುಣವಾಗುವುದು ಮತ್ತೂ ಕಿವುಡರು ಸಂಪೂರ್ಣವಾಗಿಯೂ, ಸ್ಪಷ್ಟವಾಗಿಯೂ ಕೇಳಲು ಆರಂಭಿಸುವರು. ಕಿವುಡತನವು ಸ್ವಲ್ಪವಾಗಿರಲಿ, ಪಾರ್ಶ್ವದ್ದಾಗಿರಲಿ, ಸಂಪೂರ್ಣವಾಗಿರಲಿ, ಅದು ಕಠಿಣವಾದ ನೆಗಡಿಯಿಂದಲೇ ಆಗಲಿ, ಜ್ವರದಿಂದಲೇ ಆಗಲಿ, ಮುದುಡಿಹೋದ ನರಗಳಿಂದ ಅಥವಾ ಗಂಟಲಿನ, ಮೂಗಿನ ಇಲ್ಲವೆ ಒಳಗಿನ ಅವಯವಗಳ ತೊಂದರೆಗಳಿಂದಲೇ ಉಂಟಾಗಿರಲಿ–ಏನೂ ಚಿಂತ್ಯವಿಲ್ಲ. ಕಿವಿ ಸೋರುವುದು ಕೂಡ ಇದರಿಂದ ನಿಲ್ಲುವುದಲ್ಲದೆ, ಸ್ಪಷ್ಟವಾಗಿ ಕೇಳುವ ಶ್ರವಣಶಕ್ತಿಯು ಶಾಶ್ವತವಾಗಿ ಹಿಂದಿರುಗುವುದು. ಈ ದಿವ್ಯೌಷಧದಿಂದ ಸಾವಿರಾರು ಮಂದಿ ಕಿವುಡರು ಯಶಸ್ವಿಯಾಗಿ ಗುಣಹೊಂದಿದ್ದಾರೆ. **ಬೆಲೆ ರೂ. 5. ಪೋಸ್ಟೇಜ್ ಆಣೆ 7.**

MAHAMBS TRADING COMPANY OF ASIA, Indian Depot, P. O. Box 2186, Bombay.

Spleen & Liver Enlargement. **ಜಕ್ರಬಿಂದು** (ರಿಜಿಸ್ಟರ್ಡ್)

ಮಕ್ಕಳ ಮರಣವನ್ನು ತಪ್ಪಿಸುವುದು. ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಅಜೀರ್ಣ, ಭೇದಿ, ಮಲಬದ್ಧತೆ, ಹಸುರು ನರಗಳು, ಕಾವಾಲೆ, ವೈ ಕೈ ಬಾವು, ಕ್ಷೀಣತ್ವಗಳಲ್ಲಿ ಒಂದೇ ವಾರದಲ್ಲಿ ಅತ್ಯಾಶ್ಚರ್ಯಕರವಾದ ಗುಣ ಕೊಡುವುದು. ವರ್ಷಗಟ್ಟಲೆ ಔಷಧವನ್ನು ಕುಡಿಸಿ ಮೃಥೆಪಡಬೇಡಿರಿ.

ಪ್ರಧಾನ ವೈದ್ಯರು:—ಡಾ। ಎ. ಎಸ್. ಶ್ರೀನಿವಾಸ ರಾವ್, ಯಂ. ವಿ. ಪ್ರಾಸಾದಿಕ ಔಷಧಾಲಯ, ಶಿವಮೊಗ್ಗ. ಸಿಟಿ ಜನರಲ್ ಮೆಡಿಕಲ್ ಏಜನ್ಸಿ, ಬೆಂಗಳೂರು.

ಪಂಚಮ ಜಾರ್ಜರ ಸ್ಮಾರಕನಿಧಿಗೆ ಧನಸಹಾಯವಿತ್ತವರ ಪಟ್ಟಿ.

(ಮುಂದುವರಿದುದು)

ರೂಪ್ಯಾ ಒಂದರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಶಿರಿವಾಗಿಲು ಈಶ್ವರ ಭಟ್ಟ, ದಿಯಾಗೋ ಮಚಾದೊ, ಆಲ್ಪೆ; ಸುಬ್ಬಣ್ಣ ಭಟ್ಟ, ಅಡೂರ್; ಇಬ್ರಾನಿ, ಮೊಯಿಲಾರ್; ಕೆ. ಅಬ್ದುಲ್ಲ ಬ್ಯಾರಿ, ಸಾಂತಾಳ್ವ ಮತ್ತೂ ಪೂವಣಿ ರೈ, ಕುಂಞಿಪಲ್ಲಿ ಬ್ಯಾರಿ, ಮುಮ್ಮದೆ ಬ್ಯಾರಿ, ಸೀತಾರಾಮ ಕೇಕುನ್ನಯ್ಯ, ಸೂಪಿ ಹಾಜಿ ಬ್ಯಾರಿ, ನರಸಿಂಹ ಪ್ರಭು, ಅಡೂರು; ಪಠೇಲ ಕುಂಞಣ್ಣ ರೈ, ಅಡೂರು; ಕುಲಂಜಿ ಪಠೇಲ ಶಂಕರನಾರಾಯಣರಾವ್, ಟೀಚರ್ಸ್ ಎಸೋಸಿಯೇಶನ್, ಮೂಡಬಿದ್ರೆ; ಟೀಚರ್ಸ್ ಎಸ್ಸೋಸಿಯೇಶನ್, ಮುಂಡ್ಕೂರು; ಆದಿರಾಜ ಅಟ್ಲ, ನೇಮಕ್ಕು ಹೆಂಗ್ಸು, ಅನಂತಯ್ಯ, ಪೊಳಲಿ; ಕೆ. ಮುತ್ತಯ್ಯ ಸೆಟ್ಟಿ, ಶಂಕರ ಭಟ್ಟ, ಕೊಣಜೆ; ಕೊರಗ ಕೊಟ್ಟಾರಿ, ಕೊಣಜೆ; ನಾರಾಯಣ ಪೂಂಜ, ಕೊಣಜೆ; ಮುಳಿಗುಡ್ಡೆ ಸೀದಿ ಕುಂಞಿ ಬ್ಯಾರಿ, ಚಿಪ್ಪಾರ್; ಮುಳಿಗುಡ್ಡೆ ಹಮ್ಮದೆ ಬ್ಯಾರಿ, ಗಣಪತಿ ಭಟ್; ಚಿಪ್ಪಾರ್; ಸುಬ್ಬಣ್ಣ ಭಟ್, ಬಾಯಾರ್; ಯು. ರಾಮು ಭಟ್, ಬಾಯಾರ್; ಕೆ. ಗೋವಿಂದ ಭಟ್, ತಾಲಂಗಲ ಈಶ್ವರ ಭಟ್, ಸುಬ್ರಾಯ ಭಟ್, ಬಾಯಾರ್; ರಾಮು ಭಟ್, ಬಯಾರ್; ನಾರಾಯಣ ಭಟ್, ಬಯಾರ್, ರಾಮಣ್ಣ ಭಟ್, ಬಾಯಾರ್; ಕೃಷ್ಣ ಭಟ್, ಬಾಯಾರ್; ಪಾಲತಡ್ಕ ನಾರಾಯಣ ಭಟ್, ಮುಟ್ಟತ್ತೋಡಿ ಕೇಶವ ಶ್ಯಾನುಭಾಗ, ನೆಕ್ರಾಜೆ ಶಂಕರನಾರಾಯಣ ಭಟ್, ನೆಕ್ರಾಜೆ ಮಾಲಿಂಗ ಭಟ್, ನೆಕ್ರಾಜೆ ಕುಂಞ, ನೆಕ್ರಾಜೆ ತ್ಯಾಂಪಣ್ಣ ಭಟ್ಟ, ನೆಕ್ರಾಜೆ ಗಾಣಿಗ ಮಾಣಿ, ನೆಕ್ರಾಜೆ ನಾರಾಯಣ ಭಟ್ಟ, ನೆಕ್ರಾಜೆ ಇಂಬಿಚ್ಚಿ, ನೆಕ್ರಾಜೆ ಸುಬ್ಬುಂಞಿ, ನೆಕ್ರಾಜೆ ಅಪ್ಪೆ, ನೆಕ್ರಾಜೆ ಕುಂಞಿಕಣ್ಣ, ನೆಕ್ರಾಜೆ ಅಪ್ಪು, ನೆಕ್ರಾಜೆ ವೆಂಕಪ್ಪ ಭಟ್ಟ, ಕಾಳುರಾಯ ಗೋಪಾಲಕೃಷ್ಣ ಅಡಿಗ, ಕೆ. ಶಂಕರನಾರಾಯಣ ಅಡಿಗ, ವೈದ್ಯ ಕೇಕುಣ್ಣಯ್ಯ ಮಾಧವ ಭಟ್, ಕೆಜಲ ಕೃಷ್ಣಯ್ಯ, ಲಕ್ಷ್ಮೀನಾರಾಯಣ ಮಯ್ಯ, ಶಂಕರ ನಾರಾಯಣ ಕಾರಂತ, ಚೆನಕೊಡೆ ವೆಂಕಮ್ಮ, ಪೆರಾಡಿ ಗುಣವತಿ ಅಮ್ಮ, ಪಿನೆಕ್ರೋಡಿ ಅಣ್ಣು, ಕೆರಂಕಿತ್ತೋಡಿ ಸಿದ್ದಪ್ಪ ಸೆಟ್ಟಿ, ಸೆರಾಡಿ ಚೆಲುವಯ್ಯ ಹೆಗ್ಡೆ, ಗುಂಡುರಿ ಪಠೇಲ ನರಸಿಂಹ ಭಟ್ಟ, ವೇಜಿನಮನೆ ದೇಜು ಸೆಟ್ಟಿ, ಜಾಕುರ ಪೂಜಾರಿ, ಹೊಸಂಗಡಿ ಜಿನ್ನಪ್ಪ ಕಂಬಳಿ, ಹೊಸಂಗಡಿ ಪಠೇಲ ಶಿದ್ಧ ಪೂವಣಿ, ಪಾಲ್ತಾಡಿ ತ್ಯಾಂಪ ಪೂಜಾರಿ, ಕುಳ ತಿನ್ಮಣ್ಣ ಭಟ್ಟ, ಕುಡಿಪಾಡಿ ಪಠೇಲ ಅಪ್ಪಾಜಿರಾವ್.

ಬೋರ್ಡು ಹೈಸ್ಕೂಲ್, ಉಡುಪಿ, ರೂ. ೫೮೦—೧೪—೦; ಸೈಂಟ್ ಎಗ್ನೆಸ್ ಕೊಲೇಜು, ಮಂಗಳೂರು, ರೂ. ೭೫—೦—೦; ಮಂಗಳೂರು ಗಣಪತಿ ಮತ್ತು ವಿಶ್ವನ್ ಹೈಸ್ಕೂಲುಗಳಿಂದ, ರೂ. ೧೨೫—೮—೦, ರೆವೆರೆಂಡ್ ಫಾದರ್ ಯಂ. ಮಿನೇಜಸ್ ಪಲಿಮ್ಸಿಯಾ, ಕಂಕನಾಡಿ, ರೂ. ೪—೧೧—೦.

ರೂಪ್ಯಾ ಐದರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಬಡಗಮಿಜಾರ್ ತಿಮ್ಮಯ್ಯ ಸೆಟ್ಟಿ, ಪಠೇಲ; ವಿ. ಪಿ. ಮಹಮ್ಮದ್ ಕುಂಞಿ ಹಾಜಿ ಸಾಹೇಬ ಬಹದೂರ್, ತ್ರಿಕಾರಪುರ; ನೆರಿಯ ಪಂಚಾಯತ ಬೋರ್ಡು, ಕೊಯಿಲ ಪಠೇಲ ಕಾಂತಾಳ್ವ, ಕೆ. ಜಿ. ಕಾಮತ್, ಕಾರ್ಕಳ.

ರೂಪ್ಯಾ ಮೂರರಂತೆ ಕೊಟ್ಟವರು.

ಮ. ರಾ. ರಾ.ಗಳಾದ ವಾಲಿಯ ಪುರಾಯಿಲ್ ಕುಂಞಮ್ಮದ್ ಸಾಹೇಬ, ದಕ್ಷಿಣ ತ್ರಿಕಾರಪುರ; ಮಹಾಬಲ ಆಳ್ವ, ಕರಿಯಂಗಳ ಪಠೇಲ; ನೋನಯ್ಯ ಸೆಟ್ಟಿ, ಸೊನಂದೂರು.

ರೂಪ್ಯಾ ಎರಡರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಲಕ್ಷ್ಮೀನಾರಾಯಣ ಕಟುರಾಯ, ದೆಲಸಾಡಿ; ನಿಂದೂರು ಪಠೇಲ ಶಾಮರಾಯ ಸೆಟ್ಟಿ, ವಿಟ್ಲಪಡ್ನೂರ್ ಪಂಚಾಯತ ಬೋರ್ಡು, ಲಕ್ಷ್ಮಣ ಹಳೆಯಂಗಡಿ, ಶಿರಾಡಿ ಪಂಚಾಯತ ಬೋರ್ಡು, ಲೈಲ ಪಂಚಾಯತ ಬೋರ್ಡು, ಶೇಕ್ ಅಹಮ್ಮದ್, ತಿರ್ವ ತ್ತೂರು ಪಠೇಲ; ಕಾಪು ಕೃಷ್ಣಾಚಾರ್ಯ, ವೆರಿ ರೆವೆರೆಂಡ್ ಫಾದರ್ ಬಿ. ಆರಾಂಞ, ಬಂಟ್ವಾಳ; ಮಮ್ಮಾಲಿ ಬ್ಯಾರ್ತಿ, ಏವಕೊಕ್ಲು; ಡಾಕ್ಟರ್ ಅಡ್ಯಂತಾಯ, ಕಾರ್ಕಳ; ದೇವರ ಕೆಂಚ, ದೇವಚಲ; ರಾಘವೇಂದ್ರ ಭಟ್ಟ, ದೇವಚಲ.

ರೂಪ್ಯಾ ಒಂದುವರೆ ಕೊಟ್ಟವರು.

ಮ. ರಾ. ರಾ. ಅಂತಾರು ಕೊರಗ ಸೆಟ್ಟಿ.

ರೂಪ್ಯಾ ಒಂದರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಅಪ್ಪಯ್ಯ ಕೊಡ್ಗಿ, ಮಚ್ಚಟ್ಟು; ಅಕ್ಕಣಿ ಸೆಟ್ಟಿ, ಕಾಟುಕುಕ್ಕೆ; ಮೊಗವೀರ ಅಪ್ಪಣ್ಣ ನಾಯ್ಕ, ಕರಿಂಬಿತ್ಲು ಗೋವಿಂದ ಭಟ್ಟ, ಪಡ್ಡಂಬೈಲ್ ಲಕ್ಕಣ್ಣ ಬಂಟ, ಮೊಗವೀರ ಕೊಗ್ಗಣ್ಣ ನಾಯ್ಕ, ಬಾರೆ ನಾರಾಯಣ ಭಟ್, ಕುಂಞನಡ್ಕ ಸುಬ್ರಾಯ ಭಟ್, ವಾಚೆ ಸುಬ್ರಾಯ ಭಟ್, ಕಾಟ್‌ಕುಕ್ಕೆ; ಅಂದು ಯಾನೆ ಅಬ್ದುಲ್ಲ ಹಾಜಿ, ಪಡಿ; ಚೊಟ್ಟಕ್ಕಾನ್ ವೆಂಕಟೇಶ ಭಟ್, ಅಕ್ಕಾರಿ ಬಂಟ್, ದೆಲಂಪಾಡಿ; ರಾಮಣ್ಣ ನಾಯ್ಕ, ದೆಲಂಪಾಡಿ; ನಾರಾಯಣ ವೆಂಕಟೇಶ ವರ್ಕು, ಬಡಗಮಿಜಾರ್; ಕೊನಬೆಟ್ಟು ಶಾಮಯ್ಯ ಭಟ್ಟ, ಮಿಯ್ಯದ್ ಬ್ಯಾರಿ, ನೂಯಿ ಸೀತಾರಾಮ ಭಟ್ಟ, ಅರೆಮಜಲು ಪುಟ್ಟಣ್ಣಯ್ಯ, ಯನ್. ಪಿ. ಸುಬ್ಬಣ್ಣ ಭಟ್ಟ, ನಿಂಜೂರು; ಕೊರಗ ನಾಯ್ಕ, ನಿಂಜೂರು; ಚಿತ್ರಬೈಲು ನಾರಾಯಣ ಸೆಟ್ಟಿ, ಲೋರೆನ್ಸ್ ಸೋಸ, ಮೂಡು ಕೊತ್ರಬೆಟ್ಟು ಚಂದು ಸೆಟ್ಟಿ, ಬೆಟ್ಟು ನಾರಾಯಣ ಸೆಟ್ಟಿ, ಕೆ. ಮುದ್ದಣ್ಣ ಸೆಟ್ಟಿ, ಮುದ್ದಣ್ಣ ಕಪ್ಪು ಸೆಟ್ಟಿ, ಸಂಕಯ್ಯ ಸೆಟ್ಟಿ, ಹಲ್ನಾಡ್; ಬಾಳೆ ಮಳಿ ಗಣಪತಿ ಭಟ್, ಬಿರಂತೋಡು ತ್ಯಾಂಪ ಗೌಡ, ಕೊಣಜೆ; ಹರ್ತಿಮನೆ ಚೋಮ ಗೌಡ, ನಡುಬೆಟ್ಟು ಲಿಂಗು ಅಜ್ಜಾಯ, ನಡುಬೆಟ್ಟು ಅಪ್ಪು ಸೆಟ್ಟಿ, ತಳಯಾರಿ ಮೋಂಟ ಗೌಡ, ಕೊಣಜೆ; ಕಕ್ಕಟು ಕೇಳು, ಮುಡಿಕಾಯಿ; ವಿಷ್ಣು ಕಕ್ಕೊತ್ತಾಯ, ಮುಡಿಕಾಯಿ; ನಾರಾಯಣ ಕಕ್ಕೊತ್ತಾಯ; ವಾಸುದೇವ ಪಠೇಲ, ಮುಡಿಕಾಯಿ; ಕಣಿಯೂರು ಕುಂಞಿ ರಾಮನ್ ನಾಯರ್, ಯು. ಪಿ. ಕುಂಞಮ್ಮದ್ ಸಾಹೇಬ, ಉತ್ತರ ಶ್ರೀಕಾರಪುರ; ಅಬ್ರಾಜೆ ಕೃಷ್ಣ ಭಟ್, ಯಂ. ಕುಂಞಮ್ಮದ್ ಹಾಜಿ ಮತ್ತೂ ಸ್ನೇಹಿತ, ಪಿ. ವಿ. ರಾಘವನ್, ಕೆ. ಕುಂಞಂಬು ನಾಯರ್. ವಿ. ಪಿ. ಕುಂಞಮ್ಮದ್, ಯನ್. ಪಿ. ಕುಂಞಂಬು, ಕೆ. ಕುಂಞಪ್ಪು, ಯು. ಪಿ. ಮಹಮ್ಮದ್ ಸಾಹೇಬ, ಟಿ. ಯಂ. ರತ್ನಸ್ವಾಮಿ ಚೆಟ್ಟಿಯಾರ್, ಇ. ಕೃಷ್ಣನ್, ಇ. ಗೋವಿಂದ ಪಡುವಾಳ್, ಎ. ಶ್ರೀನಿವಾಸ ಶೆಣೈ, ವಿ. ಪಿ. ಇಬ್ರಾಹಿಮ್ ಹಾಜಿ ಸಾಹೇಬ, ಸಿ. ಮಹಮ್ಮದ್ ಸಾಹೇಬ, ಯಂ. ಪಿ. ಕುಂಞಬ್ದುಲ್ಲ ಸಾಹೇಬ, ರಾಮು ಅಕ್ಕಾಲಿ, ಹಲ್ನಾಡ್, ಪುಂಡಲೀಕ ಕನ್ತಿ, ಹಳೆಯಂಗಡಿ; ಶ್ರೀನಿವಾಸ ಶ್ಯಾನುಭಾಗ, ಹಾಜಿ ಮೈದಿನ್ ಬ್ಯಾರ್ತಿ, ಹಳೆಯಂಗಡಿ ನಾರಾಯಣರಾವ್, ವಿಟ್ಲಲ್ ಶ್ರೀವರ್ಮ ಸೆಟ್ಟಿ, ದಾರೆಗುಡ್ಡೆ; ವಾದಿರಾಜ ಸೆಟ್ಟಿ, ಉಡುಪಿ; ಅಗಸರ ಹೊಳೆ, ಕೊರಗ ಫುಳ್ಳಿ ಕೆರೆ; ಲಕ್ಷ್ಮೀನಾರಾಯಣ ಜ್ಯೋಶಿ, ಹೆಮ್ಮಾಡಿ; ಕೇಶವಯ್ಯ ಚಿತ್ರ, ಹಳ್ಳಿಹೊಳೆ; ಪಠೇಲ ಶಂಕರ ನಾರಾಯಣ ಚಿತ್ರ, ಪೆರ್ನು ಪೂಜಾರಿ, ಸುಲ್ಕೇರಿ ಮೊಗರು; ನಾಗಪ್ಪ ಶಿರಾಡಿ, ಕೃಷ್ಣ ಮೆನನ್, ಫೊರೆಸ್ಟರ್; ತಿಮ್ಮಪ್ಪಯ್ಯ ಪಠೇಲ, ಫ್ರಾನ್ಸಿಸ್ ಲೋಬೊ, ಶಿರಾಡಿ; ಆದಿರಾಜ ಕೊಟ್ಟಾರಿ, ಇಂದಬೆಟ್ಟು; ಕೂವೆತ್ಯಾರು ದೊಂಬ ಪೂಜಾರಿ, ಇಂದಬೆಟ್ಟು; ಸಂಕೇಶ ಚೆನ್ನ ಪೂಜಾರಿ, ಇಂದಬೆಟ್ಟು, ಜಿನ್ನಪ್ಪ ಯಾನೆ ಬೇರಾ ಗೌಡ, ಇಂದಬೆಟ್ಟು, ಕೊಟ್ಟಡ್ಕ ವೀರಪ್ಪ ಪೂಜಾರಿ, ಇಂದಬೆಟ್ಟು; ಪನ್ನೀರು ಚೆನ್ನಣ್ಣ ಪೂಜಾರಿ, ಅಪ್ಪು ಗೊಳ್ಳ, ಕಣ್ಯಾಡಿ, ಚೆನ್ನಣ್ಣ ಗೌಡ, ಪೆರ್ನು ಪೂಜಾರಿ, ತಿಮ್ಮಯ್ಯ ಗೌಡ, ಕನ್ಯಾಡಿ; ಐತಪ್ಪ ರೈ, ಸುಳ್ಯ; ನಡುಮನೆ ಗೋವಿಂದಯ್ಯ, ಕೊಲ್ಲನೊಗ್ರು; ಲಿಂಗು ಗೌಡ, ಕದಿರುದ್ಯಾವರ; ಕೆ. ರಾಮಪ್ಪ ಗೌಡ, ಆಲಟ್ಟಿ; ಲಕ್ಷ್ಮೀನಾರಾಯಣ ಬಲ್ತಿಲ್ಲಾಯ, ಬಲ್ಲಾಳ; ಪದ್ಮನಾಭಯ್ಯ, ಗೋವಿಂದಾಯ, ಧರ್ಮಸ್ಥಳ; ಸೇಸ, ಧರ್ಮಸ್ಥಳ; ಜಾರು ಗೌಡ, ಸುಬ್ರಾಯ, ದೇಜು ಭಂಡಾರಿ, ಸವನಾಲ; ಪಿ. ಕೂಸಪ್ಪ ಪೂಜಾರಿ, ಕೆ. ಅಮ್ಮು ಪೂಜಾರಿ, ಜೆ. ಮಲೆಕುಡಿಯ ತ್ಯಾಂಪ, ಕೆ. ವೀರಪ್ಪ ಪೂಜಾರಿ, ಮುಂಡೂರು; ಯು. ಜೋಸೆಫ್ ಪಿಂಟೊ, ಯನ್. ವೀರಪ್ಪ ಪೂಜಾರಿ, ಪಿ. ಅಮ್ಮು ಪೂಜಾರಿ, ಕಟ್ಟಡಬೈಲ್ ಲಿಂಗಪ್ಪ, ಮಂಜಪ್ಪ ಪೂಜಾರಿ, ಕಾರ್ತ ಪೂಜಾರಿ, ಲಿಂಗಪ್ಪ ಪೂಜಾರಿ, ವೀರಪ್ಪ ಪೂಜಾರಿ ರೂ. ೧—೪—೦, ಕಷ್ಣ ಭಟ್ ಭಿಡೆ, ಮುಡ್ಕೆಬೆಟ್ಟು ಕೇಳು ಬೆಲ್ಚಡ, ಗುತ್ತು ಕಾರ್ತಪ್ಪ ಬೆಲ್ಚಡ, ಮಾರ್ಪಾಡಿ ನೋನಯ್ಯ ಮೂಲ್ಯ, ಕೆ. ಪದ್ಮನಾಭ ಸೆಟ್ಟಿ, ವಿಟ್ಲ; ಯಂ. ದಾಸು ನಾಯ್ಕ, ಕುಂಞಪ್ಪು ಬ್ಯಾರಿ, ಶ್ರೀಮತಿ ಪದ್ಮಿನಿ ಬಾಯಿ, ಜನಾರ್ಧನ ಶ್ಯಾನುಭಾಗ, ಪನಕಾಜೆ, ವಾಸುದೇವ ಶ್ಯಾನುಭಾಗ, ಪನಕಾಜೆ ಪಂಚಾಯತ ಬೋರ್ಡು ರೂ. ೧-೬-೦; ಧಾರ್ನಪ್ಪ ಬೊಳಿಯಾರ್, ಮೇಲಂತ ಬೆಟ್ಟು.

(ಮುಂದರಿಯುವುದು.)



ಡೋಂಗರೇ ಇವರ ಬಾಲಾಮೃತವು ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು.

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ.

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ.

(೫) ಡೋಂಗರೇ ಇವರ ಬಾಲಾಮೃತವು ಬಲವನ್ನುಂಟುಮಾಡಿ ಆರೋಗ್ಯವನ್ನು ಹೆಚ್ಚಿಸುತ್ತದೆ.

(೬) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು, ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ.

(೭) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ, ಮಕ್ಕಳು ಆನಂದದಿಂದ ಸೇವಿಸುತ್ತಾರೆ.

(೮) ಸ್ವಲ್ಪದರಲ್ಲಿ ಹೇಳುವುದೆಂದರೆ, ಡೋಂಗರೇ ಇವರ ಬಾಲಾಮೃತವು ಬೆಳೆಯುವ ಮಕ್ಕಳಿಗೆ ಯೋಗ್ಯವಾದ ವಸ್ತುವು ಇರುವುದು.

ಮೂಲಕರು:—ಕೇ. ಟಿ. ಡೋಂಗರೇ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ಸಿಗುವುದು.

GUPTA MAHA MANTRA

ಅತ್ಯುತ್ಕೃಷ್ಟವಾಗಿಯೂ ಉಜ್ವಲವಾಗಿ

ಅತ್ಯಂತ ಕಷ್ಟಸಾಧ್ಯವಾದ ಎಂಥ ಉದ್ದೇಶವಾದರೂ ಇದನ್ನು ಉಚ್ಚರಿಸಿದ ಮಾತ್ರದಿಂದಲೇ, ಸಾಧಿಸುವುದು. ನಿಮಗೆ ಅಪೇಕ್ಷೆ ಇರುವವಳು ಚಿತ್ತಶುದ್ಧಿಯಿಂದಲೂ ಗರ್ವಿಷ್ಠಳಾಗಿಯೂ ಇದ್ದಾದರೂ ಅಳಿ, ಇದರಿಂದ ನಿಮ್ಮ ಬಳಿ ಸಾರುವಳು. ಇದು ಪರೀಕ್ಷೆಗಳಲ್ಲಿ, ವ್ಯಾಜ್ಯಸಾಜ್ಯಗಳಲ್ಲಿ, ಸೋಡ್ತಿಗಳಲ್ಲಿ ಜಯಲಾಭವನ್ನು ನಿಮಗೆ ಕೊಡಿಸುವುದಲ್ಲದೆ, ನಿಮಗೆ ಉದ್ಯೋಗ, ಅಭಿವೃದ್ಧಿ, ಪುತ್ರಸಂತಾನ ಮತ್ತೂ ಸಂಪತ್ತನ್ನೂ ಕೊಡುವುದು. ಅದು ನಿಮ್ಮನ್ನು ಆದೃಷ್ಟ ಶಾಲಿಯನ್ನಾಗಿಯೂ ಮಾಡುವುದು. ರುಪಾಯಿಗಳನ್ನು ಕಳುಹಿಸಿ, ಜಯಲಾಭ ಪಡೆಯಿರಿ. ಅಥವಾ ಅದು ಸುಳ್ಳೆಂದು ತೋರಿಸಿಕೊಟ್ಟು ಒಂದು ರೂಪಾಯಿಗಳ ಬಹುಮಾನ ಪಡೆಯಿರಿ. ಮೋಸಗಾರರ ಕುರಿತು ಜಾಗ್ರತೆ ಇರಲಿ.

PRASIDHA MANTRA ASHR
No. 45 P. O. Katrisarai.

ವಿಜ್ಞಾನ ವಿಷಯ

'ವಿಜ್ಞಾನಿ'

ಆಕಾಶ

ಸೂರ್ಯ, ಚಂದ್ರ, ಗುರು, ಶುಕ್ರ ಮೊದಲಾದ ಗ್ರಹಗಳು, ಶ್ವನ್ಯಾದಿ ನಕ್ಷತ್ರಗಳು, ಆಕಾಶಗಂಗೆ ಮತ್ತು ದುರ್ಬಿನಿನಿಂದ ೋಡಲು ಸಾಧ್ಯವಿರುವ ತೇಜೋಮೇಘಗಳೆಂಬ ನಕ್ಷತ್ರಗಳ ಯಿ ಇವೆಲ್ಲಾ ನಮಗೆ ಆಕಾಶದಲ್ಲಿ ಕಂಡುಬರುತ್ತವೆ. ಉಲ್ಕೆ ಳೂ ಧೂಮಕೇತುಗಳೂ ಯಾವಾಗಲಾದರೊಮ್ಮೆ ಕಾಣ ರುತ್ತವೆ. ಈ ಆಕಾಶಕ್ಕೆ ಖಗೋಲವೆಂಬ ಹೆಸರಿದೆ. ಇದನ್ನು ಾವು ಇಂದ್ರಜಾಲಿಕ್ಷನ್ನ ಆಟದ ಮನೆಯೆಂದು ಹೇಳಬಹುದು. ,ಹನಕ್ಷತ್ರಾದಿಗಳೆಲ್ಲಾ ಪರಸ್ಪರ ಆಕರ್ಷಣಶಕ್ತಿಯಿಂದ ಆಕಾಶ ಲ್ಲಿ ನಿಂತಿವೆ. ಆಕಾಶವು ಒಂದು ಬಾಣಲೆಯನ್ನು ಕವಚಿ ಾಕಿದಂತೆ ತೋರುವುದಲ್ಲವೇ? ನಾವು ನೋಡುವಾಗ ಆಕಾ ವು ಭೂಮಿಗೆ ಮುಟ್ಟುವಂತೆ ಕಾಣುವ ಸ್ಥಳಕ್ಕೆ ಕ್ಷಿತಿಜವೆಂದು ಸರು. ನಾವು ನಿಂತುಕೊಂಡಾಗ ಈ ಕ್ಷಿತಿಜಕ್ಕೂ ನಮಗೂ ೫ ್ಮಲು ದೂರವೂ ಕೂತುಕೊಂಡಾಗ ೨-೩ ಮೈಲು ದೂರವೂ ದೆ. ನಾವು ಎತ್ತರದಲ್ಲಿ ನಿಂತರೆ ೨೦-೩೫ ಮೈಲು ದೂರದ ರೆಗೂ ನೋಡಬಹುದು.

ಆಕಾಶದ ವಿಷಯದಲ್ಲಿ ಜ್ಞಾನವಾಗಬೇಕಾದರೆ ನಾವು ನ್ಮ ಕಲ್ಪನಾಶಕ್ತಿಯನ್ನು ಬಲಪಡಿಸಿಕೊಳ್ಳಬೇಕು. ನಾವೇ ಕ್ಷಿಣೋತ್ತರ ದಿಕ್ಕುಗಳನ್ನು ಕಲ್ಪಿಸಿಕೊಂಡು ಆಕಾಶವು ಒಂದು ಟಕದ ಪರದೆಯಂತೆ ಎಂದು ತಿಳಿಯಬೇಕು. ಆಕಾಶವು ಂದು ಪದಾರ್ಥವಲ್ಲ. ಭೂಮಿಯ ಮೇಲಿನ ವಾತಾವರಣದ ೀಲೆ ಸೂರ್ಯಕಿರಣಗಳು ಬೀಳುವುದೇ ಆಕಾಶವು ನೀಲವಾಗಿ ಣಲಿಕ್ಕೆ ಕಾರಣ. ವಾತಾವರಣದ ನೀಲಿ ಗೌಸಣಿಕೆಯಿಲ್ಲದಿ ತಿದ್ದರೆ ನಾವು ಆಕಾಶದಲ್ಲಿ ಇನ್ನೂ ಎಷ್ಟೋ ನಕ್ಷತ್ರಗಳನ್ನು ಣಬಹುದಾಗಿತ್ತು.

ಆಕಾಶದಲ್ಲಿ ಸೂರ್ಯನೇ ಕೇಂದ್ರಬಿಂದುವಾಗಿ ಆತನ ುತ್ತಲೂ ಭೂಮಿ, ಗುರು, ಶುಕ್ರ, ಶನಿ, ಮಂಗಳ, ಯುರೇ ಸ್, ನೆಪ್ಚೂನ್ ಮೊದಲಾದ ಗ್ರಹಗಳು ತಿರುಗುತ್ತವೆ. ಇವು ಗೆ ಸ್ವಂತಪ್ರಕಾಶವಿಲ್ಲ. ಸೂರ್ಯನ ಬೆಳಕು ಪ್ರತಿಫಲಿಸಿ ರವಾಗಿ ಪ್ರಕಾಶಿಸುತ್ತವೆ. ನಕ್ಷತ್ರಗಳಿಗೆ ಸ್ವಂತ ಪ್ರಕಾಶವಿರು ದರಿಂದ ಅವು ಮಿನುಗುಟ್ಟುತ್ತವೆ.

ನಕ್ಷತ್ರಗಳು ತಳಪಳನೆ ಹೊಳೆಯುವುದಕ್ಕೆ ಅದೊಂದು ರಣವಿದೆ. ಅದೇನೆಂದರೆ, ವಾತಾವರಣ ಎಲ್ಲಾ ಭಾಗದಲ್ಲಿ ುದೇ ವಿಧದಿಂದಿರದೆ ಕೆಲವೆಡೆ ದಪ್ಪವಾಗಿಯೂ ಕೆಲವೆಡೆ ತೆಳು ವಾಗಿಯೂ ಇರುತ್ತದೆ. ಇದರಿಂದ ನಕ್ಷತ್ರಗಳ ಕಿರಣಗಳು ತ್ರಗಳಾಗಿಯೂ ಸರಳಗಳಾಗಿಯೂ ಬೀಳುವುದರಿಂದ ನಕ್ಷತ್ರ [illegible] ತಳತಳಿಸಿ ಮಿಂಚಿದಂತೆ ಕಾಣುತ್ತವೆ. ಚಳಿಗಾಲದಲ್ಲಿ ಾತಾವರಣವು ಹೆಚ್ಚು ಸ್ವಚ್ಛವಾಗಿರುವುದರಿಂದ ನಕ್ಷತ್ರಗಳು ಚ್ಚು ಪ್ರಕಾಶಿಸುತ್ತವೆ.

ಸೂರ್ಯ, ಚಂದ್ರ, ಭೂಮಿ, ಗ್ರಹ ಮೊದಲಾದುವುಗಳ ಿಯು ಒಂದೇ ರೀತಿಯಾಗಿಲ್ಲ. ಅವಕ್ಕೆಲ್ಲಾ ಬೇರೆ ಬೇರೆ ಗಳಿವೆ. ಭೂಮಿಯು ದಿನಕ್ಕೊಂದು ಸಲ ತನ್ನ ಅಕ್ಷ ಳಗೇನೆ ಸುತ್ತುವುದರಿಂದ ನಮಗೆ ರಾತ್ರಿಹಗಲುಗಳಾಗು [illegible] ಮತ್ತು ಭೂಮಿಯು ಸೂರ್ಯನ ಸುತ್ತಲೂ ತಿರುಗು ದ ಋತುಭೇದಗಳಾಗುತ್ತವೆ. ಭೂಮಿಯು ಸೂರ್ಯ ದು ಸುತ್ತು ತೆಗೆಯಬೇಕಾದರೆ ಒಂದು ವರ್ಷ ತಗಲು ದರೆ ವಿಶ್ವದಲ್ಲಿ ೧೮ ಕೋಟಿ ಮೈಲು ವರ್ತುಲವ್ಯಾಸ ಮಿಯು ಸಂಚರಿಸುತ್ತದೆ. ನಕ್ಷತ್ರಗಳ ಮಾನದಿಂದ ೧೮ ಕೋಟಿ ಮೈಲುಗಳು ನಮ್ಮ ಒಂದು ಫರ್ಲಾಂಗಿನಷ್ಟು ಲ್ಲದುದರಿಂದ ಭೂಮಿಯು ವಿಶ್ವದ ಯಾವ ಭಾಗದಲ್ಲಿದ್ದರೂ ತ್ರಗಳು ಒಂದೇ ಎಡೆಯಲ್ಲಿದ್ದಂತೆ ತೋರುತ್ತವೆ.

ೂರ್ಯನು ಒಂದು ಮೂರ್ತಿಯಂತಿದ್ದು ಭೂಮಿಯು ಂದೆ ತಿರುಗುವ ಭಕ್ತನಂತಿದೆ. ಹೀಗೆ ಭಕ್ತನಂತೆ ಭೂಮಿ ು ಸೂರ್ಯನಿಗೆ ಪ್ರದಕ್ಷಿಣೆ ಮಾಡುವಾಗ ಒಮ್ಮೊಮ್ಮೆ ಸೂ ರ್ಯನು ನಮಗೂ ಅಶ್ವಿನೀ ನಕ್ಷತ್ರಗಳಿಗೂ ಮಧ್ಯೇ ಬರುವನು, ಲ್ಲಿಂದ ಭರಣಿಗೆ ದಾಟುವನು; ಆಗ ಸೂರ್ಯನು ಭರಣಿಗೆ ೋದನೆನ್ನುವೆವು. ಹೀಗೆ ಸೂರ್ಯನ ಚಲನಾಮಾರ್ಗಕ್ಕೆ ಕ್ರಾಂತಿ ತ್ತನೆಂದು ಹೆಸರು.

ಚಂದ್ರನು ಭೂಮಿಯ ಸುತ್ತಲೂ ತಿರುಗುತ್ತಿರುವನು. ಆದು ಂದ ಆಕಾಶದಲ್ಲಿ ತಿರುಗಿದಂತೆ ಕಾಣುವನು. ಚಂದ್ರನು ಕೂಡ ್ರ ಕಡಮೆ ಸೂರ್ಯನ ಕ್ರಾಂತಿವೃತ್ತವನ್ನೇ ಅನುಸರಿಸಿ ನಕ್ಷತ್ರದಿಂದ ಇನ್ನೊಂದು ನಕ್ಷತ್ರಕ್ಕೆ ದಾಟುತ್ತಾ ೨೭ ದಿನಗಳಲ್ಲಿ ನಕ್ಷತ್ರಮಾಲೆಯನ್ನು ಪೂರ್ಣಗೊಳಿಸುವನು. ಪೂರ್ಣಿ ಮೆಯಾಗಲು ಇನ್ನೂ ೨॥ ದಿನಗಳು ಬೇಕಾಗುವುವು. ಭೂಮಿಯು ತುಸು ದೂರ ಹೋಗುವುದೇ ಇದಕ್ಕೆ ಕಾರಣ. ಸೂರ್ಯ ಚಂದ್ರರ ಬೀದಿಗಳು ಒಂದನ್ನೊಂದು ಭೇದಿಸುವ ಎರಡು ಕೂಟ ಗಳಿಗೆ ರಾಹುಕೇತುಗಳೆಂದು ಹೆಸರು.

ಆಕಾಶವು ಸ್ವಚ್ಛವಾಗಿರುವ ರಾತ್ರಿಯಲ್ಲಿ ಒಂದು ಬಿಳಿ ಮುಸುಕು ಪ್ರವಾಹವು ಆಕಾಶದಲ್ಲಿ ಹರಿದಂತೆ ಕಾಣುವುದು. ಇದಕ್ಕೆ ಆಕಾಶಗಂಗೆ (Milky way) ಎಂದು ಹೇಳುವರು. ಬರಿ ಕಣ್ಣಿಗೆ ಮಾತ್ರ ಹಾಲಿನ ಹರಿಯಂತೆ ಕಾಣುವ ಈ ಪ್ರವಾಹವನ್ನು ದುರ್ಬಿನಿನಿಂದ ನೋಡಿದರೆ ಅಸಂಖ್ಯ ನಕ್ಷತ್ರ ಗಳನ್ನು ಕಾಣಬಹುದು. ದೊಡ್ಡ ದೊಡ್ಡ ನಕ್ಷತ್ರಗಳೆಲ್ಲಾ ಈ ಆಕಾಶಗಂಗೆಯ ಸವಿಾಪದಲ್ಲೇ ಇವೆ. ಈ ಆಕಾಶಗಂಗೆ ಯಂತೆ ಕಾಣುವ ಇತರ ಮಂಜಿನ ರಾಶಿಗಳೂ ನಕ್ಷತ್ರಪುಂಜಗಳೇ ಆಗಿವೆ.

ಧೂಮಕೇತುಗಳು ಅಥವಾ ಬಾಲಚುಕ್ಕೆಗಳು ಯಾವಾ ಗಲಾದರೊಮ್ಮೆ ಆಕಾಶದಲ್ಲಿ ಮೂಡಿ ನಾಲ್ಕಾರು ತಿಂಗಳು ಆಕಾಶದಲ್ಲಿ ಕಾಣುವುವು. ದಕ್ಷಿಣ ಧ್ರುವದಲ್ಲಿ ಮಾತ್ರ ಪ್ರತಿ ದಿನ ಇಂತಹ ಸಾವಿರಾರು ಬಾಲಚುಕ್ಕೆಗಳು ಕಾಣಿಸಿಗುವುವೆಂದು ಅಮೇರಿಕದ ಕುಕ್ ಸಾಹೇಬರು ಬರೆಯುತ್ತಾರೆ. ಇನ್ನು ಉಲ್ಕೆ ಗಳೆಂಬ ಕಿಡಿಗಳು ಆಕಾಶದಲ್ಲಿ ಇತ್ತಿಂದತ್ತ ಹಾರಾಡುತ್ತಿವೆ. ಇವು ಒಂದೆರಡು ಸೆಕುಂಡು ಮಾತ್ರ ಹೊಳೆಯುವುವು. ಜನರು ನಕ್ಷತ್ರ ಬೀಳುವುದೆಂದು ಹೇಳುವುದು ಇದನ್ನೇ ಆಗಿದೆ. ಇವು ವಿಶ್ವದಲ್ಲಿ ಆಕರ್ಷಣೆಗೊಳಪಟ್ಟ ಬಂಡೆ ಕಲ್ಲುಗಳಂತೆ. ಇವು ಅತ್ತಿತ್ತ ಚಲಿಸುವಾಗ ಹವೆಯ ಘರ್ಷಣದಿಂದ ಹೀಗೆ ಹೊಳೆಯುತ್ತವೆ. ಕೆಲವು ವೇಳೆ ಇವು ಸಂಪೂರ್ಣ ಸುಟ್ಟುಹೋಗುತ್ತವೆ. ಕೆಲವು ಸಾರಿ ಭೂಮಿಗೂ ತಲಪುವುದಿದೆ. ವಸ್ತುಸಂಗ್ರಹಾಲಯಗಳಲ್ಲಿ ಇಂತಹ ಬಂಡೆಗಳ ಚೂರನ್ನಿಟ್ಟಿರುವರು. ಇದೆಲ್ಲಾ ಆಕಾಶದ ವಿಷಯವಾಗಿ ತೋರ ಮಟ್ಟಿನ ಜ್ಞಾನವಾಗಿದೆ. ಹೆಚ್ಚಿನ ವಿಷಯ ಗಳಿಗೆ ದೊಡ್ಡ ದೊಡ್ಡ ಗ್ರಂಥಗಳನ್ನೋದಬೇಕು. ಮುಂದಿನ ಲೇಖಾಂಕಗಳಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳ ವಿಷಯವಾಗಿ ಬರೆಯಲಾಗುವುದು.

ಕುಡಿಯಿರಿ ನಿಮ್ಮ ದಾಹವನ್ನು ನಿವಾರಿಸಿಕೊಳ್ಳಿ

ಕಣನ್ ದೇವನ್ ಟೀಯಿಂದ.

ಟ್ರೇಡ್ ಮಾರ್ಕ್

ಒತ್ತಾಯಪಡಿಸಿರಿ

ಕಣನ್ ದೇವನ್ ಟೀ

ಸಿಗುವಂತೆ

ನೀವು ಎಂದೂ

ಪಶ್ಚಾತ್ತಾಪ ಪಡಲಾರಿರಿ.

SOLE S. K. AGENTS:

THE KERALA TEA SYNDICATE,

PONANI - MALABAR.

ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಮುಖ್ಯ ಕಚೇರಿ:—ಮದ್ರಾಸು. ಪೋಸ್ಟ್ ಬಾಕ್ಸ್ ನಂಬ್ರ 182.

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.

'ರಿಜಿಸ್ಟ್ರಾರ್ ಆಫ್ ಕೊ-ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತ್ತುಗಳು ಅತ್ಯಾಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ. ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಏಜಂಟರು ಬೇಕು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಜಂಟರಾಗಲಿಚ್ಛಿಸುವವರು ಈ ವಿಳಾಸಕ್ಕೆ ಬರೆಯಬೇಕು:—ಕೆ. ಶಂಕನಾರಾಯಣ ಕಿಣಿ, ಡಿಸ್ಟ್ರಿಕ್ಟ್ ಆರ್ಗನೈಜರ್, ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್, ಮೂರುತಿ ವೀಥಿಕಾ, ಉಡುಪಿ, (ದ. ಕ).

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಕನ್ವೀನರ್, ಕೂರ್ಗ್ ಲೋಕಲ್‌ಬೋರ್ಡ್ ಆಫ್ ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ, C/o ಕೂರ್ಗ್ ಕೋ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್, ಮಡಿಕೇರಿ, ಕೊಡಗು.

(3) ವೈ. ಶ್ರೀನಿವಾಸಯ್ಯ, ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ-ಒಪರೇಟಿವ್ ಯೂನಿಯನ್ ಆಫ್ ಮೈಸೂರು ಸಿಟಿ, ಮೈಸೂರು.

ವಿದೇಶ

ಇಟಲಿ ಅರಸರು, ಹಿಂದೆ ವಾರ್ತೆ ಇದ್ದಂತೆ, 'ಇತಿಯೋಪಿಯದ ಚಕ್ರವರ್ತಿ'ಗಳೆಂಬ ನಾಮಕರಣ ಮಾಡಿಕೊಳ್ಳದೆ 'ಇಟಲಿ ಸಾಮ್ರಾಟ'ರೆಂದೇ ಕರೆಯಿಸಿಕೊಳ್ಳುವರೆಂದು ಇಂಡಿಸ ಸಮಾಚಾರ.

ಯುವಕಯುವತಿಯರಲ್ಲಿ ವಿಪರೀತವಾದ ಚಿತ್ತ ವಿಕಾರವನ್ನು ಉಂಟುಮಾಡುವ ಪುಸ್ತಕಗಳು ಪ್ರಕಟವಾದಲ್ಲಿ, ಅಂತಹವುಗಳ ಮೇಲೆ ತಕ್ಕ ಶಿಕ್ಷಾಕ್ರಮವನ್ನು ಜರುಗಿಸತಕ್ಕುದೆಂದು ಬ್ರಿಟನಿನಲ್ಲಿ ನಿರ್ಧರಿಸಲಾಗಿದೆ.

ದುರದೃಷ್ಟಗಳು ಒಂದರ ಮೇಲೊಂದಾಗಿ ಬಂದು ಮನುಷ್ಯಜೀವನವನ್ನು ಎಂತಹ ಕ್ಲೇಶಮಯವಾಗಿ ಮಾಡುವುದೆಂಬುದಕ್ಕೊಂದು ನಿದರ್ಶನ— ಇಂಗ್ಲೆಂಡಿನಲ್ಲಿ ಬೆಂಜಮಿನ್ ಎಲಿಯವ್ ಪೊಟ್ಟರ್ ಎಂಬಾತ. ಆವನ ಹೆಂಡತಿ ಒಂದು ಆಸ್ಪತ್ರೆಯಲ್ಲಿ; ಮಗ ಮತ್ತೊಂದು ಚಿಕಿತ್ಸಾಲಯದಲ್ಲಿ; ಇವನು ತಾನೇ, ಹಣದ ಅಡಚಣೆಯಿಂದ, ಕೆಲ ಪೌಂಡುಗಳನ್ನು ಕದ್ದು, ಹಾಗೆ ಮಾಡಿಸುದು ಅನ್ಯಾಯವಾಯಿತೆಂದು ಆ ಮೇಲೆ ತಿಳಿದು,ಆತ್ಮಹತ್ಯಕ್ಕಾಗಿ ಯತ್ನಿಸಿ, ರೈಲಿನ ಅಡಿಗೆ ಬಿದ್ದು, ಅಲ್ಲಿಯೂ ಸಾಯದೆ, ಗಾಯಗಳಾಗಿ, ತಾನೂ ಆಸ್ಪತ್ರೆಗೆ ತೆರಳಿದುದು ಬೇರೆ. ಅಲ್ಲಿಂದ ಕಳುವಿನ ಚಾರ್ಜು ಏರ್ಪಟ್ಟು, ಕೋರ್ಟ್ ವಿಚಾರಣೆ ಬೇರೆ. ಈ ದುರದೃಷ್ಟಗಳಿಗೆ ಮಿತಿ ಎಲ್ಲಿ?

ಕ್ವಿಬೆಕ್ ನಗರದಲ್ಲಿ ವ್ಯಭಿಚಾರದೋಷವು ವಿಪರೀತವಾಗಿ ಹಬ್ಬುತ್ತಿರುವ ಕಾರಣ, ಲಾವಲ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ತಾವೇ ಈ ದುರಾಚಾರವನ್ನು ಅಡಗಿಸಲು ಸೊಂಟ ಕಟ್ಟಿದ್ದಾರೆ.

ವ್ಯಭಿಚಾರದ ದುರಾಚಾರವನ್ನು ನಿರ್ಮೂಲ ಮಾಡುವ ಒಂದು ಬಿಲ್ಲು ಫ್ರಾನ್ಸ್ ಸರಕಾರದಿಂದ ಅಂಗೀಕರಿಸಲಾಗಿದೆ.

ಜಲಬಲ, ನೆಲಬಲ, ವಾಯುಬಲಗಳಲ್ಲಿ ಮುಹಿಳೆಯರಿಗೆ ತಕ್ಕ ಶಿಕ್ಷಣ ಕೊಡುವಂತೆ, ಫ್ರಾನ್ಸಿನಲ್ಲಿ ಆಲೋಚನೆ ನಡೆಯುತ್ತಿದೆ.

ಲಂಡನಿನಲ್ಲಿ ನಡೆಯುವ ಕಾರನೇಶನಿನ ದರ್ಶಕರ ಸೌಕರ್ಯಕ್ಕಾಗಿ, ಹಡಗುಗಳಲ್ಲಿಯೇ ಪಾನ—ಭೋಜನ—ವಸತಿಗಳ ಏರ್ಪಾಡುಗಳುಳ್ಳ ಹೊಟೆಲುಗಳು ಸ್ಥಾಪಿಸಲ್ಪಡುವುವು.

ಎಸೆಕ್ಸ್ ಪ್ರಾಂತದಲ್ಲಿ ಒಂದು ಮದುವೆ—ಒಬ್ಬನಲ್ಲಿ ನಾಲ್ವತ್ತು ವರ್ಷಗಳಿಂದಲೂ ಪ್ರೇಮವಿರಿಸಿದ್ದ ಒಬ್ಬ ವಿಧವೆ ಆ ವಿಧುರನನ್ನು ಮದುವೆಮಾಡಿಕೊಂಡಳು; ಮತ್ತೂ ಆಕೆಯ ಮಗ ಆ ವಿಧುರನ ಮಗಳನ್ನೇ ಲಗ್ನವಾದನು.

ಬ್ರಿಟನಿನಲ್ಲಿ ಪುಡಿ ಎಳೆಯುವ ಅಭ್ಯಾಸ ಹೆಚ್ಚುತ್ತ ಬರುತ್ತಿದೆ.

ಬ್ರಿಟಿಶ್ ಸರಕಾರವು ಇನ್ನಷ್ಟು ಹೆಚ್ಚು ಮಂದಿ ಗುಪ್ತಚಾರರನ್ನು ನೇಮಿಸಲು ನಿರ್ಧರಿಸಿ ಆ ಸಂಬಂಧ ಹೆಚ್ಚಿಗೆಯಾಗಿ ೧ ಲಕ್ಷ ಪೌಂಡುಗಳನ್ನು ವಿನಿಯೋಗಿಸುವರು.

ವಾರ್ಸಾದ ಪ್ರತಿಯೊಬ್ಬ ನಾಗರಿಕನೂ ಅಲ್ಲಿ ಇಲಿ ಕೊಲ್ಲುವ ಚಳವಳಿದ ವಾರದಲ್ಲಿ ಭಾಗವಹಿಸಬೇಕಾಗಿದೆ. ಅಲ್ಲದಿದ್ದರೆ, ಅಂತಹವರಿಗೆ ಭಾರೀ ಜುಲ್ಮಾನೆ ಹಾಕುವುದು ಅಲ್ಲಿನ ಕಾನೂನು.

ಫ್ರೆಂಚಿನ ಯುದ್ಧದ ಸಂಬಂಧ ಇದುವರೆಗೆ ಸತ್ತವರು ಸುಮಾರು ೨ ಲಕ್ಷ ಮಂದಿ; ಅದ ಖರ್ಚು ಸುಮಾರು ೩೩,೦೦೦,೦೦೦ ಪೌಂಡುಗಳು; ಇದರಲ್ಲಿ ಯುದ್ಧರಂಗದಲ್ಲಿ ಸತ್ತವರು ಸುಮಾರು ೫೦,೦೦೦; ವಿಕ್ಕಳವರಲ್ಲಿ ಸುಮಾರು ೧೫೦,೦೦೦ ಮಂದಿ ವಿಚಾರಣೆ ಇಲ್ಲದೆ ವಧಿಸಲ್ಪಟ್ಟವರು; ಅಥವಾ ಜೈಲಲ್ಲಿ ಮೃತರಾದವರು.

ಬ್ರಿಟನಿನಲ್ಲಿ ಜನನ ಸಂಖ್ಯೆ ಕಡಿಮೆಯಾಗುತ್ತಿದೆ. ಇನ್ನು ಕಂಡು ಗಾಬರಿಯಾಗಿ ಅಲ್ಲಿನ ಆರೋಗ್ಯ ಶಾಖೆಯ ಮಂತ್ರಿಗಳು ಜನನ ಸಂಖ್ಯೆ ಹೆಚ್ಚುವಂತೆ ಪ್ರೋತ್ಸಾಹಿಸಲಿರುವ ಕೆಲವು ಯೋಜನೆಗಳನ್ನು ತಯಾರಿಸುತ್ತಿದ್ದಾರೆ.

ಜಪಾನಿನಲ್ಲಿ ವಿಮಾನದ ಸಂಚಾರವನ್ನು ವೃದ್ಧಿಗೊಳಿಸುವ ಯೋಜನೆಯು ನಡೆದಿದೆ. ಇದಕ್ಕೆ ಹಣ ಬೇಕು. ಅಲ್ಲಿನ ಸೇವಿಂಗ್ಸ್ ಬೇಂಕ್ ಶೇವಣಾತಿಯ ಬಡ್ಡಿಯನ್ನು ೩ ವರ್ಷಗಳ ವರೆಗೆ ಜನರು ಕೊಟ್ಟರೆ ಆ ಕಾರ್ಯವು ಸಾಗಬಹುದೆಂದು ಅದಕ್ಕಾಗಿ ಈಗ ತರದೂದು ನಡೆಯುತ್ತಿದೆ.

ಡಿಟೆಕ್ಟಿವ್ ಪೋಲೀಸ್ ಶಾಖೆಯಲ್ಲಿ ಶಿಕ್ಷಣ ಪಡೆಯಲು ಶಂಘಾಯಿಯ ೩೪ ಹುಡುಗಿಯರು ಪೋಲೀಸ್ ಶಾಖೆಗೆ ಸೇರಿದ್ದಾರೆ.

ಸ್ಪೈನಿನಲ್ಲಿ ತೀವ್ರಗತಿ ಯುದ್ಧವು ನಡೆಯುತ್ತಿದೆ. ಬಾಂಬಿನ ಸುರಿಮಳೆಯಿಂದ ಭವ್ಯ ಮಂದಿರಗಳು ಭಸ್ಮ! ಪ್ರಾಣಾಹುತಿಗಳೆಷ್ಟೋ! ಅಲ್ಲದೆ ಕೈದಿಗಳ ವಧಾಕಾರ್ಯವೂ, ಸುಸಿಗಳನ್ನು ಕೊಂದಂತೆ ಸರಾಗವಾಗಿ ಸಾಗುತ್ತಲೇ ಇದೆ. ಪ್ರಿನ್ಸ್ ಆಲ್ಫಾನ್ಸೋ, ಸಿನೋರ್ ಕೆಬೆಲ್ಲೆರೋವಿನ ಮಗ,—ಮೊದಲಾದವರನ್ನೆಲ್ಲ ಪಂಗಡಗಾರರು ಆಗಲೇ ಮುಗಿಸಿದರೆಂದು ಸುದ್ದಿ.

ಅವನು ಎನ್ನನ್ನಾದಯ ನೆಮ್ಮದಿಸಿತಕ್ಕದ್ದೆಂದು ನಾನು ನನ್ನಿಂದಾದಷ್ಟು ಪ್ರಯತ್ನಮಾಡಿದೆನು ಆದರೆ.....
ಪ್ರಿಯಾ, ನಿನ್ನೊಡನೆ ನಾ ನೆಟ್ಟ ಒದಂತೆಳ್ಳುಳಿ! ನೀವು ಅದನ್ನು ತುಟಿಯಿ ನೋಡಲೂ ಇಲ್ಲವಲ್ಲ.
ಛೇಂಲೆ ವಡಬೇಡಿ. ಹೊರ್ಲಿಕ್ಸ ಆಹಾರವನ್ನು ಸರಿಯಾಗಿ ತೆಗೆದುಕೊಳ್ಳುವುದು. ಕೂಡಲೆ ಅದನ್ನು ಇದರಿಂದ ಕೊಡಿಸಬೇಕು.
ನಂತರ
ಇದೇನಿದು? ಹೊರ್ಲಿಕ್ಸ್! ಅದು ಬೆನ್ನಾಗಿದೆ. ಕೆಲವು ಸಪ್ತಾಹಗಳ ನಂತರ ನಾನೂ ಸೇವಿಸುವೆನು
ಅಗಾಧದಿ
ಎದ್ದು ಕಾಣಿಸುತ್ತಿರುವುದೇ ಸಂತೋಷದಾಯಕವಾಗಿದೆ.
ಹಾರು ಪ್ರಿಯೇ. ಹೊರ್ಲಿಕ್ಸ ಅಲ್ಪಸ್ವಲ್ಪ ನಾವೇನು ಮಾಡುತ್ತಿದ್ದೆವೋ ಅವರೆಗೆ ತಳಿಯುವುದು.

ಪಥ್ಯವೆಂಥದೆಂಬುದೇ ಪ್ರಶ್ನೆಯಾದಾಗ

ರೋಗಿಗಳು ಆರೋಗ್ಯ ಹೊಂದಲಿಕ್ಕೆ ಅತ್ಯಾವಶ್ಯಕವಾಗಿರುವ ಅದೇ ಪಥ್ಯದ ಆಹಾರವನ್ನೇ ತೆಗೆದುಕೊಳ್ಳಲು ತಿರಸ್ಕರಿಸುವ ಮೂಲಕ ಅವರ ಚಿಕಿತ್ಸಾಕಾರ್ಯವೇ ಬಹು ಕಷ್ಟತರದ್ದಾಗುವುದು. ಲಘುವಾದ ಮತ್ತೂ ಸುಲಭದಲ್ಲಿ ಜೀರ್ಣವಾಗಬೇಕಾದ ಪಥ್ಯದ ಆಹಾರವು ಅಗತ್ಯವಾಗಿರುವಾಗ, ಡಾಕ್ಟರರು ಹೊರ್ಲಿಕ್ಸನ್ನು ಶಿಫಾರಸು ಮಾಡುತ್ತಾರೆ. ಅದು ಸಂಪೂರ್ಣವಾಗಿಯೂ ಪುಷ್ಟಿದಾಯಕವಾಗಿದೆ; ಸುಲಭದಲ್ಲಿ ಅರಗುತ್ತದೆ; ಮತ್ತೂ ನಿಜವಾಗಿಯೂ, ಶೀಘ್ರವಾಗಿಯೂ ಹೊಸ ಚೈತನ್ಯವನ್ನು ಉಂಟುಮಾಡುತ್ತದೆ. ಅದು ಹಸಿವೆಯನ್ನು ಉತ್ತೇಜಿಸಿ, ಆರೋಗ್ಯಸ್ಥಿತಿಯಲ್ಲಿನ ಆಹಾರದ ಅಭಿಲಾಷೆಯನ್ನು ಪ್ರೇರೇಪಿಸುತ್ತದೆ.


ಬಿಸಿಯೂಗಿಯೂಗಲಿ ತಣ್ಣಗಾಗಲಿ ಜೀಗ ತಯಾರಿಸಬಹುದು. ಹೊರ್ಲಿಕ್ಸ್‌ವಿುಕ್ಸ್‌ರಿಂದ ಮಾಡಿದ ರಂತೂ ಬಲುರುಚಿ. ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ. ಇಲ್ಲವಾದರೆ ೧೪ ಆಣೆ ಸ್ಟಾಂಪನ್ನು ಪೋ. ಬಾ. ೩೨೫೯ ಕಲಿಕತ್ತೆಗೆ ಕಳಿಸಿ ಕಳುಹಿಸಿಕೊಡುತ್ತಾರೆ.
HORLICKS MALTED MILK

ಹೊರ್ಲಿಕ್ಸ ಹಸಿವೆಯನ್ನು ಉಂಟುಮಾಡುವುದು

CHEAPEST RATE
VALUE BACK IF DISAPPROVED
DECENT, STRONG, ACCURATE & STYLISH W/WATCHES GTD 3 YEARS. ROUND NICKEL 2/14/-, RADIUM DIAL 3/12/-; GOLDEN 3/14/-. SQUARE NICKEL 4/6/-, GOLDEN 4/14/-. RECTANGULAR NICKEL 5/4/-, GOLDEN 6/-. VERY SMALL ROUND NICKEL 5/-, GOLDEN 5/8/-. P/POSTAGE -/7/-
NOT FREE ON A. C.T.CO. 185 MANICKTOLA ST, CALCUTTA



Do you wish to increase your Prospects?

FREE

Then Don't miss this opportunity of taking the Agency of our Company To enable the poorest of the poor to be insured, we have introduced our latest Schemes of without Medical Examination. The Monthly premiums are from Annas 8 to Rs. 2/- only. A Clock as shown aside, will be given absolutely FREE to every Policy-holder, to collect your premium amount as well as to show you correct timing.

Apply to-day for Agency:—

The Gold-Mohur Provident Insurance Co., Ltd.,
22, Apollo Street, Fort, BOMBAY.

4, 24—11.

IMPERIAL BANK OF INDIA.
ಇಂಪೀರಿಯಲ್ ಬೆಂಕ್ ಒಫ್ ಇಂಡಿಯಾ.

Reserves exceed Rs. 5 crores. ಕ್ಷೇಮನಿಧಿಯು ರೂ. 5 ಕೋಟಿ ಮಿಕ್ಕಿದೆ.

More than 200 branches and offices throughout India & Burma, a branch in Colombo and a branch in London.

Correspondents all over the world.

Every type of Banking business, both inland and foreign, transacted.

Advances on Government securities and gold at very fine rates.

For full particulars apply to the MANGALORE BRANCH.

ಭಂಗಾರದ ನಿಗಗಳ ಈಡಿನ ಮೇಲೆ ಬಹು ಕಡಿಮೆ ಬಡ್ಡಿಯಲ್ಲಿ ಸಾಲಗಳನ್ನು ಕೊಡಲಾಗುವುದು.

ಸಾಲದ ಮೊಬಲಗು ನೂರಕ್ಕೆ ಕಡಿಮೆಯಾದರೆ ವರ್ಷಕ್ಕೆ ಸೇಕಡಾ 7ರ ಬಡ್ಡಿ.

100ರಿಂದ 499ರ ವರೆಗೆ ಸೇಕಡಾ 6ರ ಬಡ್ಡಿ. 500 ಯಾ 500ಕ್ಕೆ ಮೇಲ್ಪಟ್ಟು ಸೇಕಡಾ 5ರ ಬಡ್ಡಿ.



ತನ್ನ ಕಾರ್ಯವನ್ನು ತಾನೇ ದೊಡ್ಡದೆಂದು ಭಾವಿಸದಿರುವುದು ನಿಜವಾದ ಮಾನವಲಕ್ಷಣ.

ಸೂಕ್ತಿಮಾಲೆ.

XVIII] ಮಂಗಳೂರು, ತಾ. ೨೪—೧೧—೧೯೩೬ [೬೭

ರಜಿಲ ಧಾತು ಸಂ। ಕಾರ್ತಿಕ ಶು। ೧೦ ಭೃಜವಾರ

ಚುನಾವಣೆಯ ಸುಖಸ್ವಪ್ನ.

ಚುನಾವಣೆ ಬಹಳ ದೂರದಲ್ಲಿಲ್ಲ. ಗಾಳಿಯಲ್ಲೆಲ್ಲ ಸಾಂದ್ರವಾಗಿ ತುಂಬಿಕೊಂಡಿರುವುದೆಂದರೆ ಅದೇ ಮಾತೇ. ಎಲ್ಲಿ ನೋಡಿದರೂ ಕಲಕಲವು ಚುನಾವಣೆಯದೇ. ಈ ಕಾಳಗದ ರಂಗಸ್ಥಳಗಳ ಸಿದ್ಧತೆಗಳಿಗಾಗಲೇ ಆರಂಭವಾಗಿದೆ. ತೆರೆಮರೆಯ ಹಿಂದುಗಡೆಯಲ್ಲಿ ಏನೇನೋ ವ್ಯಾಪಾರಗಳು ಗುಪ್ತವಾಗಿ ನಡೆಯುತ್ತಿವೆ. ಸ್ನೇಹಿತರು ಸ್ನೇಹಿತರಾಗಿಯೂ, ಶತ್ರುಗಳು ಶತ್ರುಗಳಾಗಿಯೂ ಇನ್ನೂ ಇದ್ದಾರೆ. ಆದರೆ ಚುನಾವಣೆಯ ಮಹಾ ಶಕ್ತಿಯಿಂದ ಯಾವುದೇನಾಗುವುದೋ ಹೇಳಬರುವುದಿಲ್ಲ. ಒಗ್ಗಟ್ಟಿನ ಒಂದು ಮನೆ, ಚುನಾವಣೆಯ ದೆಸೆಯಿಂದ ಮುಗ್ಗಟ್ಟಿನ ನಾಲ್ಕು ಮನೆಗಳಾಗಬಹುದು;—ಸ್ನೇಹಿತಸ್ನೇಹಿತರಲ್ಲಿಯೇ ದ್ವೇಷವು ತಲೆದೋರಬಹುದು; ಶತ್ರುಗಳೂ ಒಂದಾಗಬಹುದು. ಇವೆಲ್ಲಾ ಚುನಾವಣೆಯ ಮಹಾತ್ಮೆ! ಯುದ್ಧರಂಗದಲ್ಲಿಯಾದರೆ ಶತ್ರುಗಳು ಯಾರೆಂದು ಗೊತ್ತು; ಸುಲಭದಲ್ಲಿ ಗುರುತಿಸಬಹುದು. ಅದೇ, ಚುನಾವಣೆಯ ಕ್ಷೇತ್ರದಲ್ಲಿ, ಎಷ್ಟು ಪುಟ್ಟಿನ ಪಂಚನೆಯ, ಕೃತ್ರಿಮಸಂಧಾನದ ದೃಶ್ಯಗಳು ಅಭಿನೈಸಲ್ಪಡುವುವೆಂದರೆ,—ಇದರಲ್ಲಿ ನಿಜಮಿತ್ರರಾರು, ಹಿತಶತ್ರುಗಳಾರು ಎಂದು ಕಂಡುಹಿಡಿಯುವುದೇ ಸಾಮಾನ್ಯ ಬುದ್ಧಿಗೆ ಅಸಾಧ್ಯವಾಗಿದೆ. ಏಜೆಂಟರ, ಸಬ್ ಏಜೆಂಟರ ಸೈನ್ಯವೊಂದು, ಎಂದಿನಂತೆ ಇಂದಿನ ಚುನಾವಣೆಯಲ್ಲಿಯೂ ಜೀವಾಳವೆನ್ನಿಸಿ, ಅದೂ ಆಗಲೇ, ಇನ್ನೇನು, ಸಿದ್ಧವಾಗಿಯೇ ನಿಂತಿದೆ. ಉಮೇದುವಾರರು ಯಾರು, ಅವರ ದುಡ್ಡಿನ ಬಲವೆಷ್ಟು, ಅವರು ತಮಗೆ ಅಕ್ಷತೆ ಕೊಡುವುದೆಂದು ಹೀಗೆಂದು ಬಾಯಿಕಳೆದುಕೊಂಡೇ ನಿಂತಿದೆ. ಏತನ್ಮಧ್ಯೆ, ಉಮೇದುವಾರರು, ಪಾಪ, ಓಟರರ ಪಟ್ಟಿಯನ್ನು ಬಾಯಿಪಾಠ ಪೂಡಿಕೊಂಡು, ಅವರ ಬಳಿ ಸಾರಿ, ಅವರಿಗೆ ನಾನಾ ಬಗೆಯ ಬಾಗಾಡ್ಡನಗಳನ್ನು ಪೂಡಲೂ, ಅವರಿಂದ ಓಟಿನ ಒಂದೇ ವಾಗಾಡ್ಡನ ಪಡೆಯಲೂ ಪ್ರಯತ್ನಿಸುತ್ತಿದ್ದಾರೆ. ಗಟ್ಟಿಗನಾದ ಪ್ರತಿಯೊಬ್ಬ ಉಮೇದುವಾರನೂ ಒಟ್ಟಿಗೆ ತಿಳಿದುಕೊಂಡಿರುವುದೆಂದರೆ ಇಷ್ಟೇ:—ಜಯ ತನಗೆ; ಅಪಜಯ ಇದಿರಾಳಿಗೆ. ಧನ್ಯೆ! ಆಶಾದೇವಿ! ನಿನ್ನ ಪ್ರಭಾವವೇನು ಸಾಮಾನ್ಯವೇ?

'ಗುಡ್ಡೆಗೆ ಗುಡ್ಡೆ ಅಡ್ಡ'ವೆಂಬಂತೆ, ಹೀಗೆ ಸಾಮಾನ್ಯ ಸಭಾಸದಸ್ಯರಾದರೇ ಸಾಕೆನ್ನುವ ಮಹನೀಯರೊಡನೆ, ಮಿನಿಸ್ಟರ್ ಪದವಿಯ ಮೇಲೂ ಕಣ್ಣಿಟ್ಟ ಮಹಾನುಭಾವರೆಷ್ಟು ಮಂದಿ ಇಲ್ಲ? ಅಂತಹವರಲ್ಲಿ ಒಬ್ಬರು ಶ್ರೀ. ಸತ್ಯಮೂರ್ತಿಗಳೆಂದೂ ತೋರುತ್ತಿದೆ. ಮುಂದೆ ಅವರು ಮಿನಿಸ್ಟರರಾಗುವಲ್ಲಿ, ನಮ್ಮ ವಿವಾದವೇನೂ ಇಲ್ಲ; ಆದರೆ ಕಾಂಗ್ರೆಸ್, ಆ ಮಂತ್ರಿಪದವಿಯ ಸ್ವೀಕಾರದ ಕುರಿತು ನಿರ್ಧರಿಸುವ ಮೊದಲೇ, ಇವರು ಅದರ ಸ್ವೀಕಾರವನ್ನು ಊಹನೆಯಿಂದ ಕಲ್ಪಿಸಿಕೊಂಡು, ಆ ಅನಿಶ್ಚಿತ ಭವಿಷ್ಯತ್ತಿನ ವಿಷಯದಲ್ಲಿಯೂ ಆಡಿರುವ ಕಂಠೋಕ್ತವಾದ ಮಾತುಗಳನ್ನು ನೋಡಿದರೆ, ತಮಾಷಿಯಾಗಿದೆ. ಚುನಾವಣೆಯ ಬಳಿಕ, ತಾವು ಮದ್ರಾಸ್ ಆಧಿಪತ್ಯದ ಮಿನಿಸ್ಟರರ ಗದ್ದಿಗೆಯನ್ನೇ ಏರುವಂತಾದರೂ ಕೂಡ, ಅವರು ಸರಕಾರದೊಡನೆ ಎಂದೂ ಸಹಕರಿಸಲಾರರಂತೆ. ಅಷ್ಟೇ ಅಲ್ಲ; ಬ್ರಿಟಿಶ್ ಸಿಂಹದ ಹುಳುಕು ಹಲ್ಲನ್ನೂ ಇವರು ಎಳೆದು ತೆಗೆಯುವರಂತೆ! ಈ ರೀತಿಯಾಗಿ ಇವರು, ಆ ಹುಳುಕು ಹಲ್ಲನ್ನು ಅಷ್ಟು ಸುಲಭವಾಗಿ ಎಳೆದು ತೆಗೆಯಲು ಸಾಧ್ಯವೆಂದು ನಂಬಿರಲು ಕಾರಣವೇನೆಂದರೆ—ಮದ್ರಾಸಿನ ಮಾನ್ಯ ಗವರ್ನರರೊಡನೆ ಒಮ್ಮೆ ಇವರು ಖಾಸಿಗೆಯಾಗಿ ಸಂಭಾಷಿಸಿದ ಕಾಲದಲ್ಲಿ, ಗವರ್ನರರು ಈ ಶಸ್ತ್ರಕ್ರಿಯೆಗೆ ಶಾಸನದ ಸಮ್ಮತಿಯುಂಟೆಂದು ಆಶ್ವಾಸನವನ್ನು ಇತ್ತುದೇ ಅಂತೆ! ಇದಕ್ಕೆ ತಾವು ಅಡ್ಡಿಯಾಗಿ ನಿಲ್ಲುವುದಿಲ್ಲವೆಂದು ಭರವಸೆಯ ಅಪ್ಪಣೆಯನ್ನೂ ಕೊಡಿಸಿದುದೇ ಅಂತೆ. ವಸ್ತುತಃ ಈ ಕಲ್ಪನೆಯು ಭಾವೀ ಮಂತ್ರಿಗಳ ಅಭಿಪ್ರಾಯದ ಮೇರೆಗೆ, ಬ್ರಿಟಿಶ್ ಸಿಂಹದ ಹಲ್ಲು ಕೀಳುವ ಒಂದು ರೀತಿಯು, ಪೋಲೀಸರಿಗೆಲ್ಲ ನೀವು ಖಾದಿ ಉಡುಪನ್ನೇ ಧರಿಸಬೇಕೆಂದು ಬಲಾತ್ಕರಿಸುವುದಾಗಿದೆ. ಆದರೆ ಇದರಲ್ಲಿಯಾದರೂ ಅಂತಹ ವಿಸ್ಮಯಕರವಾದ ಹೊಸ ಪರಿ ಏನಿದೆಯೋ ತಿಳಿಯದು. ಏಕೆ, ಬಲ್ಲಿರಾ? ನಮ್ಮ ಹಿಂದು ಸ್ಥಾನದ ಒಂದು ಪ್ರಾಂತದ ಒಬ್ಬ ಹಂಗಾಮಿ ಗವರ್ನರರು, ಇದೇ ಖಾದೀ ಉಡುಪಿನಲ್ಲಿಯೇ ಅಲ್ಲವೇ, ರಾಜಕಾರ್ಯಗಳ ಸಮಾರಂಭಗಳಲ್ಲಿಯೂ ಓಡಾಡುತ್ತಿದ್ದುದು? ಆದುದರಿಂದ ಮೂರ್ತಿಗಳು ಅಷ್ಟರಲ್ಲಿಯೇ ತೃಪ್ತರಾಗಿರದೆ, ಪೋಲೀಸರು, ಕಾಂಗ್ರೆಸ್ ಮಿನಿಸ್ಟರರಿಗೆ ಖಾದೀಧಾರಿಗಳಾಗಿಯೇ ಸಲಾಮು ಮಾಡಿಸುವ ಉದ್ದೇಶದಲ್ಲಿಯೂ ಕೃತಾರ್ಥರಾದರೆ, ಆಗ ಬೇಕಾದರೆ ಹೇಳೋಣ:—'ಆಹಾ! ಎಂತಹ ಅಗಾಧ ಕಾರ್ಯಸಾಧನೆ!' ಎಂದು.

ಶ್ರೀ. ಸತ್ಯಮೂರ್ತಿಗಳೆ, ಈ ಸಂದರ್ಭದಲ್ಲಿನ ಪ್ರಕಟಣೆಯಲ್ಲಿ, ಇನ್ನೂ ಒಂದೆರಡು ಹೆಚ್ಚಿನ ಸಂಗತಿಗಳ ವಿವರಣೆಯೂ ಇದೆ. 'ಮೂರೇ ಮೂರು ವರ್ಷ; ಅಷ್ಟರಲ್ಲಿಯೇ, ನೋಡಿ, ಇಂಡಿಯವು ತನ್ನ ಸ್ವಾತಂತ್ರ್ಯಸುಖವನ್ನು ಪಡೆದೇ ಪಡೆಯುವುದು'—ಹೀಗೆಂದು ಅವರ ಸಿದ್ಧಾಂತ. ನೂರು ವರ್ಷಗಳಲ್ಲಿ ಯಾವುದು ಸಿದ್ಧಿಸುವುದು ಅಸಾಧ್ಯವೋ, ಅದು ಮೂರೇ ವರ್ಷಗಳಲ್ಲಿ ಸಾಧ್ಯವೆನ್ನುವುದಕ್ಕೆ ಕಾರಣಗಳೇನು ಎಂದು ನಾವ್ಹೂ, ನೀವ್ಹೂ ಕೇಳಿದರೆ ಅವರನ್ನುವುದಿಷ್ಟು. 'ಯುರೋಪಿನಲ್ಲಿ ಬ್ರಿಟಿಶರ ವಿದ್ಯಮಾನಗಳು ಅಷ್ಟೆಂದು ತೃಪ್ತಿಕರವೆನಲಾಗುವುದಿಲ್ಲ. ನಿನ್ನೆ ಬ್ರಿಟಿಶನ ಮಾತೇ ಕಾಯಿದೆಯಾಗಿದ್ದಿತು. ಇಂದು ಅವನ ಮಾತಿಗೆ ಕಿವಿಕೊಡುವವರಾರೂ ಇಲ್ಲ. ಇದರ ಪರಿಣಾಮವಾಗಿ ಗಿಬ್ರಾಲ್ಟರ್ ಎಲ್ಲಿಯಾತ್ಮರೂ ಬ್ರಿಟನಿನ ಕೈ ತಪ್ಪಿಹೋಯಿತೆಂದರೆ, ಇಂಡಿಯದ ಹೆದ್ದಾರಿಗೆ ಭಯ ಹಿಡಿದಂತೆಯೇ.' ಅಂದರೇನು? ಇನ್ನು ಮೂರು ವರ್ಷಗಳ ಅಂತ್ಯದಲ್ಲಿ, ಬ್ರಿಟಿಶ್ ನೌಕೆಯು, ಗಿಬ್ರಾಲ್ಟರನ್ನು ದಾಟಲು ಸಾಮರ್ಥ್ಯವಿಲ್ಲದೆ,—ಶ್ರೀ. ಸತ್ಯಮೂರ್ತಿಗಳು ಕಷ್ಟಪಟ್ಟು ಸಂಪಾದಿಸಿದ ಆ ಪ್ರಾಂತಿಕ ಮಂತ್ರಿಪದವಿಯನ್ನು ಅವರೇ ಚಿರಕಾಲವೂ ಅನುಭವಿಸಲೆಂದು ಅದನ್ನು ಅವರ ಪಾಲಿಗೇ ಬಿಟ್ಟು,—ಆ ನೌಕೆ ಸ್ವದೇಶದ ಕಡೆಗೆ ಹಿಂದಿರುಗುವುದು ಎಂದೇ ಅಲ್ಲವೇ? ಇದೆಂತಹ ಅಮೂಲ್ಯ ಸಂಧಿ! ಆದರೂ, ಮಂತ್ರಿಪದವಿಯ ಆಗಾಧಕಲ್ಪನೆಯಲ್ಲಿ, ಆ ಕಲ್ಪನೆಯ ಆನಂದೋತ್ಸಾಹದ ನಡುವೆ, ಪ್ರಾಜ್ಞರಾದ ಮೂರ್ತಿಗಳು, ಒಂದು ವಿಷಯ ಮರೆತು ಬಿಟ್ಟರು! ಬ್ರಿಟಿಶರು ಪ್ರಥಮತಃ ಮದ್ರಾಸಿಗೆ ಬಂದಿಳಿದುದು ಗಿಬ್ರಾಲ್ಟರ್‌ನ ಮೂಲಕವಲ್ಲ; ಆಗ ಅದನ್ನು ಅವರು ತಿಳಿದಿರಲೇ ಇಲ್ಲ. ಅವರು ಆಗ ಬಂದುದು ಕೇಪನ್ನು ಸುತ್ತು ಬಳಸಿ. ಮತ್ತೆ ಆ ಮಾರ್ಗವಿನ್ನೂ ಮುಚ್ಚಿಹೋಗಿಲ್ಲ. ಆದುದರಿಂದ, ಮೂರ್ತಿಗಳು ಗಿಬ್ರಾಲ್ಟರ್‌ನ ಮೇಲೇ ಆದರಿಸಿಕೊಂಡು, 'ಇಂಡಿಯಕ್ಕೆ ಮೂರೇ ವರ್ಷಗಳಲ್ಲಿ ಸ್ವಾತಂತ್ರ್ಯ'ವೆಂಬ ಸಿದ್ಧಾಂತ ಮಾಡಿರುವುದು ಸೂಕ್ತವಾಗಿ ತೋರದು.

ಮಂಗಳೂರು

ಕಳೆದ ಶನಿವಾರ ರಾತ್ರಿ ಇಲ್ಲಿನ 'ಶ್ರೀ ಆಸಂಥಾಶ್ರಮ ಹಿಂದೂ ಶಾಲಾ ಸಂಗೀತ ನಾಟಕ ಸಭಾ' ಇವರು ಸ್ಥಳೀಯ ಗಣಪತಿ ಶಾಲಾ ಸದನದಲ್ಲಿ 'ವೈರಾಗ್ಯ ಸಿಂಹಾಸನ'ವೆಂಬ ಪೌರಾಣಿಕ ನಾಟಕವನ್ನು ಅಭಿನಯಿಸಿದರು. ನಟವರ್ಗದಲ್ಲಿ ಮುಖ್ಯವಾಗಿ ಬಾಲಿಕೆಯರು. ಇದರ ಉತ್ಪತ್ತಿಯನ್ನು ಆ ಹಿಂದೂ ಶಾಲೆಯ ಬಡ ವಿದ್ಯಾರ್ಥಿಗಳ ಸೇವಾ ಸಂಘಕ್ಕೆ ಸಮರ್ಪಿಸಲಾಗುವುದೆಂದು ತಿಳಿದುಬರುತ್ತಿದೆ.

ಅದೇ ಶಾಲಾಸದನದಲ್ಲಿ ಕಳೆದ ಆದಿತ್ಯವಾರ ಸಂಜೆ 'ಕರ್ನಾಟಕ ನಾಟಕ ಸಭಾ, ಬೋಳೂರು' ಇವರೂ ಬೋಳೂರಿನ ಶಾರದಾ ವ್ಯಾಸಾದಿಕ ಪಾಠಶಾಲೆಯ ಸಹಾಯಾರ್ಥವಾಗಿ 'ರುಕ್ಮಿಣೀ ಹರಣ'ವೆಂಬ ಪೌರಾಣಿಕ ಕಥೆಯನ್ನು ಅಭಿನೈಸಿದರು.

ನಮ್ಮ ಆಧಿಪತ್ಯದ ಹೊಸ ಸಭಾಸದನಗಳಲ್ಲಿನ ಸ್ಥಾನಗಳಿಗೆ, ಕಾಂ. ಪಾ. ಬೋರ್ಡಿನವರು, ಈ ಜಿಲ್ಲೆಯಲ್ಲಿಯೂ ಕೆಲವು ನೇಮಕಗಳನ್ನು ಮಾಡಿರುವರೆಂದು ತಿಳಿದುಬರುತ್ತಿದೆ. ಅದರಂತೆ ಶ್ರೀ. ಕೆ. ಆರ್. ಕಾರಂತರು ಪುತ್ತೂರು ವಿಭಾಗಕ್ಕೂ, ಶ್ರೀ. ಏ. ಬೀ. ಶೆಟ್ಟರು ಕುಂಭಾಪುರ ಡಿವಿಜನಿಗೂ ಕಾಂಗ್ರೆಸ್ ಪಕ್ಷದ ಉಮೇದುವಾರರು.

ಕಳೆದ ಶನಿವಾರ, ಇಲ್ಲಿನ ಬೋರ್ಡ್ ಆಫೀಸಿನಲ್ಲಿ ಜರುಗಿದ ಮಿಟಿಂಗಿನಲ್ಲಿ, ಸ್ವದೇಶೀ ವಸ್ತುಗಳನ್ನೇ, ಸಾಧ್ಯವಿರುವಷ್ಟು ಮಟ್ಟಿಗೆ, ಬೋರ್ಡ್ ಉಪಯೋಗಿಸಬೇಕೆಂಬ ಈ ಠರಾವು ಮಾನ್ಯವಾಯಿತು.

ತೆರಳದ ಶಾಲೆಯಲ್ಲಿ ಬಾಲಕನೊಬ್ಬನ ಖೂನಿ ಮಾಡಿದ ಆರೋಪಕ್ಕೆ ಗುರಿಯಾಗಿದ್ದ ಆದೇ ಶಾಲೆಯ ಮಾಸ್ಟರ ಐತಪ್ಪ ನಿಗೆ ಹೈಕೋರ್ಟಿನಲ್ಲಿಯೂ ಮರಣದಂಡನೆಯೇ ಕಾಯಂ ಆಯಿತೆಂದು ಪ್ರಕಟವಾಗಿದೆ.

ಈ ನಗರದ ಸೊಳ್ಳೆಯ ಕಾಟವನ್ನು ನಿವಾರಿಸಲು, ಒಬ್ಬ ಮೇಸ್ತ್ರಿ, ಮತ್ತೂ ನಾಲ್ಕು ಕೂಲಿಗಳ ನೇಮಕವನ್ನು, ನಮ್ಮ ಮುನಿಸಿಪಲ್ ಸಭೆ ಮಂಜೂರು ಮಾಡಿರುವುದಲ್ಲದೆ, ರಸ್ತೆಗಳಿಗೆ ನೀರು ಹೊಯ್ಯಲು ಇನ್ನೆರಡು ಮೋಟರ್ ಲೋರಿಗಳನ್ನು ಕೊಳ್ಳಲೂ ಅದು ಅನುಮೋದಿಸಿರುವುದು.

'ಫೈಜಾಪುರ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ' ಎಂಬ ಹೆಸರಿನ ಒಂದು ಕರಪತ್ರವನ್ನು, ಶ್ರೀ. ಗಳಾದ ಎನ್. ಎಸ್. ಕಿಲ್ಲೆ, ಬಿ. ಅನಂತ ರೈ ಮೊದಲಾದ ೪ ಮಂದಿ ಕಾಂಗ್ರೆಸ್ ಕೆಲಸಗಾರರು ಹೊರಡಿಸಿದ್ದಾರೆ. ಅದರಲ್ಲಿ ತಮ್ಮ ಚುನಾವಣೆಯಾಗದಂತೆ, ಶ್ರೀ. ಕಮಲಾದೇವಿಯವರು ಯತ್ನಿಸುತ್ತಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಈ ಸಂಬಂಧವಾಗಿ ಅವರೇ ನಿನ್ನೆ ಸಂಜೆ ರೈಸ್ ಮೈದಾನದಲ್ಲಿ ಒಂದು ಮಹಾಸಭೆ ಕರೆದಿದ್ದರು. ಶ್ರೀಮತಿಯವರು, ತಮ್ಮ ಮೇಲಿನ ಆಕ್ಷೇಪಗಳಿಗೆ ತಕ್ಕ ಸಮಾಧಾನವನ್ನು ಹೇಳಿರಬೇಕೆಂದು ನಂಬಿಕೆ.

ಮುಖ್ಯ, ಉಪೇಂದುವಾರರು, ಚುನಾವಣೆಯ ಸುಖಸ್ವಪ್ನದಲ್ಲಿ ಓಲಾಡುತ್ತ, ಮತದಾರರ ಮನವೊಲಿಸಿಕೊಳ್ಳಲು, ನಾನಾ ಬಗೆಯ ಮಾತುಗಳಾಡುವ ಸಮಯವಿದು! ಅದಕ್ಕೆಂದು ನಿದರ್ಶನವಾಗಿ ಮಾತ್ರ, ಮೇಲಿನ ಮಹನೀಯರ ಮಂತ್ರಿಪದವಿಯ, ಆ ಪದವಿಯ ಮಹತ್ಕಾರ್ಯಸಾಧನೆಯ ಕಲ್ಪನಾಚಿತ್ರವನ್ನು ಮತದಾರರ ಮುಂದಿರಿಸಿದ್ದೇವೆ. ಇಂತಹ ಆಶಾಜನಕ ಚಿತ್ರಗಳೆಷ್ಟೋ, ಇನ್ನೂ ಹಲವು ಕಡೆಗಳಿಂದ, ಹಲವು ಬಣ್ಣಗಳೊಡಗೂಡಿ, ಮತದಾರರ ಕಣ್ಣೆದುರಿಗೆ ಬೀಳಲಿರುವುವು. ಮತದಾರರು ಹೊಳೆವುದೆಲ್ಲ ಬಂಗಾರವೆಂದೆಣಿಸದೆ, ಉಮೇದುವಾರರ ನಿಜವಾದ ಯೋಗ್ಯತೆಯನ್ನು ಚೆನ್ನಾಗಿ ವಿಮರ್ಶಿಸಿ, ಮತದಾನ ಮಾಡಬೇಕು. ತನ್ನ ಹಿತವನ್ನೂ, ದೇಶಹಿತವನ್ನೂ ಸ್ವತಂತ್ರ ಚೇರ್ಮನ್ನಿನಿಂದಲೇ ಸಾಧಿಸಬೇಕು.

ಬೋರ್ಡಿನ ಒಂದೆರಡು ವಿಚಾರ.

ಈಗಿನ ಬೋರ್ಡ್ ಪ್ರೆಸಿಡೆಂಟರು ಅಧಿಕಾರಕ್ಕೆ ಬಂದಂದಿನಿಂದ, ಅವರು ಬಂದುದೇ ತಪ್ಪು ಎಂಬಂತೆ, ಅವರು ಮಾಡಿದುದೆಂಬ, ಸಾಲದುದಕ್ಕೆ ಸರಕಾರೀ ಪ್ರೆಸಿಡೆಂಟರೂ ಮಾಡಿದುದೆಂಬ ಕೆಲಸ ಬೊಗಸೆಗಳ ಕುರಿತು, ಬೋರ್ಡ್ ಮಿಟಿಂಗುಗಳಲ್ಲಿ ಸವಾಲುಗಳ ಸುರಿಮಳೆಯಾಗುತ್ತಿದೆ. ಆಫೀಸಿನ ದಾಖಲೆಗಳಲ್ಲಿ ಕಾಣದ, ಕಲೆಕ್ಟರ್ ಪ್ರೆಸಿಡೆಂಟರ ಕಾಲದಲ್ಲಿ ಅವರ ಬಂಗಲೆಯಲ್ಲಿ ನಡೆದುದೆಂಬ ಈ ವ್ಯವಹಾರಗಳಿಗೂ ಈಗಿನ ಪ್ರೆಸಿಡೆಂಟರು ಉತ್ತರ ಹೇಳಬೇಕೆಂದು ಕೆಲ ಸದಸ್ಯರು ಇನ್ನೂ ನಿರೀಕ್ಷಿಸಿಕೊಂಡಂತಿರುವುದು ಬಲು ಸ್ವಾರಸ್ಯವೂ, ವಿನೋದಾಸ್ಪದವೂ ಆಗಿದೆ. ಅದಂತಿರಲಿ.

ಪ್ರಕೃತ ಶ್ರೀ. ಸುಭಾಶ್‌ಚಂದ್ರರ ನಿರ್ಬಂಧದ ವಿಷಯಕವಾದ ಒಂದು ಪ್ರಶ್ನೆಯನ್ನು, ಪ್ರೆಸಿಡೆಂಟರು ಸಭೆಯಲ್ಲಿ ತರಲು ಬಿಡಲಿಲ್ಲವೆಂಬ ಒಂದು ಸಂಗತಿ, ಈ ಬಾರಿಯ ಮಿಟಿಂಗಿನಲ್ಲಿ ಮುಂದೆ ಬಂದಿತು. ಅದಕ್ಕೆ ತಕ್ಕ ಉತ್ತರವನ್ನೂ ಪ್ರೆಸಿಡೆಂಟರೂ ಕೊಟ್ಟಿರುವರು. ಆದರೆ,—

ಮಾಜಿ ಡಿ॥ ಬೋ॥ ಪ್ರೆಸಿಡೆಂಟರಾಗಿದ್ದ ಶ್ರೀ. ಏ. ಬೀ. ಶೆಟ್ಟರ ಅಧಿಕಾರದ ಕೊನೆಯ ದಿನಸಗಳಲ್ಲಿ,—ಎಂದರೆ ಕಾಂಗ್ರೆಸಿನ ಆವೇಶವು ಬರಲಿದ್ದ ಆ ದಿನಗಳಲ್ಲಿ,—ಗವರ್ನರ್ ಸಾಹೇಬರ ಆಗಮನದ ಸಂಬಂಧವಾಗಿ, ಅವರಿಗೆ ಮಾನಪತ್ರವನ್ನು ಸಮರ್ಪಿಸಕೂಡದೆಂಬ ಒಂದು ಸೂಚನೆಯನ್ನು, ಇದೇ ಬೋರ್ಡಿನವರು ಅಂಗೀಕರಿಸಬೇಕೆಂದು, ಉಪ್ಪಿನಂಗಡಿಯಲ್ಲಿ ಅನೇಕ ಕಾಂಗ್ರೆಸ್‌ವಾಲರು ಅಪೇಕ್ಷಿಸಿ ಮುಂದೊತ್ತಿದುದುಂಟೇ? ಇದ್ದರೆ, ಆ ಠರಾವು ಮೇಲೆ ಬಾರದಿರಲು ಕಾರಣಗಳೇನೋ? ಬಲ್ಲವರು ತಿಳಿಸುವರೇ?

ಹಿಂದೂದೇಶ

ಮಣಿಪುರ ರಾಜವಂಶದ ಜ್ಯೇಷ್ಠ ರಾಜಕುಮಾರ ಬುದ್ಧಿಮಂತ ಸಿಂಗರವರು ಒಂದು ಹೊಸ ಗಡಿಯಾರವನ್ನು ನಿರ್ಮಿಸಿದ್ದಾರೆ. ಒಂದು ಮನುಷ್ಯಾಕಾರದ ಪ್ರತಿಮೆಯ ಎದೆಯಲ್ಲಿ ಈ ಗಡಿಯಾರವು ಇದೆ. ಪ್ರತಿ ಗಂಟೆಯಾದೊಡನೆ, ಒಂದು ಬಡತಿಗೆ ಗಂಟೆ ಬಾರಿಸುತ್ತಿದೆ. ಹಾಗೂ, ಗಂಟೆಗಳ ಸಂಖ್ಯೆಯಂತೆ, ಮನುಷ್ಯಧ್ವನಿಯಿಂದ ಅಷ್ಟೇ ಸಲ ಗಂಟೆಗಳ ಸಂಖ್ಯೆಯನ್ನು ಉಚ್ಚರಿಸುವ ಒಂದು ಗಡಿಯಾರವನ್ನೂ ಅದೇ ರಾಜಕುಮಾರರೇ ಕಂಡುಹಿಡಿದಿದ್ದಾರೆ.

ಕಪ್ಪೆಗಳನ್ನು ಸರ್ಪಗಳು ನುಂಗುವುದಲ್ಲ; ಸರ್ಪವನ್ನೇ ನುಂಗುವ ಒಂದು ದೊಡ್ಡ ಆಕಾರದ ಕಪ್ಪೆ ಇದೆ ಎಂದು ಡಾನೋವಿನ ವಾರ್ತೆ.

ಆಲಿಪುರದಲ್ಲಿ ಒಬ್ಬ ಡಕಾಯಿತನು ಡಕಾಯಿತಿ ನಡೆಸುತ್ತಿರುವಾಗಲೇ ಗುಂಡುಹೊಡೆದು ಕೊಂದಿರುವುದಕ್ಕಾಗಿ ಅಲ್ಲಿನ ಪೋಲೀಸ್ ಸುಪರಿಂಟೆಂಡೆಂಟರಾದ ಬಾಬು ನಂದಲಾಲ ಭಟ್ಟಾಚಾರ್ಯರಿಗೆ ಸರಕಾರದಿಂದ ೫೦ ರುಪಾಯಿಗಳ ಬಹುಮಾನ ದೊರಕಿದೆ. ಡಕಾಯಿತಿ ನಡೆದುದು ಬಾಬುಗಳ ಮನೆಯಲ್ಲಿಯೇ.

ಪ್ರಾಚೀನ ರಾಜರೊಬ್ಬರ ಕಾಲದಲ್ಲಿ ಭೂಕಂಪದಿಂದ ಹೂಳಿ ಹೋದ ಪಟ್ಟಣದ ಕುರುಹುಗಳೀಗ ದೌಲತಾಬಾದಿನ ಬಳಿ ಸಿಕ್ಕಿವೆ. ಹಳೇ ನಾಣ್ಯಗಳು, ಪ್ರತಿಮೆಗಳು, ಶಾಸನಗಳು, ಪಾತ್ರೆಗಳು, ಭವ್ಯ ಮಂದಿರಗಳ ನೆಲಗಟ್ಟುಗಳು ಇವುಗಳನ್ನು ಆಗಲೇ ಅಗೆದು ತೆಗೆದಿದ್ದಾರೆ.

ಸರ್ದಾರ್ ರುಸ್ತುಂ ಖಾನರೆಂಬವರೂ, ಇತರ ೧೨ ಮಂದಿಗಳೂ, ೧,೫೦,೦೦೦ ಎಕ್ರೆ ಭೂಮಿ ತಮಗೆ ಸೇರಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರಟರಿಗಳ ಮೇಲೆ ದಾವೆ ಹೂಡಿದ್ದರು. ಅದೀಗ ಸೆಕ್ರಟರಿಗಳ ವಿರುದ್ಧವಾಗಿ ಖಾನ್ ಮೊದಲಾದವರ ಪರವಾಗಿ ತೀರ್ಮಾನವಾಗಿವೆ. ಆ ಆಸ್ತಿಯ ಬೆಲೆ ಸುಮಾರು ೧ ಕೋಟಿ ರುಪಾಯಿಗಳು.

ಬೊಬ್ಬಿಲಿಯಲ್ಲಿ ಪಂಡಿತ ಜಹ್ವರಲಾಲರ ಭಾಷಣಕ್ಕೆ ಉಂಟಾದ ತೊಂದರೆಗಳ ಕುರ್ಚಿತು ಅಲ್ಲಿನವರೊಬ್ಬರು ಆ ಸಮಾಚಾರವನ್ನು ವಿವರಿಸುತ್ತ, ಈ ತಪ್ಪು ಅಲ್ಲಿನ ಕಾಂಗ್ರೆಸ್ ಮಂದಿಯದೇ ಎಂದೂ, ದೇವಸ್ಥಾನವೊಂದರ ಉತ್ಸವಕಾಲದ ಗಲಭೆಯಿಂದ ಹೀಗೆಲ್ಲ ಅವಾಂತರವಾಯಿತೆಂದೂ 'ಹಿಂದೂ' ಪತ್ರಿಕೆಗೆ ಬರೆದಿದ್ದಾರೆ. ಸ್ಥಳ ಬೊಬ್ಬಿಲಿಯಾದುದರಿಂದ ಅಲ್ಲಿ ಬೊಬ್ಬೆಯಾದುದೇನೂ ಆಶ್ಚರ್ಯವಲ್ಲ.

ಅನ್ನಾಮಲೆ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದಲ್ಲಿ ಸರ್ ಫಿರೋಜ್ ಖಾರವರು ಒಂದು ಉದಾತ್ತ ಭಾಷಣ ಮಾಡಿದರು. ನಮ್ಮ ಮಾನ್ಯ ಗವರ್ನರರೂ, ಆ ವಿಶ್ವವಿದ್ಯಾಲಯದ ಛಾನ್ಸಲರರೂ ಆದ ಫನವನ್ನೈದಿದ ಲಾರ್ಡ್ ಇರಸ್ಕೈನ್ ರವರು ಆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಆಗಾಖಾನರು ಬರುವ ತಿಂಗಳಲ್ಲಿ ಬೊಂಬಯಿಗೆ ದಯೆ ಮಾಡಿಸುವರು. ಆಗ ಅವರ ಸುವರ್ಣಮಹೋತ್ಸವವನ್ನು ಜರುಗಿಸಲು ಪೂರ್ವ ಆಫ್ರಿಕದಲ್ಲಿ ಎಲ್ಲ ಸಿದ್ಧತೆಗಳಾಗಿವೆ ಎಂದೂ, ಆದುದರಿಂದ ಅತ್ತ ದಯೆಯಾಡಿಸಬೇಕೆಂದೂ ವಿನಂತಿಮಾಡಿಕೊಳ್ಳುವ ಡೆಪ್ಯುಟೇಶನ್ ಒಂದು ಅವರನ್ನು ಕಾದಿರುವುದು.

ಉತ್ತರ ಹಿಂದುಸ್ಥಾನದ ಪೀಪಲ್ಸ್ ಬೇಂಕಿನ ೭ ಲಕ್ಷ ರುಪಾಯಿಗಳ ಹೆಚ್ಚುಕಡಿಮೆಯ ಸಂಬಂಧ ನಿರ್ಬಂಧದಲ್ಲಿದ್ದ ಶ್ರೀ. ಕೆ. ಎಲ್. ಗೌಬಾ, ಎಂ. ಎಲ್. ಏ.ಯವರನ್ನು ಲಾಹೋರಿನ ಡಿ॥ ಜಡ್ಜರು, ೫೭,೫೦೦ ರುಪಾಯಿಗಳ ನಾಲ್ಕನೆಯ ಸ್ಯೂರಿಟಿಯನ್ನು ಸ್ವೀಕರಿಸುವುದರ ಮೂಲಕ, ಬಿಡುಗಡೆ ಮಾಡಲು ಅಪ್ಪಣೆಕೊಟ್ಟಿರುವರು. ಒಟ್ಟಿಗೆ ಗೌಬಾರವರು ೫೭,೫೦೦ ರುಪಾಯಿಗಳ ಜ್ಯಾಮೀನು ಕೊಟ್ಟ ಹಾಗಾಯಿತು.

ಮದ್ರಾಸ್ ಕಾರ್ಪರೇಶನಿನ ಕಮಿಶನರರಾದ ಮಿ. ಜಾವದ್ ಹುಸೇನ್‌ರವರು ರಜೆಯ ಮೇಲೆ ತೆರಳುವುದರಿಂದ, ಅವರ ಬದಲಿಗೆ ತಂಜಾವೂರಿನ ಕಲೆಕ್ಟರ್ ದಿವಾನ್ ಬಹದೂರ್ ಆರ್. ಸುಬ್ಬಯ್ಯ ನಾಯುಡುರವರು ನೇಮಿಸಲ್ಪಟ್ಟಿದ್ದಾರೆ.

ಸೆಕೆಂಡರಿ ವಿದ್ಯಾಭ್ಯಾಸದ ತಿದ್ದುಪಾಟುಗಳ ಕುರಿತು ಸಲಹೆ ಕೊಡಲೂ, ಅವುಗಳನ್ನು ಪರಿಶೋಧಿಸಲೂ ಇಂಡಿಯಕ್ಕೆ ಇಬ್ಬರು ಪಂಡಿತರು ಸದ್ಯದಲ್ಲೇ ಬರಲಿರುವರು. ಅವರ ಕೆಲಸವು ಬರುವ ಮಾರ್ಚಿ, ಏಪ್ರಿಲ್‌ಗಳಲ್ಲಿ ಪೂರ್ಣವಾಗಬಹುದು.

ಕಲ್ಕತ್ತೆಯಲ್ಲಿ ಡಾ॥ ಸತ್ಯನಾರಾಯಣ ಸಿಂಹರೆಂಬ ಒಬ್ಬ ಪತ್ರಿಕಾ ವಾರ್ತಾದಾಯಕರನ್ನು ಪೋಲೀಸರು ಕೈದುಮಾಡಿದ್ದಾರೆ. ಕಾರಣ ಅವರು ಕಮ್ಯುನಿಸ್ಟ್ ಚಳವಳಿದಲ್ಲಿ ಭಾಗಿಗಳಾಗಿರಬೇಕೆಂಬ ಆರೋಪವೇ. ಅಬಿಸೀನಿಯದಲ್ಲಿ ಯುದ್ಧದ ಸಮಯದಲ್ಲಿ ಅಲ್ಲಿದ್ದ ಹಿಂದೀ ವಾರ್ತಾದಾಯಕರೆಂದರೆ ಇವರೊಬ್ಬರೇ.

ಬಿಹಾರು ಕೌನ್ಸಿಲಿನ ಅವಧಿಯು ಮುಂದಿನ ವರ್ಷದ ಏಪ್ರಿಲ್ ತಾ. ೧೮ ವರೆಗೆ ವಿಸ್ತರಿಸಲಾಗಿದೆ.

ಹಿಂದುಸ್ಥಾನದಲ್ಲೆಲ್ಲ ಜಾನುವಾರುಗಳ ದೊಡ್ಡ ಸಂತೆಯೆಂದರೆ, ಬಂಗಾಳದ ಹಿರಣ್‌ಪುರ ಗ್ರಾಮದ್ದು. ಇಲ್ಲಿ ಪ್ರತಿ ವರ್ಷ ಸುಮಾರ್ ೬ ಲಕ್ಷ ರುಪಾಯಿ ಬೆಲೆಯ ಜಾನುವಾರುಗಳ ವ್ಯಾಪಾರವಾಗುವುದು. ಕದ್ದ ಜಾನುವಾರುಗಳಿಲ್ಲಿಗೆ ಬಾರದ ಹಾಗೆ ರಿಜಿಸ್ಟ್ರೇಶನಿನ ಪದ್ಧತಿಯಿದೆ. ಇದರಿಂದ ಸರಕಾರಕ್ಕೆ ವರ್ಷಕ್ಕೆ ೨೦ ಸಾವಿರ ರುಪಾಯಿಗಳ ಉತ್ಪನ್ನವಿದೆ.

ಬಂಗಾಳ ಸರಕಾರವು, ಇದುವರೆಗೆ ಸಾಬೂನು ಮಾಡುವ ಕೈಗಾರಿಕೆಯಲ್ಲಿ ಶಿಕ್ಷಣ ಕೊಡಿಸಿದ್ದ ಅದೊಂದು ವಿದ್ಯಾರ್ಥಿ ತಂಡದಲ್ಲಿ ಹಲವರು ಆಗಲೇ ತಮ್ಮದೊಂದೊಂದು ಸಾಬೂನಿನ ಚಿಕ್ಕ ಕಾರ್ಖಾನೆಯನ್ನು ಸ್ಥಾಪಿಸಿರುವರು; ಕೆಲವರು ಇತರ ಸಾಬೂನಿನ ಕಾರ್ಖಾನೆಗಳಲ್ಲಿ ಉದ್ಯೋಗಿಗಳಾಗಿ ನೇಮಿಸಲ್ಪಟ್ಟಿರುವರು. ಈಗ ಎರಡನೆಯ ತಂಡದ ಹೊಸ ವಿದ್ಯಾರ್ಥಿಗಳಿಗೆ ಇದೇ ಶಿಕ್ಷಣಕ್ಕಾಗಿ ಸರಕಾರದಿಂದ ಏರ್ಪಾಡು ನಡೆದಿದೆ. ಶಿಕ್ಷಣದ ತರಬೇತಿಯ ಅವಧಿ ಸುಮಾರು ನಾಲ್ಕು ತಿಂಗಳು.

ಬೆಜ್ವಾಡದ ಮುನಿಸಿಪಲ್ ಕೌನ್ಸಿಲರರಾಗಿ ಶ್ರೀ. ಕೆ. ಸುಬ್ಬರಾಯರೆಂಬವರು ಆರಿಸಲ್ಪಟ್ಟಿದ್ದು, ಆ ಕುರಿತು ಎದ್ದ ಆಕ್ಷೇಪಣೆಯ ವ್ಯವಹಾರವು ಈಗಲೀಗ ಮುಗಿಯಿತು. ರಾಯರ ಆ ಸದಸ್ಯತನ ರದ್ದಾಯಿತು. ಈ ವ್ಯಾಜ್ಯಕ್ಕೆ ಮೂಲವಾದ ಚುನಾವಣೆ ಒಂದೂವರೆ ವರ್ಷಗಳ ಹಿಂದೆ ಅಲ್ಲಿ ನಡೆದಿದ್ದು, ಪ್ರಕೃತ ಅದು ಅಲ್ಲಿನ ಚುನಾವಣೆಯ ಕಮಿಶನರರಾದ ಶ್ರೀ. ಎಂ. ಎನ್. ಬಂಗೇರರವರಿಂದ ಆ ರೀತಿ ತೀರ್ಮಾನಿಸಲ್ಪಟ್ಟಿತು.

ಪಂಜಾಬಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಸ್ಥಾನಕ್ಕೂ, ತದನಂತರ ಅದೇ ಪ್ರಾಂತದ ಕಾಂ॥ ಪಾರ್ಲಿಮೆಂಟರಿ ಬೋರ್ಡಿನ ಅಗ್ರಪೀಠದ ಅಧಿಕಾರಕ್ಕೂ ಡಾ॥ ಸತ್ಯ ಪಾಲರು ರಾಜೀನಾಮೆ ಕೊಟ್ಟು ಹೊರಬಂದರು.

ಪಂಡಿತ ಜಹ್ವರಲಾಲರನ್ನೇ ಆರಿಸಿದಲ್ಲಿ ಅವರು ಇಂದಿನ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಪದವಿಯನ್ನು, ಅನಿವಾರ್ಯ ಪಕ್ಷದಿಂದ್ದ, ಸ್ವೀಕರಿಸುವ ಲಕ್ಷಣ ತೋರುತ್ತಿದೆ.

ಚಿತ್ತೂರಿನಲ್ಲಿ ನಾರಾಯಣ ಚೆಟ್ಟಿ ಎಂಬಾತನ ಮೇಲೆ ಫೋರ್ಜರಿಯ ಆರೋಪದ ವ್ಯೋಕದ್ದಮೆಯೊಂದು ನಡೆಯುತ್ತಿದ್ದು, ಈತನು ಜೈಲುವಾಸದ ಭಯದಿಂದ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದುಬರುತ್ತಿದೆ.

ತಿರುವಾಂಕೂರು ಶ್ರೀಮನ್ಮಹಾರಾಜರವರ ದೇವಸ್ಥಾನದ ಪ್ರವೇಶದ ಕುರಿತಾದ ಅನುಗ್ರಹಪೂರ್ವಕವಾದ ಆಜ್ಞೆಯ ಸಂಬಂಧ, ಅದರ ಶಾಶ್ವತವಾದ ಸ್ಮಾರಕವಾಗಿ, ಶ್ರೀಮನ್ಮಹಾರಾಜರವರ ಪ್ರತಿಮೆಯೊಂದನ್ನು ಸ್ಥಾಪಿಸಬೇಕ್ಕೆಂದು ತಿರುವೆಂಡ್ರಮಿನಲ್ಲಿ ನಡೆದ ಎಜುವಾ ಮಹಾಸಭೆಯವರ ಕಾಲೋಚಿತ ತೀರ್ಮಾನ.

ಶ್ರೀ. ಎಂ. ಎನ್. ರಾಯ್‌ಯವರು, ೬ ವರ್ಷಗಳ ಕಾರಾಗೃಹವಾಸವನ್ನು ಅನುಭವಿಸಿ, ಈಗ ತಾನೇ ಡೇರಾಡಾಹೂನಿನ ಜೈಲಿನಿಂದ ಹೊರಬಂದಿರುವರು. ಅವರನ್ನು ಅನೇಕ ಮಂದಿ ಮಹನೀಯರು ಜೈಲ್ ಗೇಟಿನ ಬಳಿಯಲ್ಲಿಯೇ ಸ್ವಾಗತೀಕರಿಸಿದರು. ಇವರು ಕೌನ್ಸಿರ ಒಳಸಂಚಿನ ವೊಕದ್ದಮೆಯಲ್ಲಿ ಈ ದಂಡನೆಗೆ ಗುರಿಯಾಗಿದ್ದರು.

ಸರ್ದಾರ್ ಪಟೇಲರವರು ಇದೇ ದಶಂಬರದಲ್ಲಿ ದಕ್ಷಿಣ ಇಂಡ್ರಿಯದ ಸಂಚಾರವನ್ನು ಕೈಕೊಳ್ಳುವರು. ದಶಂಬರ ತಾ. ೧೩-೧೪ರಲ್ಲಿ ಮದರಾಸು—ಅಲ್ಲಿ ಸಮಗ್ರ ಭಾರತದ ಖಾದೀ ಮತ್ತೂ ಸ್ವದೇಶೀ ವಸ್ತುಪ್ರದರ್ಶನವನ್ನು ತೆರೆಯುವರು. ಅಲ್ಲಿಂದ ತಾ. ೧೫-೧೯ರಲ್ಲಿ ತಮಿಳುನಾಡಿನಲ್ಲಿ ಸಂಚಾರ. ಈ ಸಂದರ್ಭದಲ್ಲಿ ಕೊಯಮುತ್ತೂರಿನ ಮುನಿಸಿಪಲ್ ಕೌನ್ಸಿಲು ಅವರಿಗೊಂದು ಮಾನಪತ್ರವನ್ನು ಸಮರ್ಪಿಸಲು ನಿರ್ಧರಿಸಿದೆ.

ಎಡಿಸ್ ಅಬಾಬದಲ್ಲಿ ಬ್ರಿಟಿಷ್ ಲಿಗೇಶನನ್ನು ಕಾಯಲು ಹೋಗಿದ್ದ ಇಂಡಿಯದ ಸೈನ್ಯವು ಈಗಲೀಗ ಇಲ್ಲಿಗೆ ಹಿಂದಿರುಗುವುದು.

ಬಿಹಾರ್ ಸರಕಾರವು ಛಾಂಪ್ರಾನದಲ್ಲಿ ಒಂದು ಮಿಲಿಟರಿ ಬೇಸ್‌ನ್ನು ರಚಿಸುವ ಆಲೋಚನೆಯಲ್ಲಿದೆ.

ಬೊಂಬಯಿಯಲ್ಲಿ ಒಬ್ಬ ಮೆಮಿಸ್ಲಿಂ ತರಕಾರಿ ವ್ಯಾಪಾರಿಯನ್ನು ಒಬ್ಬ ಹಿಂದುವು ತಿವಿದು ಕೊಂದನು. ಹಾಗೇ, ಒಬ್ಬ ಹಿಂದುವನ್ನು ಒಬ್ಬ ಮುಸ್ಲಿಮನು ತಿವಿದ್ದು, ಆತನೀಗ ಆಸ್ಪತ್ರೆಯಲ್ಲಿ.

ಕಡಲೂರಿನಲ್ಲಿ ಸಾಲಿಯಾ ಬೀಬಿ ಎಂಬಾಕೆ ಮತ್ತೊಬ್ಬ ಹೆಂಗಸಿನಿಂದ ಒಂದು ಜತೆ ಬಂಗಾರದ ಬಳೆಗಳನ್ನು ಬಲಾತ್ಕಾರದಿಂದ ಸೆಳೆದುಕೊಂಡೂ, ಚೂರಿಯಿಂದ ತಿವಿದು ಗಾಯ ಮಾಡಿಯೂ ಇರುವಳೆಂದು ಆಕೆಗೆ ೭ ವರ್ಷಗಳ ಕಠಿನ ದಂಡನೆಯಾಗಿದೆ.

ತಲಚೇರಿಯಲ್ಲಿ ಮಿ. ಬೀಬರ್ ಎಂಬ ಆಂಗ್ಲೋ-ಇಂಡಿಯನನ್ನು, ಬಂಡಿಗಳ ನಿಲ್ದಾಣದಲ್ಲಿ ನಿಂತಿದ್ದ ಹಾಗೆ ಒಂದು ಹೋರಿ ಹಿಂದಿನಿಂದ ಬಂದಿರಿದು ಗಾಯಗಳಾಗಿ ಆತನು ಮೃತನಾದ.

ನಮ್ಮ ಚಕ್ರವರ್ತಿಗಳ ಕಿರೀಟಧಾರಣಾ ಮಹೋತ್ಸವ ಕಾಲದಲ್ಲಿ ನಮ್ಮ ಆಧಿಪತ್ಯದ ಪೋಲಿಸ್ ಶಾಖೆಯಿಂದ ಒಬ್ಬ ಡೆಪ್ಯುಟಿ ಸುಪರಿಂಟೆಂಡೆಂಟ್, ಒಬ್ಬ ಇನಸ್ಪೆಕ್ಟರ್, ಒಬ್ಬ ಸಬ್ ಇನಸ್ಪೆಕ್ಟರ್, ಒಬ್ಬ ಹೆಡ್ ಕಾನ್ಸ್‌ಟೇಬಲ್, ಒಬ್ಬ ಕಾನ್ಸ್‌ಟೇಬಲ್ ಹೀಗೆ ೫ ಮಂದಿಯನ್ನು, ಆ ಬಲದ ಪ್ರತಿನಿಧ್ಯದ ನಿರ್ವಾಹಕಕ್ಕಾಗಿ. ಕಳುಹಿಸಿಕೊಡುವಂತೆ ಇಂಡಿಯಾ ಸರಕಾರವು ಸ್ಥಳೀಯ ಸರಕಾರಕ್ಕೆ ಸೂಚಿಸಿದೆ.

ಕನ್ನಡಿಗರೇ!

ಬೊಂಬಯಿಯಲ್ಲಿ ಬಂದಿಳಿದಾಗ ಎಲ್ಲುಳಿದು ಕೊಳ್ಳಬೇಕೆಂದು ತಿಳಿದಿರುವಿರಾ?

ವೆಲ್ಕಂ ಹೊಟೆಲು

(MADRAS BRAHMINS' LODGE.)

(ಸ್ಥಾಪನೆ:—1912.)

(ಜನರಲ್ ಪೋಸ್ಟಾಫೀಸಿನ ಬಳಿ)

ಫ್ರಿಯರ್ ರೋಡ್, ಫೋರ್ಟ್, ಬೊಂಬೈ.

ತಾರಿನ ಪತ್ರೆ:—"ಕಾಣೆವಾರ್" ಟೆಲಿಫೋನ್:—21386

ಇದು ನಮ್ಮ 'ಸಿಲ್ವರ್ ಜುಬಿಲಿ' ವರ್ಷ! ಅಂದ ಬಳಿಕ ಹೆಚ್ಚಿನ ಪ್ರಶಂಸೆಗೆಡೆಯಿಲ್ಲ. ಸುಗ್ರಾಸ ಭೋಜನ, ಉತ್ಕೃಷ್ಟ ತಿಂಡಿ-ತೀರ್ಥಗಳು, ವಾಸಕ್ಕೆ ಸ್ವಚ್ಛವಾದ ಕೋಣೆಗಳು, ಬಲು ಸುಲಭ ದರ, ಹಣಕ್ಕೂ ಮಿಕ್ಕಿದ ಗುಣ—ಇವುಗಳು ಬೇಕೆಂದಿದ್ದರೆ ಈ ಸ್ಥಳವನ್ನೆಂದಿಗೂ ಮರೆಯಬೇಡಿರಿ.

ECONOMY

The Practice of rigid economy will make you a better businessman, a better man to your family and friends and a better citizen generally. We do not encourage any one to be stingy. But many persons have never stopped to consider, that between practicing economy and being stingy there is a vast difference.

A BANK ACCOUNT HERE WILL HELP YOU TO SAVE MONEY SENSIBLY.

THE PALAI CENTRAL BANK, LTD.,

(INCORPORATED IN TRAVANCORE.)

BUNDER ROAD, MANGALORE.

London Agents— Lloyds Bank, Ltd.

New York— National City Bank of New York

ದ. ಕನ್ನಡ

ಮೂಲ್ಕಿ:—ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ. ೫೧—೧೧—೩೬ನೇ ಶನಿವಾರ ಕಿಲ್ಪಾಡಿ ಬೋರ್ಡು ಹಿಂಪುಸ್ಥಾನಿ ಶಾಲೆಯಲ್ಲಿ ಶ್ರೀ। ಡಾಕ್ಟರ್ ಎಂ. ಆರ್. ಕಾಮತ್‌ರವರ ಅಧ್ಯಕ್ಷತೆಯಲ್ಲಿ ಜರಗಿತ್ತು. ಮುಂದಿನ ತಿಂಗಳ ಸಭೆಯು ಬರುವ ತಾ. ೫೧—೧೧—೩೬ನೇ ಶನಿವಾರ ಕೊಲಿಕಾಡಿ ವಿದ್ಯಾಪ್ರಚಾರಿಣೀ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡಲಿರುವುದು.

ಕಳೆದ ಸಪ್ಟಂಬರ್ ತಿಂಗಳಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಸ್ಥಳೀಕ ಬೋರ್ಡು ಹೈಸ್ಕೂಲಿನ ಹ್ರೋಯಿಂಗ್ ಮಾಸ್ಟರ್ ಶ್ರೀ। ಬಿ. ಪರಮೇಶ್ವರ ಬಾಯಿರಿಯವರು ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಕರ್ನಾಟಕ ಪ್ರಾಂತದಲ್ಲಿ ಪ್ರಥಮ ಸ್ಥಾನದಲ್ಲಿ ಪಾಸಾಗಿರುವರೆಂದು ಕೇಳಿ ಸಂತೋಷಪಡುತ್ತೇವೆ. ಶ್ರೀಯುತರಿಗೆ ನಮ್ಮ ಅಭಿವಂದನೆಗಳು!

ಇಲ್ಲಿಯ ಕಸ್ಟಮ್ಸ್ ಕಲೆಕ್ಟರ್ ಶ್ರೀ। ಪಿ. ಭೀಮರಾಯರಿಗೆ ಕೊಚ್ಚಿಗೆ ವರ್ಗವಾಗಿ ಮಿ। ಎ. ಡಿ. ಕುಂಞರವರು ಅವರ ಸ್ಥಾನಕ್ಕೆ ಬಂದಿರುವರು.

ಎಸೆಂಬ್ಲಿ ಚುನಾವಣೆಯ ನಿಮಿತ್ತ ಶ್ರೀ.ಗಳಾದ ಎ. ವರದ ರಾವ್, ಬಿ. ಎ., ಬಿ. ಎಲ್., ಬಿ. ವ್ಯಾಸರಾಯರ್, ಬಿ. ಎ., ಬಿ. ಎಲ್., ಇವರೇ ಮೊದಲಾದವರು ಇಲ್ಲಿ ಬಂದಿದ್ದು, ಕಳೆದ ತಾ. ೧—೧೧—೩೬ರಲ್ಲು ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ಸಾರ್ವಜನಿಕ ಸಭೆ ಸೇರಿ ಭಾಷಣಗಳು ನಡೆದುವು.

ಸ್ಥಳೀಕ ಹೈಸ್ಕೂಲಿನ ಪರವಾಗಿ ಏರ್ಪಡಿಸಿರುವ ಸೋಡ್ತಿಗೆ ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಖಾ. ಬ. ಬಿ. ಎಂ. ಹೆಗ್ಡೆ, ಬಿ. ಎ., ಬಿ. ಎಲ್.ರವರಿಂದ ಶುಭಸಂದೇಶ ಬಂದಿದೆಯಾಗಿ ತಿಳಿಯುತ್ತೇವೆ.

ಪಡುಪಣಂಬೂರು:—ಇಲ್ಲಿಯ ಸಂಗೀತ ಕಲಾ ಮಂದಿರದ (ಶಾಖೆ) ಪ್ರಥಮ ವಾರ್ಷಿಕ ಸಮಾರಂಭವು ಸ್ಥಳೀಕ ಬೋರ್ಡು ಶಾಲಾ ಕಟ್ಟಡದಲ್ಲಿ ಶ್ರೀಯುತ ಗೋಪಾಲಕೃಷ್ಣ ನ್ಯಾಕ್, ಬಿ. ಎ., ಬಿ. ಇ. ಡಿ.ರವರ ಅಧ್ಯಕ್ಷತೆಯಲ್ಲಿ ತಾ. ೧೧—೧೧—೩೬ರಲ್ಲು ಸಾಂಗವಾಗಿ ನೆರವೇರಿತು.

ಕರಂಬಾರು:—ಇದೇ ಕಳೆದ ತಾರೀಕು ೧೫—೧೧—೩೬ನೇ ಆದಿತ್ಯವಾರ ಕರಂಬಾರು ಶಾಲೆಯಲ್ಲಿ 'ಪೇಜಾವರ ಶ್ರೀ ಸರಸ್ವತಿ ಸಂಘ, ಕರಂಬಾರು' ಎಂಬ ಹೊಸ ಸಂಘದ ಸ್ಥಾಪನೆಯ ಸಲುವಾಗಿ ರಾತ್ರಿ ಗಂಟೆ ೯ಕ್ಕೆ ಮೂಂಪಾಡಿ ನಾರಾಯಣ ಭಾಗವತರ ಹಾಡುವಿಕೆಯಿಂದಲೂ, ಕಳುವಾರು ಸುಂದರ ಶೆಟ್ಟಿ ಮತ್ತೂ ಬೆಟ್ಟಿಕಲೆ ರಾಮಣ್ಣ ಅಜಾರಿಗಳವರ ಮೃದಂಗವಾದನದಿಂದಲೂ 'ವಾಲಿಸಂಹಾರ ಮತ್ತೂ ಅಂಗದಸಂಧಾನ'ವೆಂಬ ಪ್ರಸಂಗದ ಯಕ್ಷಗಾನ ಸಭೆಯಲ್ಲಿ ಮ. ರಾ. ರಾ. ಕಟ್‌ಪಾಡಿ ಸುಬ್ರಾಯರು, ಮ. ರಾ. ರಾ. ಕಾಸರಗೋಡು ಕೃಷ್ಣ ಭಟ್ಟರು, ಮ. ರಾ. ರಾ. ಬಡ್ಡ ದೇವಪ್ಪ ಶೆಟ್ಟರು, ಮ. ರಾ. ರಾ. ಪೇಜಾವರ ವಿಠಲ ಭಟ್ಟರು ಮೊದಲಾದ ಪ್ರಸಿದ್ಧ ಅರ್ಥಧಾರಿಗಳು ಅರ್ಥ ಹೇಳಿ ಸಭಿಕರ ಮನಸ್ಸನ್ನು ಸಂತೋಷಪಡಿಸಿ ಅವರ ಪ್ರೀತಿಗೆ ಪಾತ್ರರಾದರು. ಅಂತೂ ಬೆಳಿಗ್ಗೆ ಗಂಟೆ ೬ಕ್ಕೆ ಸಭೆಯು ಅತಿ ವಿಜೃಂಭಣೆಯಿಂದ ಮಂಗಳವಾಯಿತು.

'ಮೂಲ್ಕಿ ಗ್ರೇಂಡ್ ರೇಫಲ್'

ಜಿಲ್ಲೆಯಲ್ಲಿರುವ ಎಲ್ಲಾ ವಿದ್ಯಾಸಂಸ್ಥೆಗಳ ಮೆನೇಜರ್, ಅಧ್ಯಾಪಕರು, ಮತ್ತು ವಿದ್ಯಾರ್ಥಿ ಬಂಧುಗಳಲ್ಲಿ ಸಪ್ರೇಮ ವಿನಂತಿ.

ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥವಾಗಿ ನಾವು ಏರ್ಪಡಿಸಿರುವ ಸೋಡ್ತಿಯ ವಿಷಯ ತಾವು ಕೇಳಿರಬಹುದು. ಈಗಾಗಲೇ ಸುಮಾರು ೭೫೦೦ ಪುಸ್ತಕಗಳು ಹೊರಗೆ ಹೋಗಿವೆ. ಮುಂಬೈಯ ನಮ್ಮ ಹಲವು ಹಿತಚಿಂತಕರ ಸತ್ಸಹಾಯದಿಂದ ನಮಗೆ ಕನಿಷ್ಟಪಕ್ಷ ರೂಪಾಯಿ ೫,೦೦೦ಕ್ಕೆ ಕಡಿಮೆಯಾಗದೆ ಜಮೆಯಾಗಬಹುದೆಂಬ ದೃಢ ನಂಬಿಕೆಯು ನಮಗಿದೆ. ಇನ್ನು ನಮ್ಮ ಜಿಲ್ಲೆಯ ಪ್ರಸಿದ್ಧ ಸಂಸ್ಥೆಗಳಲ್ಲೊಂದಾದ ಸಿ. ಪಿ. ಸಿ. ಕಂಪೆನಿಯು ನಮಗೆ ಯುಕ್ತ ಹಸ್ತದಿಂದ ಸಹಾಯಮಾಡಲು ಸೊಂಟ ಕಟ್ಟಿದೆ. ಅಂತೆಯೇ ಕಂಬ್ಯಾಂಡ್ ಟುಕ್ಕಿಂಗ್ ಏಜನ್ಸಿಯು ಜ್ಯೊಂಟ್ ಮೆನೇಜರರೂ ನಮಗೆ ಧಾರಾಳ ಸಹಾಯಕೊಡುತ್ತಿರುತ್ತಾರೆ. ಕಾರ್ಕಳದಲ್ಲಿ ಶ್ರೀ। ಡಾಕ್ಟರ್ ಅಡ್ಯಂತಾಯರು ನಮಗಾಗಿ ಸಾಹಸಪಡುತ್ತಿರುವರು. ಇನ್ನು ಬೇಕಾಷ್ಟ ಸಹಾಯವೆಂದರೆ ನಮ್ಮ ಜಿಲ್ಲೆಯ ಎಲ್ಲಾ ವಿದ್ಯಾಸಂಸ್ಥೆಗಳದ್ದು. ಪ್ರತಿ ಒಂದು ಶಾಲೆಯವರು ನಮ್ಮ ಸಹಾಯಕ್ಕೆ ಬಂದು ಕೈಗೊಟ್ಟರೆ ಎಷ್ಟಿಲ್ಲಿಂದರೂ ರೂ. ೫೦೦೦ಕ್ಕೆ ಮಿಕ್ಕಿ ನಮಗೆ ದೊರಕೀತು; ಮತ್ತು ಇಷ್ಟು ಮಟ್ಟಿನ ಸಹಾಯವು ನಮಗೆ ದೊರೆಯಲೇ ಬೇಕು.

ನಮ್ಮ ಜಿಲ್ಲಾ ಬೋರ್ಡಿನ ಅಧ್ಯಕ್ಷ ಸನ್ಮಾನ್ಯ ದಿವಾನ್ ಬಹದೂರ್ ಬಿ. ಎಂ. ಹೆಗ್ಡೆ, ಬಿ. ಎ., ಬಿ. ಎಲ್.ರವರು ನಮಗೆ ಕಳುಹಿಸಿಕೊಟ್ಟ ಅಮೂಲ್ಯ ಸಂದೇಶವನ್ನು ತಾವೆಲ್ಲರೂ ನಮ್ಮ ಜಿಲ್ಲೆಯ ಎಲ್ಲಾ ವಾರ್ತಾಪತ್ರಿಕೆಗಳಿಂದ ತಿಳಿದಿರಬಹುದು.

ಬಂಧುಗಳೇ! ತಾವೆಲ್ಲ ಈ ಮಹತ್ಕಾರ್ಯದಲ್ಲಿ ಸಂಪೂರ್ಣ ಬೆಂಬಲ ಕೊಟ್ಟು ನಡಿಸಿದರೆ ನಮ್ಮ ಈ ಪ್ರಯತ್ನವು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ. 'ವಿದ್ಯಾದಾನಕ್ಕಿಂತ ಶ್ರೇಷ್ಠವಾದುದು ಮತ್ತೊಂದಿಲ್ಲ.' ಎಂಬ ಸಂಗತಿಯನ್ನು ತಾವು ಪ್ರತಿನಿತ್ಯವೂ ತಮ್ಮ ವ್ಯವಹಾರಗಳಲ್ಲಿ ಸಾರುತ್ತಿರುವಿರಿ. ಅದನ್ನು ಪ್ರತ್ಯಕ್ಷ ರುಜುಪಡಿಸುವ ಸುಸಂದರ್ಭವು ಒದಗಿದೆ. ಅಧ್ಯಾಪಕರೂ ವಿದ್ಯಾರ್ಥಿಗಳೂ ಈ ಭಾಗದಲ್ಲಿ ತಮ್ಮ ಸಂಪೂರ್ಣ ಸಹಕಾರವನ್ನೂ ಪ್ರೋತ್ಸಾಹವನ್ನೂ ಕೊಟ್ಟು ನಡಿಸುವುದು ಅವರ ಕರ್ತವ್ಯವೆಂದರೆ ಅತಿಶಯೋಕ್ತಿಯಾಗಲಾರದು, ಹಾಗೂ ತಪ್ಪಾಗದು. ಒಂದು ಸಹೋದರಿ ವಿದ್ಯಾಸಂಸ್ಥೆಯನ್ನು ಉಳಿಸುವ ಮಹತ್ಪುಣ್ಯಕಾರ್ಯವು ನಮ್ಮ ಮುಂದೆ ನಿಂತಿದೆ. ಅದ್ದರಿಂದ ವಿದ್ಯಾಭಿಮಾನಿಗಳೇ, ಅಧ್ಯಾಪಕರೇ, ಮತ್ತು ವಿದ್ಯಾರ್ಥಿಗಳೇ! ದಯವಿಟ್ಟು ಮುಂದೆ ಬನ್ನಿರಿ. ಸತ್ಸಹಾಯ ಮಾಡಿರಿ. ಪುಣ್ಯ ಕಟ್ಟಿಕೊಳ್ಳಿರಿ. ನಾವು ತಮ್ಮಿಂದ ಹೆಚ್ಚೇನೂ ಕೇಳಿಕೊಳ್ಳುವುದಿಲ್ಲ. ಪ್ರತಿ ಒಂದು ಶಾಲೆಯವರು ಒಂದೆರಡು ಪುಸ್ತಕಗಳನ್ನು ಖರ್ಚು ಮಾಡುವುದು ದೊಡ್ಡ ಕೆಲಸವಲ್ಲ.

ತರುಣ ವಿದ್ಯಾರ್ಥಿಗಳೇ, ನಾವು ನಿಮ್ಮಿಂದ ಹೆಚ್ಚಿನ ಸಹಾಯ ಬೇಡುತ್ತೇವೆ. ನೀವು ಮನಸ್ಸು ಮಾಡಿದರೆ ನಿಮ್ಮಿಂದಲೇ, ನಿಮ್ಮ ಮೂಲಕವೇ ನಮಗೆ ರೂ. ೫,೦೦೦ಕ್ಕೆ ಹೆಚ್ಚು ಜಮೆಯಾದೀತೆಂದು ನಾವು ನಂಬುತ್ತೇವೆ. ನಿಮ್ಮಿಂದಾಗುವಷ್ಟು ಯಶಸ್ವಿ ಕೆಲಸವು ಪಾಠ್ಯಾಯದವರಿಂದಾಗುವುದಿಲ್ಲ. ಹೀಗಿದ್ದು ನಮ್ಮ ಬೆಂಬಲಕ್ಕೆ ಬಂದು ಈ ಮಹತ್ಕಾರ್ಯವನ್ನು ಸಂಪೂರ್ಣ ಯಶಸ್ವಿಗೊಳಿಸುವ ಬಹು ಭಾರವು ನಿಮ್ಮನ್ನು ಕೂಡಿದೆ.

ಹೀಗೆ ನಮ್ಮ ಜಿಲ್ಲೆಯ ಎಲ್ಲಾ ವಿದ್ಯಾಸಂಸ್ಥೆಗಳು ತಮ್ಮಿಂದ ಕೂಡಿದ ಸಹಾಯವನ್ನು ನೀಡಬೇಕೆಂದೂ ಅಗತ್ಯವಿಲ್ಲದ ಪುಸ್ತಕಗಳಿಗೆ ಕೂಡಲೇ ಬರಕೊಳ್ಳಬೇಕೆಂದೂ ನಿವೇದಿಸುವ ಹಾಗೂ ಅಮೂಲ್ಯ ಪತ್ರವನ್ನು ಎಡೆಬಿಡದೆ ನಿರೀಕ್ಷಿಸುತ್ತಿರುವೆನೆಂದು ತಮ್ಮ ಸಹಾಯಾಭಿಲಾಷಿ, ಬಿ. ಭೋಜ ರಾವ್, ಕಾರ್ಯದರ್ಶಿ ಇವರ ವಿನಂತಿ.

'ಮೂಲ್ಕಿ ಗ್ರೇಂಡ್ ರೇಫಲ್'

ನಮಗೆ ಬಂದ ಸಂದೇಶ.

ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಸನ್ಮಾ. ರಾ. ರಾ. ದಿವಾನ್ ಬಹದೂರ್ ಬಿ. ಮಹಾಬಲ ಹೆಗ್ಡೆ, ಅವರ್ಗಳ್, ಬಿ. ಎ., ಬಿ. ಎಲ್.ರವರಿಂದ:—

ಮಂಗಳೂರು,

ತಾ. ೪—೧೧—೧೯೩೬.

ಮೂಲ್ಕಿ ಗ್ರೇಂಡ್ ರೇಫಲ್‌ನ ಕಾರ್ಯದರ್ಶಿಗಳಿಗೆ:—

ಪ್ರಿಯ ಭೋಜರಾಯರೇ!

ಮೂಲ್ಕಿ ಹೈಸ್ಕೂಲಿಗೆ ಹೊರಗಿನ ಆರ್ಥಿಕ ಸಹಾಯವು ತೀರ ಅವಶ್ಯಕವಾಗಿರುವುದರಿಂದ ಮೂಲ್ಕಿಯ ಮಹಾಜನರು 'ಮೂಲ್ಕಿ ಗ್ರೇಂಡ್ ರೇಫಲ್'ನ್ನು ಹೊರಡಿಸಿದುದು ಪವಿತ್ರ ಉದ್ದೇಶಪೂರ್ವಕವಾಗಿದೆಯೆಂಬ ಸಂಗತಿಯನ್ನು ನಾನು ಈ ಮೂಲಕ ಎಲ್ಲಾ ಜನರಿಗೂ ತಿಳಿಯಪಡಿಸುವವರೇ ಬಹಳ ಸಂತೋಷಪಡುತ್ತೇನೆ. ಈ ಉದ್ಯಮವು ಸಂಪೂರ್ಣ ಯಶಸ್ವಿಯಾಗಲೆಂದು ನಾನು ಕೋರುತ್ತೇನೆ.

ಬಿ. ಎಂ. ಹೆಗ್ಡೆ.

ನಮ್ಮ ಹಿತೈಷಿಗಳ ಪ್ರತ್ಯೇಕವಾದ ಅರಿಕೆಯ ಮೇರೆಗೆ ಕೊನೆಯ ತಾರೀಕನ್ನು ಮುಂದುವರಿಸಿದೆ.

ನಂಬ್ರ 11ನೆಯ ಒಗಟು.

೨೦೦೦ ರೂ.ಗಳನ್ನು ಗೆದ್ದು ಬಿಡಿ.

ಅಂಚೆಗೆ ಹಾಕುವ ಕೊನೆಯ ತಾ. 20-12-'36. ಫಲಿತಾಂಶ ಪ್ರಕಟಣೆ 28-12-'36.

ಸ್ಥಳೀಯವಾದ ಒಂದು ಬೇಂಕಿನಲ್ಲಿ ಠೇವಣಾತಿ ಇರಿಸಿರುವ ನಮ್ಮ ಮೊಹರು ನಿಶೆಯ ಉತ್ತರದೊಂದಿಗೆ ಪ್ರತಿಯೊಂದು ವಿಷಯದಲ್ಲಿಯೂ ತಾಳೆಬೀಳುವಂತೆ ಎಲ್ಲವೂ ಸರಿಯಾದ ಉತ್ತರಗಳನ್ನು ಕಳುಹಿಸುವವನಿಗೆ **6900/—** ರೂಪಾಯಿಗಳ ಪ್ರಥಮ ಬಹುಮಾನ ಕೊಡಲಾಗುವುದು. ಅತ್ಯಧಿಕ ಸಂಖ್ಯೆಯ ಉತ್ತರ ಕಳುಹಿಸುವವನಿಗೆ 1500 ರೂಪಾಯಿಗಳ ಪ್ರತ್ಯೇಕ ಬಹುಮಾನ. ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿದ್ದಲ್ಲಿ ಬಹುಮಾನಪ್ರವ್ಯವನ್ನು ಸಮಪಾಲಾಗಿ ಹಂಚಿ ಕೊಡಲಾಗುವುದು. 12—11—36ರೊಳಗೆ ಸರಿಯಾದ ಉತ್ತರ ಕಳುಹಿಸುವ ಪ್ರಥಮದ ಆರು ಮಂದಿಗಳಲ್ಲಿ ಪ್ರತಿಯೊಬ್ಬರಿಗೂ ತಲಾ ರೂ. 100ರಂತೆ ಆರು ಬಹುಮಾನಗಳನ್ನು ಹಂಚಿಕೊಡಲಾಗುವುದೆಂದು ಗ್ಯಾರಂಟಿ ಇದೆ. ಈ ಗ್ಯಾರಂಟಿ ಇರುವ ಬಹುಮಾನಗಳ ಹೊರತು, ಇತರ ಬಹುಮಾನಗಳು ಸ್ವೀಕರಿಸಲಾದ ಉತ್ತರಗಳ ಸಂಖ್ಯೆಯ ಮೇರೆಗೆ ಬದಲಾಗುವುವು. ಖರ್ಚು ಕಳೆದುಳಿದ ಎಲ್ಲ ಹಣವನ್ನೂ ಹಂಚಲಾಗುವುದು.



ಪೂರ್ಣಮಾಡುವುದು ಹೇಗೆ:—ಚೌಕದಲ್ಲಿರುವ 6ನ್ನು ಹಾಗೇ ಇರಿಸಿ, ಪೂಜ್ಯದಿಂದ ಹನ್ನೆರಡರ (0ದಿಂದ 12) ವರೆಗೆ ಅಂಕೆಗಳನ್ನು ಏರ್ಪಡಿಸಿಕೊಳ್ಳಿ; ಅನಂತರ ಚೌಕದ ಅಡ್ಡ ಸಾಲು, ಉದ್ದ ಸಾಲು, ಮೂಲೇ ಸಾಲು ಇವನ್ನು ಕೂಡಿಸಿದಲ್ಲಿ ಜುಮ್ಲಾ ಸಂಖ್ಯೆ 18 ಬರುವಂತೆ ಚೌಕವನ್ನು ತುಂಬಿಸಿರಿ. ಒಮ್ಮೆ ಉಪಯೋಗಿಸಿದ ಅಂಕೆಯನ್ನು ಪುನಃ ಉಪಯೋಗಿಸಬೇಡಿ.

ನಿಯಮಗಳು:—ಉತ್ತರ ಒಂದಕ್ಕೆ ಪ್ರವೇಶ ಹಾಸಲು ರೂ. ೪. ಈ ಹಾಸಲಿನ ಬಗ್ಗೆ ಪೋಸ್ಟಲ್ ಸ್ಟ್ಯಾಂಪುಗಳನ್ನು ಸ್ವೀಕರಿಸುವುದಿಲ್ಲ. ಹಾಗೂ ಸ್ಪರ್ಧೆಗಾರನ ಸರಿಯಾದ ದಸ್ಕತಿಲ್ಲದೆ, ಯಾವ ಉತ್ತರವೂ ಸಿಂಧುವಾಗಲಾರದು. ಬರೇ ಕಾಗದದ ಮೇಲೆ ಬರೆದ ಉತ್ತರಗಳನ್ನು ಸ್ವೀಕರಿಸಲಾಗುವುದು. ಉತ್ತರಗಳೊಂದಿಗೆ ಮನಿಯಾರ್ಡರ್ ೧ಶೀದಿಯನ್ನೂ ಲಗ್ತು ಇಡತಕ್ಕದ್ದು. 1936ನೇ ನವಂಬರ ತಾ. 2ರಿಂದ ಸ್ಥಳೀಯ ಉತ್ತರಗಳನ್ನು, ಆಫೀಸಿನ ಸಮಯದಲ್ಲಿ ಸ್ವೀಕರಿಸಲಾಗುತ್ತದೆ. ಎಲ್ಲ ವಿಷಯಗಳಲ್ಲಿಯೂ ವ್ಯವಸ್ಥಾಪಕರ ತೀರ್ಮಾನವೇ ಕೊನೆಯದು; ಕಾನೂನು ಪ್ರಕಾರ ಸಿಂಧು. ಈ ಸ್ಪರ್ಧೆಗೆ ಸೇರುವಲ್ಲಿ ಅದೇ ಸ್ಪಷ್ಟವಾದ ಒಂದು ಷರತ್ತು. ವಿಳಾಸ ಬರೆದ, ಸ್ಟ್ಯಾಂಪು ಹಚ್ಚಿದ ಕವರನ್ನು ಫಲಿತಾಂಶಕ್ಕಾಗಿ ಕಳುಹಿಸಿ. ಮನಿಯಾರ್ಡರ್ ಕೂಪನಿನ ಮೇಲೆ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ. ಎಲ್ಲ ಉತ್ತರಗಳನ್ನೂ ಫೀಸನ್ನೂ ಕಳುಹಿಸುವ ವಿಳಾಸ:—

THE ORGANIZER,
THE BOMBAY COMMERCIAL AGENCY,
Empire Building, Fort, BOMBAY.

ನೊರ್ದರ್ನ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿಯ ಮುದ್ರಾಸು ಶಾಖೆಯಲ್ಲಿ ದಸರೆಯ ಸಮಯದಲ್ಲಿ ಕೂಡಿದ ಅತಿಥಿಗಳ ಕೂಟದ ಭಾವಚಿತ್ರ.

ಸ್ಕಿವಬ್ಸ್ ಎಗ್ಯೂ ಸ್ಪೆಸಿಫಿಕ್
ಅಂದರೆ
ಕುದುರೆ ಗುರ್ತಿನ
ಜ್ವರದ ಔಷಧಿ

50 ವರ್ಷಗಳಿಂದ
ಪ್ರಸಿದ್ಧವಾದ ಔಷಧ

ವ್ಯಾಪಾರದ ಗುರುತು

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತೂ ಇತರ ಜ್ವರಗಳಿಗೆ

ನಕಲಿ ಸಾಧನಗಳ ಕುರಿತು ಜೋಕೆ

'ಸ್ಕಿವಬ್ಸ್ ಎಗ್ಯೂ ಸ್ಪೆಸಿಫಿಕ್' ಆಶ್ಚರ್ಯದ ಕೆಲಸ ಮಾಡುತ್ತಿದೆ. ಅದನ್ನು ಉಪಯೋಗಿಸಿದವರೆಲ್ಲ ಆಣೆ ಕೊಟ್ಟು ಹೇಳುತ್ತಾರೆ.' ಜಿ. ಜಿ. ಫೆಸಿ, ಲೋಕೋ ಡಿಪಾರ್ಟ್‌ಮೆಂಟ್, ಎ. ಎಂಡ್ ಬಿ. ರೈಲ್ವೆ, ಅಸ್ಸಾಮ್.

MADON SONS & COMPANY
Qualified Chemists, Bombay. 2.

29—11—1936

ನಗರದ ವಾಣಿಜ್ಯಕೇಂದ್ರ—ಆಧುನಿಕ ಸೌಕರ್ಯಗಳು—ವಿಶಾಲವಾದ ನೂತನ ಮಂದಿರ
—ಪರಿಶುದ್ಧ, ರುಚಿಕರ ತಿಂಡಿತಿನಸು, ಪಾನೀಯಗಳು—

ಮದರಾಸಿನ ಅಪ್ರತಿಮ ಉಪಹಾರಗೃಹ

ಮೈಸೂರ್ ಕೆಫೆ

ಇದರ ಪ್ರಾರಂಭೋತ್ಸವದ ಸುದಿನ.

ಪ್ರೊಪ್ರೈಟರ್ಸ್:— ಕೆ. ಗೋಪಾಲಾಚಾರ್ ಮತ್ತು ಕೆ. ಗುರುರಾಜಾಚಾರ್.

ಆರೋಗ್ಯ ವಿಜ್ಞಾನ

ಹೃದ್ರೋಗ.

(ಯ. ನಾ. ವಿಶ್ವಮಿತ್ರ)

ನವೀನ ಭಾರತದಲ್ಲಿ ಹೃದ್ರೋಗದ ಉಪಳಿದಿಂದ ದಿನವಹಿ ಹಲವು ಮರಣಗಳಾಗುವೆ. ಈ ರೋಗವನ್ನು ಬಾಲ್ಯಾವಸ್ಥೆಯಲ್ಲಿ ುರುತಿಸುವುದು ಕಷ್ಟ; ಯೌವನಾವಸ್ಥೆಯನ್ನು ೊಂದಿದಾಗ ಗುಣಪಡಿಸುವುದೂ ಕಷ್ಟ. ಈ ೋಗಿಗಳಿಗೆ ಅತಿರೇಕ ಕೋಪ—ಮೋಹ—ಂತೋಷಗಳಾದೊಡನೆಯೇ ಎದೆಗುಂಡಿಗೆಯ ್ಲಿ ರಕ್ತಪ್ರವಾಹವು ಹೆಚ್ಚಿ ಡಬ್ಬನೆ ಒಡೆಯುೃದು; ಒಡೆದೊಡನೆಯೇ ರೋಗಿಯ ಪ್ರಾಣ ಾಯುವೂ ಹಾರಿಹೋಗುವುದು. ಈ ರೋಗವು ಂಶಪಾರಂಪರ್ಯವಾಗಿ ಬರುವುದುಂಟು; ಪ್ರಕೃತಿಗೆ ದ್ರೋಹವನ್ಮಾಚರಿಸಿದ ಫಲವಾಗಿ ಅನುವಿಸುವುದೂ ಉಂಟು. ಈ ರೋಗಿಗಳು ವೈದ್ಯ ುಹಾಶಯರ ಬಿಡಾರವನ್ನು ಹೊಕ್ಕು ಹೊರಡುೃದಕ್ಕಿಂತಲೂ, ಬ್ರಹ್ಮಚರ್ಯಪಾಲನೆ—ನಿಯುತ ಭಾರತೀಯರ ವ್ಯಾಯಾಮ—ಸಾತ್ವಿಕ, ೌಷ್ಟಿಕ ಮಿತಾಹಾರ-ಪ್ರಾತಃಶೀತಜಲಸ್ನಾನ-ತ್ರಾಣಾಯಾಮಗಳಿಂದ ಅಲಭ್ಯ ಲಾಭ ಪಡೆಯುಹುದು. ವೀರ್ಯವಂತನಿಗೆ ಈ ರೋಗವೆಂೂ ಬಾರದು. ಹೃದ್ರೋಗಿಗಳು ವಿಶೇಷ ಶ್ರಮವಾಗುವ (ಭಾರ ಎತ್ತುವುದು, ಹೊರೆ ೊತ್ತುಕೊಂಡು ಓಡುವುದು) ಯಾವ ಕೆಲಸಕ್ಕೂ ಕೈಹಾಕದೆ, ಸದಾ ಉದ್ಯೋಗಿಯಾಗಿರುವುದುತ್ತಮ.

ಪಾಶ್ಚಾತ್ಯ ವ್ಯಾಯಾಮ ವಿಶಾರದರೂ ಹೃದ್ರೋಗದಿಂದ ಸಾಯುತ್ತಿರುವುದನ್ನು ವೃತ್ತ ಪತ್ರಿಕೆಗಳಿಂದ ನಾವು ತಿಳಿಯಬಹುದು. ಇದು ಅತಿರೇಕ ವ್ಯಾಯಾಮದ ಫಲ. ಜಗತ್ಪ್ರಸಿದ್ಧ ನೂರ್ತಿಯಾದ ಯೂಜಿನ್ ಸೇಂಡೊವು ಹೃದಯದೌರ್ಬಲ್ಯದಿಂದಲೇ ಮರಣಪಟ್ಟನು. ಇವನು ಭೀಮಕಾಯನಾಗಿ, ಸಿಂಹಸಮಾನ ಪರಾಕ್ರಮಿಯಾಗಿದ್ದರೂ ಅಲ್ಪವ್ಯಕ್ತಿಯಂತೆಯೇ ಮರಣಪಟ್ಟನು; ಈಗಲೂ ಪಾಶ್ಚಾತ್ಯ ವ್ಯಾಯಾಮ ಕ್ರಮಗಳು ಹಲವರನ್ನು ಕಬಳಿಸುತ್ತಿರುವುದರಿಂದ ಹೃದ್ರೋಗಿಗಳು ನಿರ್ದೋಷವಾದ ಭಾರತೀಯರ ವ್ಯಾಯಾಮಪದ್ಧತಿಯನ್ನು ಅನುಸರಿಸುವುದೇ ಉತ್ತಮ.

* * * *

ವ್ಯಾಯಾಮದ ಸೂತ್ರಗಳು.

೧. ವ್ಯಾಯಾಮ ಮಾಡುತ್ತಿರುವಾಗ ಎದುರುಗಡೆಯಲ್ಲಿ ವ್ಯಾಯಾಮಶಾಸ್ತ್ರವಿಶಾರದರಾದ ಪ್ರೊ. ಮಾಣಿಕರಾಯರು, ಪ್ರೊ. ಕೆ. ವಿ. ಅಯ್ಯರ್, ಜಗಜಟ್ಟಿ ಗಾಮ,—ಗುಲಾಮ, ಸ್ವಾಮಿ ಶಿವಾನಂದರು, ಶ್ರೀ ಆಂಜನೇಯ, ಭೀಮಸೇನ ಮೊದಲಾದವರ ಚಿತ್ರ—ಪ್ರತಿಮೆಗಳನ್ನು ಇಟ್ಟುಕೊಳ್ಳುವುದುತ್ತಮ. ಆ ಕಾಲದ ಮನಸ್ಥಿತಿಯಿಂದಲೇ ಭೋಗಿಯು ಯೋಗಿಯಾಗಿಯೂ, ಯೋಗಿಯು ಭೋಗಿಯಾಗಿಯೂ ಆಗಬಲ್ಲನು. ವ್ಯಾಯಾಮಕಾಲದಲ್ಲಿ ಏಕಾಗ್ರತೆಯಿಂದ—'ನನ್ನ ಉಸಿರಿನೊಂದಿಗೆ ದೀರ್ಘಾಯುಷ್ಯ, ಶಕ್ತಿ, ತೇಜಸ್ಸು, ಯಶಸ್ಸು, ಶಾಂತತೆ, ಮನೋನಿಗ್ರಹ, ಬ್ರಹ್ಮಚರ್ಯವು ಪ್ರವೇಶಿಸುತ್ತಿದೆ—ಖಂಡಿತವಾಗಿಯೂ ಪ್ರವೇಶಿಸಿದೆ. ನಾನು ಆದರ್ಶ ಮನುಷ್ಯನಾಗಬಲ್ಲೆನು-ನಿಜವಾಗಿಯೂ ಆಗಿದ್ದೇನೆ. ನಾನು ಪವಿತ್ರನಾಗಿದ್ದೇನೆ; ನನ್ನಿಂದ ದೋಷಗಳೆಲ್ಲಾ ಹೊರಟುಹೋಗಿವೆ' ಎಂಬುದನ್ನು ಮನನ ಮಾಡಿರಿ. ಇದೇ ವ್ಯಾಯಾಮ ಕಾಲದ ದಿವ್ಯ ಮಂತ್ರ.

೨. ಸೂರ್ಯನಮಸ್ಕಾರವನ್ನು ಮಾಡುವಾಗ ಮಾತ್ರ ಬೀಜಮಂತ್ರ ಉಚ್ಚಾರಕ್ಕಾಗಿ ಬಾಯಿಗೆ ಕೆಲಸಕೊಡಿರಿ. ಬೇರೆ, ಸ್ನಾಯು ಶಕ್ತಿಸಂವರ್ಧನೆಯ ವ್ಯಾಯಾಮದಲ್ಲಿ ಬಾಯಿಗೆ ವಿಶ್ರಾಂತಿಕೊಡಿರಿ. ಶ್ವಾಸೋಚ್ಛ್ವಾಸವು ಮೂಗಿನಿಂದಲೇ ನಡೆಯಲಿ.

೩. ಯಾವಾಗಲೂ ಶಕ್ತಿಯ ಅರ್ಧದಷ್ಟೇ ವ್ಯಾಯಾಮ ಮಾಡಿರಿ. ವ್ಯಾಯಾಮವಿಶಾರದನಾಗಬೇಕೆಂದು ಒಮ್ಮೆಗೇ ಅಧಿಕ ವ್ಯಾಯಾಮವನ್ನು ಮಾಡಬೇಡಿ. ಆಹಾರ—ವಿಹಾರ—ವಿಶ್ರಾಂತಿಯ ಅನುಕೂಲತೆಗಳನ್ನು ಯೋಚಿಸಿ, ಅನುಕೂಲತೆ ಕಂಡಲ್ಲಿ ಮುಂದರಿಯಿರಿ. ಅಧಿಕವೆಂಬುದು ನಾಶದ ದಾರಿಯ ಇನ್ನೊಂದು ಅರ್ಥವೆಂಬುದನ್ನು ಮರೆಯಬೇಡಿರಿ.

೪. ವ್ಯಾಯಾಮ ಮಾಡಿದೊಡನೆ ಬಾಯಾರಿಕೆಯಾದರೆ (ಅಧಿಕ ವ್ಯಾಯಾಮದ ಲಕ್ಷಣ) ಒಡನೆಯೇ ನೀರು ಕುಡಿಯಬೇಡಿರಿ; ನೀರಿನಿಂದ ಬಾಯಿಮುಕ್ಕಳಿಸಬಹುದು. ವ್ಯಾಯಾಮ ಮಾಡಿದ ಅರ್ಧಗಂಟೆಯ ತರುವಾಯ ಕೊತ್ತುಂಬರಿಯ ಬಿಸಿನೀರನ್ನು ಹಾಲು ಹಾಕಿ ಕೊಂಡು ಧಾರಾಳ ಉಪಯೋಗಿಸಿರಿ; ಹಾನಿ ಇಲ್ಲ.

೫. ಕನ್ನಡಿಯ ಮುಂದೆ ನಿಂತು ವ್ಯಾಯಾಮ ಮಾಡುವುದರಿಂದ ನಿಮ್ಮ ಮನಸ್ಸಿನಂತೆಯೇ ನಿಮ್ಮ ಆಕಾರವಾಗುವುದು.

೬. ಪ್ರಾತಃಕಾಲ, ಸಂಜೆ—ಇವೆರಡೇ ಸಮಯ ವ್ಯಾಯಾಮಕ್ಕೆ ಸರ್ವೋತ್ತಮವಾದುದು. ವ್ಯಾಯಾಮೋಪಾಸಕರಿಗೆ ಆರೋಗ್ಯವುಳ್ಳ ದನದ ಹಾಲಿನಿಂದ ಮಹತ್ಪ್ರಯೋಜನ ಸಿಕ್ಕುವುದು. ವೃದ್ಧಾಪ್ಯದಲ್ಲೂ ಮಿತವ್ಯಾಯಾಮದೊಂದಿಗೆ, ಹಾಲು, ಬೆಣ್ಣೆ, ತುಪ್ಪವನ್ನು ಮಿತವಾಗಿ ಉಪಯೋಗಿಸಿದ ಅನೇಕರಿಗೆ ಯೌವ್ವನದ ಉತ್ಸಾಹ ಬಂದುದುಂಟು. ಬಡವರು, ಮುಂಚಿನ ದಿನ ಸಂಜೆ ಇಡೀ ಕಡಲೆಯನ್ನು ಒಂದು ಯಾ ಎರಡು ಮುಷ್ಟಿಯಷ್ಟು ಒಂದು ಪಾತ್ರೆಯಲ್ಲಿ ನೆನಸಿಟ್ಟು, ವ್ಯಾಯಾಮೋತ್ತರ ಕಾಲುತಾಸಿನ ಮೇಲೆ ಚೆನ್ನಾಗಿ ಜಗಿದು ತಿನ್ನುವುದು ಉತ್ತಮ.

೭. ವ್ಯಾಯಾಮವಾದೊಡನೆಯೇ ಮೂತ್ರವನ್ನು ವಿಸರ್ಜಿಸಿರಿ. ಇದರಿಂದ ದೇಹದಲ್ಲೂ ಮನಸ್ಸಿನಲ್ಲೂ ಶಾಂತತೆ ನೆಲಸುವುದು.

೮. ಪುಷ್ಟಿಕರವಾದ ಆಹಾರವನ್ನು ಮಿತವಾಗಿ ಉಪಯೋಗಿಸಿರಿ. ಅರ್ಧರಾತ್ರಿಯ ಮೊದಲಿನ ನಿದ್ರೆಯನ್ನು ಬಿಡಬೇಡಿರಿ.

೯. ವ್ಯಾಯಾಮದ ಕಾಲು ಗಂಟೆಯ ಅನಂತರ ತಣ್ಣೀರಿನ ಘರ್ಷಣಸ್ನಾನವನ್ನು ಮಾಡಿರಿ. ನೈರ್ಮಲ್ಯದ ಕಡೆಗೆ ಲಕ್ಷ್ಯಕೊಡಿರಿ.

೧೦. ಬ್ರಹ್ಮಚರ್ಯವೇ ಶಕ್ತಿಯ ಆಗರವಾಗಿದ್ದೆಯೆಂಬುದನ್ನು ಮರೆಯದಿರಿ. ಬ್ರಹ್ಮಚರ್ಯವಿಲ್ಲದವನ ವ್ಯಾಯಾಮವು ವ್ಯರ್ಥ.

* * * *

ಸ್ನಾನ.

೧. ದಿನಕ್ಕೆರಡು ವೇಳೆ (ಪ್ರಾತಃಕಾಲ ೫ ಗಂಟೆಗೆ ಒಂದು, ಸಂಧ್ಯಾಕಾಲ ೬ ಗಂಟೆಗೆ ಒಂದು) ಸ್ನಾನಮಾಡುವ ಕ್ರಮವನ್ನಿಟ್ಟುಕೊಳ್ಳುವುದು ಉತ್ತಮವಾದುದು. ಭಾರತೀಯರ ಪ್ರಾಚೀನ ಪದ್ಧತಿಯಾದ ತ್ರಿಕಾಲ ಸ್ನಾನ—ಏಕಭುಕ್ತ-ಬ್ರಹ್ಮಚರ್ಯವೆಂಬ ಆರೋಗ್ಯದ ಹೂರಣವನ್ನು ಜೀರ್ಣಿಸಿಕೊಂಡವರಿಗೆ ದೀರ್ಘಾಯುಷ್ಯ, ದಿವ್ಯತೇಜಸ್ಸು, ದಿಗಂತವ್ಯಾಪ್ತ ಯಶಸ್ಸು ಪ್ರಾಪ್ತವಾಗುವುದು.

೨. ಸ್ನಾನಮಾಡುವಾಗ ಜರಟು ವಸ್ತುದ ತುಂಡಿನಿಂದ ಚರ್ಮವನ್ನು ಚೆನ್ನಾಗಿ ತಿಕ್ಕಿ ಸ್ನಾನ ಮಾಡಿರಿ. ಇದನ್ನೇ ಘರ್ಷಣಸ್ನಾನವೆನ್ನುವರು. ಘರ್ಷಣಸ್ನಾನವು ಆರೋಗ್ಯ-ಆನಂದ-ಆಯುಷ್ಯವನ್ನು ವೃದ್ಧಿಪಡಿಸುವುದರಲ್ಲಿ ಅಮೃತೋಪಮವಾದುದು.

೩. ಸ್ನಾನಕ್ಕೆ ನದಿ, ಕೆರೆ, ಬಾವಿಗಳ ನೀರೇ ಉತ್ತಮವಾದುದು. ಮುಳುಗಿ ವಿಹಾರವು ವ ಕ್ರಮವು ಸರ್ವೋತ್ತಮವಾದುದು. ಸ್ನಾನ ಮಾಡುವಾಗ ನೀರಿನಲ್ಲಿ ಈಜಾಡುವ ಕ್ರಮವನ್ನಿಟ್ಟುಕೊಂಡವರಿಗೆ ವಿಶಾಲವಾದ ಎದೆ, ಬಲಿಷ್ಠವಾದ ಕೈಕಾಲುಗಳು, ಪ್ರಸನ್ನವಾದ ಮುಖ ಮುದ್ರೆಯುಂಟಾಗುವುದು.

೪. ಸ್ನಾನಮಾಡುವ ಜಲಾಶಯಗಳ ಸುತ್ತು ಮುತ್ತಲೂ ನಿರ್ಮಲವಾಗಿದ್ದು, ನೀರು ಸ್ವಚ್ಛವಾಗಿರಬೇಕಲ್ಲದೆ, ಸೂರ್ಯರಶ್ಮಿಯು ನೀರಿನ ಮೇಲೆ ಚೆನ್ನಾಗಿ ಬೀಳುವಂತಿರಬೇಕು.

೫. ಪ್ರತಿದಿನವೂ ಶಿರಸ್ನಾನ ಮಾಡಿರಿ. ಆ ಕಂಠಪರ್ಯಂತ ಸ್ನಾನಮಾಡುವುದರಿಂದ ಶಿರೋರೋಗಗಳುಂಟಾಗುವುವು.

೬. ಸ್ನಾನವನ್ನು ಊಟಕ್ಕಿಂತ ಒಂದು ತಾಸು ಮೊದಲು ಅಥವಾ ಊಟವಾದ ಎರಡು ತಾಸುಗಳ ನಂತರ ಮಾಡುವುದುತ್ತಮ.



೭. ಹೊಟ್ಟೆ ತುಂಬಿರುವಾಗಲೂ, ಬಹಳ ಹಸಿದಿರುವಾಗಲೂ ಸ್ನಾನಮಾಡ ಬೇಡಿರಿ. ಇದರಿಂದ ಉದರವು ದುರ್ಬಲವಾಗಬಹುದು. ವ್ಯಾಯಾಮದೊಡನೆಯೇ ಸ್ನಾನಮಾಡುವುದರಿಂದ ಬಹಳ ಅಪಾಯವಾಗುವ ಸಂಭವವುಂಟು.

೮. ವೃದ್ಧರೂ, ಬಾಲಕರೂ, ರೋಗಿಗಳೂ ಹೊರತು ಉಳಿದವರೆಲ್ಲಾ ತಣ್ಣೀರಿನಿಂದ ಜಳಕ ಮಾಡುವುದುತ್ತಮ.

೯. ಗೃಹಸ್ಥಾಶ್ರಮಿಗಳು ವಾರಕ್ಕೊಮ್ಮೆ ತಣ್ಣೀರಿನಲ್ಲಿ ತೈಲಾಭ್ಯಂಗ ಮಾಡುವುದರಿಂದ ಬಹಳ ಉಪಯೋಗವಿದೆ.

೧೦. ಮೈ ತಿಕ್ಕುವ ಮತ್ತು ಒರಿಸುವ ಬಟ್ಟೆಯು ಒರಟಾಗಿದ್ದು ಚೊಕ್ಕವಿರಲಿ. ಸಾಬೂನನ್ನು ಮುಟ್ಟದಿರುವುದೇ ಲೇಸು.

* * * *

ಮಲಬದ್ಧತೆ.

ಮಲಬದ್ಧತೆಯು ಶ್ರೀಮಂತರ ರೋಗ. ಬಡವರ ಗುಡಿಸಲಿನಲ್ಲಿ ಇದಕ್ಕೆ ಪ್ರವೇಶ ದೊರೆಯದು. ವಿಲಾಸಿಗಳ ದೇಹವೇ ಮಲಬದ್ಧತೆಯ ವಿಶ್ರಾಂತಿಗೃಹ.

ಉದರದ ಜೀರ್ಣಾವಯವಗಳ ದೌರ್ಬಲ್ಯವೇ ಮಲಬದ್ಧತೆಯ ಪ್ರಬಲವಾದ ಕಾರಣ. ಜೀರ್ಣಾಂಗಗಳಲ್ಲಿ ಶುದ್ಧರಕ್ತವು ಓತಪ್ರೋತವಾಗಿ ಪ್ರವಹಿಸುತ್ತಿದ್ದರೆ ಕರುಳಿನಲ್ಲಿ—ಮಲಾಶಯದಲ್ಲಿ ಕಶ್ಮಲಗಳು ನಿಲ್ಲಬಲ್ಲವೇ? ಮಲಾಶಯದಲ್ಲಿ ಮಲವು ಸಂಗ್ರಹವಾದೊಡನೆಯೇ, ಅದು ಹಿಗ್ಗುಕುಗ್ಗುವಿಕೆಯಿಂದ ಮೆದುಳಿಗೆ ಸೂಚನೆಯನ್ನು ಕೊಟ್ಟು, ಕಶ್ಮಲವನ್ನು ಹೊರದೂಡಲು ಉತ್ತೇಜನ ಕೊಟ್ಟಲ್ಲಿ ಮಲಾಶಯವು ಪಾಯಿಖಾನೆಯ ಭಾಂಡವಾಗುವುದೆಂತು?

ಜೀರ್ಣಾಂಗಗಳು ದುರ್ಬಲವಾಗಲು ಅನೇಕ ಕಾರಣಗಳಿದ್ದರೂ ಅವುಗಳಲ್ಲಿ ಪ್ರಬಲವಾದವುಗಳನ್ನು ಮಾತ್ರ ಕೆಳಗೆ ಉದಾಹರಿಸುವೆನು,—

೧. ಮಾತಾಪಿತೃಗಳ ವಿಲಾಸತೆ—'ತೊಟ್ಟಿಲ ತೂಗಿದ ಕೈ ಜಗವನಾಳುವುದು' ಎಂಬ ಗಾದೆಯೇ, ಮಕ್ಕಳ ವಿಷಯದಲ್ಲಿ ತಂದೆತಾಯಿಗಳು ಕೆಗೆದುಕೊಳ್ಳಬೇಕಾದ ಜವಾಬ್ದಾರಿಯನ್ನು ಸೂಚಿಸುತ್ತಿದೆ. ವಿಲಾಸಿ ಮಾತಾಪಿತೃಗಳ ರಜವೀರ್ಯದಿಂದ ಉತ್ಪನ್ನವಾದ ಶಿಶುವಿನ ಶರೀರದಲ್ಲಿ ನರನಾಡಿಗಳ ಮತ್ತು ರಕ್ತದ ಶಕ್ತಿಯು ದುರ್ಬಲವಾಗಿರುವುದರಿಂದ ಪಾಚಕಾವಯವಗಳಿಗೆ ಮಲವನ್ನು ಹೊರ ನೂಕಲು ಶಕ್ತಿ ಸಾಲದೆ ಮಲವನ್ನು ಸಂಗ್ರಹಿಸುವುವು.

೨. ವ್ಯಕ್ತಿಗಳ ಜಿತೇಂದ್ರಿಯತನದ ಅಭಾವ—ನಿರ್ದೋಷಿಗಳಾದ ತಾಯಿತಂದೆಗಳ ಒಡಲಿನಿಂದ ಜನಿಸಿದ್ದರೂ, ತಾರುಣ್ಯದ ಮೋಹದಿಂದ ಅತಿರೇಕ ವೀರ್ಯನಾಶಮಾಡಿಕೊಳ್ಳುವುದರಿಂದಲೂ, ವೇಶ್ಯಾ ಸ್ತ್ರೀಯರ ಬಲೆಗೆ ಬಿದ್ದು ಭಯಂಕರ ರೋಗಗಳನ್ನು ಅಂಟಿಸಿಕೊಳ್ಳುವುದರಿಂದಲೂ, ಉದರದ ಅವಯವಗಳು ಊಹಿಸಲಾರದಷ್ಟು ದುರ್ಬಲವಾಗಿ ರೋಗಿಷ್ಠವಾಗುವುವು.

೩. ಊಟದ ಕಾಲದಲ್ಲಿ ತಣ್ಣೀರನ್ನು ಕುಡಿಯುವುದು—ಇದರಿಂದ ಹೊಟ್ಟೆಯು 'ಕುರುಸೆ' ಗಟ್ಟುವುದಲ್ಲದೆ, ಜೀರ್ಣ ರಸಗಳು ನೀರಾಗಿ, ಅಜೀರ್ಣವಾಗಿ ಮಲಬದ್ಧತೆಯಾಗುವುದು,—'ಅನ್ನದ ಸಂಗಡ ಹೋದ ನೀರಿಗೂ ಗಂಡನ ಸಂಗಡ ಹೋದ ಹೆಂಗುಸಿಗೂ ದೋಷವಿಲ್ಲ'ವೆನ್ನುವ ದೀಡ ಪಂಡಿತರ ಮಾತನ್ನು ನಂಬಬೇಡಿ. ಆಹಾರವನ್ನು ಸ್ವೀಕರಿಸಿದ ಅರ್ಧ ಗಂಟೆಯ ಅನಂತರವೇ ಬಿಸಿನೀರನ್ನು ಕುಡಿಯುವುದುತ್ತಮ. ಮಲಬದ್ಧತೆಯುಳ್ಳವರು ತಣ್ಣೀರನ್ನು ಕುಡಿಯಬಾರದು.

೪. ಊಟವಾದೊಡನೆಯೇ ಕೆಲಸ—ಊಟವಾದೊಡನೆಯೇ; ಮಾನಸಿಕ-ಶಾರೀರಿಕ ಕೆಲಸಗಳನ್ನು ಮಾಡುವುದರಿಂದ, ಶ್ರಮವಹಿಸಿದ ಅಂಗಗಳ ಕಡೆಗೆ ರಕ್ತವು ಹರಿದು, ಜೀರ್ಣಾಂಶಗಳಲ್ಲಿ ತಕ್ಕಷ್ಟು ರಕ್ತ ಹರಿಯದೆ ಅಜೀರ್ಣವಾಗುವುದು. ಅದಕ್ಕಾಗಿ ಉಂಡೊಡನೆ ಶತಪಥ ತಿರುಗಿ ಎಡ ಮಗ್ಗಲು ಕೆಳಗಾಗಿ ಮಲಗಿ ತುಸು ವಿಶ್ರಾಂತಿ ತೆಗೆದುಕೊಳ್ಳಿ.

೫. ತಾಮಸಾಹಾರಸೇವನೆ—ಬೇಗ ಜೀರ್ಣವಾಗದ ಆಹಾರಗಳನ್ನೂ, ಎಣ್ಣೆಯಲ್ಲಿ ಬೆಂದ ವಸ್ತುಗಳನ್ನೂ ಸೇವಿಸದಿರುವುದು ಉತ್ತಮ. ಅನಿರ್ವಾಹ ಸಮಯಗಳಲ್ಲಿ ಮಿತವಾಗಿ

(೧೫ನೇ ಪುಟಕ್ಕೆ ಮುಂದರಿಸಿಯಿದೆ)

ಅಖಿಲ ಹಿಂದುಸ್ಥಾನದಲ್ಲಿ ಪ್ರಖ್ಯಾತಿಪಟ್ಟ

ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್‌ರವರ ತ್ರಿಲೋಕ (ನಾರದ) ಮಾರ್ಕಿನ

ಸ್ಟೀಲು ಟ್ರಂಕುಗಳು, ಮತ್ತು ಸೂಟ್ ಕೇಸುಗಳು

ಅನೇಕ ವರ್ಷಗಳ ಮಾಹಿತಿಯಿಂದಲೂ, ಒಳ್ಳೇ ಕೆಲಸಗಾರರಿಂದಲೂ ಬಹಳ ನಾಜೂಕಾಗಿ ತಯಾರಿಸಲ್ಪಡುತ್ತಿವೆ. ನಮ್ಮಲ್ಲಿ ನಿಮ್ಮ ಬಟ್ಟೆಗಳು ಕೆಟ್ಟುಹೋಗದಂತೆಯೂ, ಬಹುಕಾಲ ಬಾಳಿಕೆ ಬರುವಂತೆಯೂ, ಮನಸ್ಸಿಗೆ ತೃಪ್ತಿಕರವಾಗುವ ರೀತಿಯಲ್ಲಿ ನಾನಾ ತರದ



ಸ್ಟೀಲು ಟ್ರಂಕುಗಳೂ, ಸೂಟ್ ಕೇಸುಗಳೂ, ಕ್ಯಾಬಿನ್ ಸೂಟ್ ಕೇಸುಗಳೂ, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳೂ, ಆಭರಣಗಳನ್ನಿರಿಸುವ ಕೈಪೆಟ್ಟಿಗೆಗಳೂ, ಕ್ಯಾಷ್ ಬೋಕ್ಸ್ ಇವೇ ಮೊದಲಾದುವುಗಳು ವಿಕ್ರಯಕ್ಕೆ ಸಿದ್ಧವಿರುತ್ತವೆ. ತ್ರಿಲೋಕ (ನಾರದ) ಟ್ರೇಡ್‌ಮಾರ್ಕಿನ ಮುದ್ರೆಯು ಮತ್ತು ಒಳಗಡೆ ಲೇಬಲ್ ನಮ್ಮ ಪ್ರತಿಯೊಂದು ಪೆಟ್ಟಿಗೆಯಲ್ಲೂ ಇರುವುದು. ಕ್ರಯಕ್ಕೆ ತಕ್ಕ ವ್ಯತ್ಯಾಸ ಬೇಕಾದಲ್ಲಿ ಈ ಟ್ರೇಡ್‌ಮಾರ್ಕುಗಳಿರುವ ಪೆಟ್ಟಿಗೆಗಳನ್ನು ಪರೀಕ್ಷಿಸಿ ಪಡಕೊಂಡು ಸಂತೋಷ ಪಡೆಯಿರಿ.

ವ್ಯಾಪಾರಸ್ಥರಿಗೆ ಸುಸಂದರ್ಭ. ನಮ್ಮ 'ಷೋ' ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ, ನಿಮಗೆ ಖಚಿತವಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಪ್ರೊಪ್ರೈಟರ್:—ಜಿ. ಟಿ. ಮಾಣಿಕ ನಾಯಗರ್.

ಹೆಡ್ ಆಫೀಸು: 22, ಬೇಕರ್ ಸ್ಟ್ರೀಟ್, ಜಿ. ಟಿ., ಮದ್ರಾಸು. ಬ್ರಾಂಚ್ ಆಫೀಸು: ರೈಲ್ವೇ ಗುಡ್ಸ್‌ಶೆಡ್ ಒಳಿ, ಮಂಗಳೂರು, ದ. ಕ.

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ಪೇಟೆಂಟ್.

ಡಾ. ವಾಮನ್ ಗೋಪಾಲರ

ಸರ್ಸಪರಿಲ್ಲಾ

ಟ್ರೇಡ್‌ಮಾರ್ಕ್.

೫ ವರ್ಷಗಳ ಅನುಭವದಿಂದ ಹಿಲ್ಲಿಯಗೆಟ್ಟ ಜನರು, ರಕ್ತ ಶುದ್ಧಿಕಾರಕ ಔಷಧಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ॥ ಗೌತಮರಾವ್ ಕೇಶವರಾವ್‌ರವರ ಜೊನಿಕ್ ಪೊಟೆನ್ಸಿ ಪೂರ್ತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ॥ ಗೌತಮರಾವ್ ಕೇಶವ್ ಎಂಡ್ ಸನ್, ಥಾಕೂರ್‌ದ್ವಾರ್ 2, ಬೊಂಬಾಯಿ.

JAYA LAXMI BANK, LTD.,
MANGALORE.

ಜಯಲಕ್ಷ್ಮೀ ಬೇಂಕ್,

ಲಿಮಿಟೆಡ್, ಮಂಗಳೂರು.

ಶಾಖೆಗಳು: ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರಟರಿ.

ಕಂಠೀರವ

ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾ ಪತ್ರಿಕೆ.

ಚಂದಾ ವಿವರ.

	ಸ್ಥಳದವರಿಗೆ	ಪರಸ್ಥಳದವರಿಗೆ
೧ ವರ್ಷಕ್ಕೆ	ರೂ. ೨—೮—೦	ರೂ. ೪— ೨—೦
೬ ತಿಂಗಳುಗಳಿಗೆ	ರೂ. ೧—೪—೦	ರೂ. ೨— ೧—೦

ಬಿಡಿ ಸಂಚಿಕೆ ಬೆಲೆ ಮಂಗಳವಾರ ೦—೧—೦.
ಶುಕ್ರವಾರ ೦—೦—೬.

ಮಾದರಿ ಸಂಚಿಕೆಗಳು ಅಪೇಕ್ಷಕರಿಗೆ ಧರ್ಮಾರ್ಥವಾಗಿ ಕಳುಹಲ್ಪಡುವುವು.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಬಿಡಿ ಸಂಚಿಕೆಗಳು ವಿಕ್ರಯಕ್ಕೆ ಸಿಗುವುವು.

ನಮ್ಮ ಏಜೆಂಟರಿಲ್ಲದ ಸ್ಥಳಗಳಲ್ಲಿ ಏಜೆಂಟರಾಗಲಪೇಕ್ಷಿಸುವವರು ಕೂಡಲೇ ಬರಕೊಳ್ಳಬಹುದು. ಧಾರಾಳವಾದ ಕಮಿಶನ್ ಕೊಡಲಾದೀತು.

Circulation Manager,
THE KANTEERAVA,
MANGALORE.

ವೆಂಕಟಗಿರಿ ಮಹಾತ್ಮೆ

೫೯೯ ಪಟ್ಟಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಸೂರೆಯಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಚಿತ್ರಗಳಿಂದ ಕೂಡಿದೆ.

ಮನೋಜ್ಞವಾದ ಮುದ್ರಣ.

ಬೆಲೆ ರೂಪಾಯಿ ೧—೮—೦.

ಪೋಸ್ಟಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗೀಯ ರಾಜ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಪಟ್ಟಿಕೆಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಪೋಸ್ಟಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಸುರಾತಿ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಚೀಜುಗಳ ಗ್ರಾಮೋಫೋನಿನಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ. ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೫ ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK,
Fort MIRAJ, (S.M.C.)

ಲಲಿತಕಲಾದರ್ಶಕ ಸಂಗೀತ ಶಾಲೆ,

ಕಾಳಿಕಾಂಬಾ ದೇವಸ್ಥಾನ ರಸ್ತೆ,
ಮಂಗಳೂರು.
(ESTD. 1931.)

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಶಾಸ್ತ್ರೀಯವಾಗಿ ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಮಾಸ್ಟರ್ ಎಚ್. ನಾರಾಯಣ ರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್ ಮತ್ತು ಉಭಯಸಂಗೀತವಿದ್ಯಾವಿಶಾರದ.

OLD FAMOUS

EAST & WEST
INSURANCE CO., LTD.

Bonus declared Rs. 15 per thousand per annum	Annual premium income over Rs. 5,00,000
Insurance in Force over Rs. 1,00,00,000	Life Fund over Rs. 10,00,000
Prompt settlement of claims.	Low rates of premiums and various attractive plans.

Attractive and liberal agency contracts are offered to honest, influential gentlemen

Inquiries solicited at:—

PADUBIDRI BROS.,
Chief Agents.
Maharashtra & Karnataka & East & West Khandesh Dist.,
BOMBAY 8.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.
ಶೀಸೆ 1ಕ್ಕೆ 12 ಆಣೆ; ಟ. ಖ. 9 ಆಣೆ.

ಸ್ಪೆಷಲ್ ಲಿವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ ಚಕ್ರಬಿಂದು ದಿವ್ಯೌಷಧವು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.
ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟ. ಖ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, ಮೈಸೂರು ಸೀಮೆ.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಖಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಳಿಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಲ್ಪಡುವುವು. ನಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.

ನೀರ ಮೇಲಿನ ಗುಳ್ಳೆ.

ಹರಿಜನರಿಗೆ ದೇವಾಲಯಪ್ರವೇಶಾಧಿಕಾರ ಕೊಡುವರೆ ತಂದಿದ್ದ ಮಸೂದೆಯು ಅಕಾಲಿಕವೆಂದು ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಹಿಂತೆಗೆಯಲಾಯಿತಂತೆ.! ಕಳೆದ ದಸರೆಯ ಒಡ್ಡೋಲಗದಲ್ಲಿ ಹರಿಜನ ಮುಖಂಡರಿಗೆ ಸಮಾನ ಸನ್ಮಾನವನ್ನು ಮಹಾರಾಜರಿತ್ತುದರಿಂದ ಉಡುಪಿಯ ಸನಾತನಿಗಳಿಗೆ ದುಃಖವಾಗದಿರದೆಂದು ಅಂದು ಬರೆದ ಮಹನೀಯರು ಇಂದು ಎಷ್ಟು ಪರಿತಾಪ ಪಡಬೇಡ? ಪಾಪ! ಭವಿಷ್ಯ ಘಟನಾವಳಿಯು ಆ ಪರೇಂಗಿತ ಜ್ಞಾನಿಗಳಿಗಾದರೂ ಹೇಗೆ ಗೊತ್ತಾದೀತು? ಅಸ್ಪೃಶ್ಯತಾನಿವಾರಣೆ—ಮಂದಿರಪ್ರವೇಶ ಇತ್ಯಾದಿ ಜಟಿಲ ಪ್ರಶ್ನೆಗಳು ಸಮಗ್ರ ಭಾರತದ ಸಾಮಾಜಿಕ ಸಮಸ್ಯೆಗಳಾಗಿದ್ದು ಹಿಂದೂ ಮಹಾಸಭೆಯೇ ಮುಂತಾದ 'ಬೃಹತ್' ಸಂಸ್ಥೆಗಳಿಗೂ ಅಗಮವಾಗಿರುತ್ತ ಈ ಮಹನೀಯರು ಉಡುಪಿಯ ಸನಾತನಿ ಬ್ರಾಹ್ಮಣರನ್ನೇ ಅರಿಸಿ ಅವರಿಗಾಗಿ ಮಕರಾಶ್ರುಗಳನ್ನು ಸುರಿಸಿದುದು ವ್ಯರ್ಥ! ಅಖಿಲ ಭಾರತದಲ್ಲಿ ಸನಾತನ ಪಂಥಾನುಯಾಯಿಗಳು ಅಸ್ಪೃಶ್ಯರಿಗೆ ಅಂತಹ ರಿಯಾಯಿತಿ ತೋರಿದರೆ ಉಡುಪಿಯ ಸನಾತನಿಗಳು ಮಾತ್ರ ಹಿಂದುಳಿಯುವರೆ?

× × × × ×

ಇತ್ತ ಅನಂತಶಯನದ ಅರಸರು ಅವರ್ಣರಿಗೆ ಮಂದಿರಪ್ರವೇಶದ ಅಧಿಕಾರ ಕೊಟ್ಟರುವುದು ಸ್ತುತ್ಯವಾಗಿದೆ. ಅಂತೆಯೇ ಗ್ವಾಲಿಯರಿನ ಇತ್ತೀಚೆಗೆ ಅಭಿಷಿಕ್ತರಾದ ಮಹಾರಾಜರೂ ಅಸ್ಪೃಶ್ಯತಾನಿವಾರಣೆಯ ಕುರಿತು ಬೇಗ ಯೋಚಿಸಿ ನಿರ್ಧರಿಸುವೆವೆಂದು ಭರವಸೆಯಿತ್ತಿರುವರು. ರಾಜಾಶ್ರಯ ದೊರೆಯಿತೆಂದರೆ ಯಾವ ಕಾರ್ಯವೂ ಕಠಿನವಲ್ಲ. ಇತರ ಕಡೆಗಳಲ್ಲಿ ಮಂದಿರಪ್ರವೇಶಕ್ಕೆ ಇನ್ನೂ ಕಾಲ ಬಂದಿಲ್ಲವಾದರೂ ಹರಿಜನರ ಅಭಿವೃದ್ಧಿಗಾಗಿ ಅತ್ಯಾವಶ್ಯಕವಿರುವ ಸ್ವಾಸ್ಥ್ಯ, ಶಿಕ್ಷಣ, ಸೈರ್ಮಲ್ಯ ಇತ್ಯಾದಿಗಳಲ್ಲಿ ಯತ್ನಿಸಲವಕಾಶವಿದೆ.

× × × × ×

ಉಡುಪಿಯ ಸಾರ್ವಜನಿಕ ಸಭೆಗಳೆಂದರೆ ಅದೊಂದು ಪ್ರೇಕ್ಷಣೀಯ ದೃಶ್ಯವೇ ಸರಿ! ನಿಶ್ಚಿತ ಗಂಟೆಗೆ ಸಭೆಗಳು ಪ್ರಾರಂಭವಾಗುವುದಂತಿರಲಿ. ಅವುಗಳ ಸಂಚಾಲಕರಾದರೂ ಅದಕ್ಕೆ ಮುಂಚಿತವಾಗಿ ಉಪಸ್ಥಿತರಾದರೆ ಪುಣ್ಯವೆನ್ನಿ. ಸಮುಯದ ಬೆಲೆ ತಿಳಿದವರು ಬಹು ವಿರಳವೆಂದರೆ ಅತಿಶಯವಾಗದು. ಅಲ್ಲದೆ ಅವರು ಇತರರ ಸಮಯಗಳನ್ನೂ ವ್ಯರ್ಥ ಹಾಳುಮಾಡುವರೆಂಬುದೂ ಅವರಿಗೆ ತೋರುವುದೇ ಇಲ್ಲ. ಕರಪತ್ರವಿತ್ತ ಮೇಲೆ ಹೇಗೂ ಬೆರಳೆಣಿಕೆಯಷ್ಟು ಜನ ಕೂಡಿದರೆಂದರೆ ಇನ್ನೂ ಸ್ವಲ್ಪ ಹೊತ್ತು ಕಾದರೂ ಸಭಾಭವನವು ಮತ್ತೂ ಖಾಲಿ! ಹತ್ತುಹನ್ನೆರಡು ಸಭಿಕರಿಗೆ ಭಾಷಣವೀಯುವುದಾದರೂ ಹೇಗೆ? ಕೊನೆಗೂ ನಿರಾಶೆಯಾಗಿ ಕೈಗೊಂಡ ಕಾರ್ಯಕ್ರಮದ ಅಭಿನಯವನ್ನು ಪೂರ್ತಿಮಾಡಲೇಬೇಕಷ್ಟೆ! ಇದನ್ನು ಸಾರ್ವಜನಿಕ ಸಭೆಯೆನ್ನುವುದಾದರೂ ಹೇಗೆ? ಆದರೆ ಈ ಸಭೆಗಳ ಜತೆಯಲ್ಲಿ ಗಾನನರ್ತನಾದಿ ಮುಫತ್ತಾದ ಕಾರ್ಯಕ್ರಮವನ್ನೇರ್ಪಡಿಸಿದರೆ ಮಾತ್ರ ಕೆಲವು ಸಲ ಜನಸಂದಣಿ ಸೇರುವುದಿದೆ. ಆದರೆ ಪ್ರತಿಸಲವೂ ಭಾಷಣಗಳಿರುವ ಸಮಯ ಇಂತಹ ಆಕರ್ಷಣಗಳನ್ನೆಲ್ಲಿಂದ ತರಬೇಕು? ಇಂತಹ ಶೋಚನೀಯ ಪರಿಸ್ಥಿತಿ ಬಂದಿದೆ ನಮ್ಮಲ್ಲಿ! ಸಭೆಯ ಭಾಷಣಗಳಂತೆ ಆಚರಿಸುವ ಯತ್ನಮಾಡುವುದಂತಿರಲಿ. ಕೇವಲ ಭಾಷಣಕರ್ತರ ಹೇಳಿಕೆಯನ್ನು ಶಾಂತಿಯಿಂದ ಕೇಳುವುದಕ್ಕಾದರೂ ಜನತೆಗೆ ಕ್ಷಮತೆ ಬೇಡವೆ? ಹೀಗಾಗಿ ಅನೇಕಾನೇಕ ಅಧಿವೇಶನಗಳು ಕೇವಲ ನಿರಾಶೆಯಲ್ಲಿ ಪರಿಣಮಿಸುತ್ತಿವೆ. ಒಂದು ವಿಶೇಷ ವಿಚಾರಣೀಯ ವಿಷಯವೇನೆಂದರೆ ಇಲ್ಲಿನ ಅನೇಕ ಶಿಕ್ಷಿತ ಮಹನೀಯರು ಸಭೆಗಳನ್ನಲಂಕರಿಸುವುದೇ ಇಲ್ಲ. ಎಷ್ಟೋ ವಕೀಲರು, ಉಪಾಧ್ಯಾಯರು, ಬೋರ್ಡು, ಮುನಿಸಿಪಾಲಿಟಿ ಮೆಂಬರರು ಇತರ ಉದ್ಯೋಗಸ್ಥರೂ ಇರುವರು. ಆದರೆ ಒಂದು ಕಡೆ ಸಭೆಯ ಪ್ರಕಟಣೆಯಾಯಿತೆಂದರೆ ಅದನ್ನು ಓದುವ ಪೂರ್ಣ ಉತ್ಸುಕತೆ ತೋರಿಸಿ ಅನಂತರ ಅಲ್ಲಿಗೆ ಬಂದು ಏನೇನು ವಿದ್ಯಮಾನಗಳು ನಡೆಯುವುವು, ಭಾಷಣಕೊಡುವವರೆಂತಹರೆಂದೂ ನೋಡುವ ಕೌತುಕವೇ ಅವರಿಗಿಲ್ಲವಾಗಿದೆ. ಶಿಕ್ಷಿತ ಸಮಾಜದ ಅವಸ್ಥೆಯೇ ಹೀಗಾದರೆ ಸಾಮಾನ್ಯಜನತೆಯ ಪಾಡೇನು?

× × × × ×

ನಮ್ಮ ನಾಡಿನ ಕೆಲವು ವೃತ್ತಪತ್ರಿಕೆಗಳ ಭಾಷೆಯು ದಿನೇ ದಿನೇ ವಿಚಿತ್ರವಾಗುತ್ತ ಬಂದಿರುವುದನ್ನು ಅನೇಕ ವಾಚಕರು ನೋಡಿರಬಹುದು. ಅದೊಂದಕ್ಕಾಲದಲ್ಲಿ ನಮ್ಮ ಪತ್ರಿಕೆಗಳು ಭಾಷಾಶುದ್ಧತೆಯ ಧ್ಯೇಯದಿಂದ ಉತ್ತಮವೆಂದು ಪರಿಗಣಿಸಲ್ಪಡುತ್ತಿದ್ದುವು. ಆದರೆ ಕದಾಚಿತ್ ಪಾಶ್ಚಾತ್ಯ ಭಾಷೆಗಳ ಸಂಘರ್ಷದಿಂದಲೋ ಅಥವಾ ಲೇಖಕರ ಅಲಕ್ಷ್ಯದಿಂದಲೋ ಅದು ಈಚೆಗೆ ಉಚ್ಛೃಂಖಲವಾಗುತ್ತ ಬಂದಿದೆ. ಹಲವೆಡೆಗಳಲ್ಲಿ ವ್ಯಾಕರಣಕ್ಕೆ ಗಮನ ಕೊಡದೆ ಉದ್ದುದ್ದವಾಗಿ ಬರೆದು ಅತ್ತ ವಿಷಯಗಾಂಭೀರ್ಯವೂ ಇತ್ತ ಭಾಷೆಯ ಲಾಲಿತ್ಯವೂ ಇಲ್ಲದಾಗಿದೆ. ಅನೇಕ ಶಬ್ದ, ವಾಕ್ಯಾಂಶ, ವಾಕ್ಯ, ಅಲಂಕಾರಾದಿಗಳನ್ನು ಆಂಗ್ಲಭಾಷೆಯಿಂದ ಎರವಾಗಿ ತಂದು ಉಪಯೋಗಿಸಿ ಅಸ್ವಾಭಾವಿಕವಾದೊಂದು ಭಾಷೆಯ ಸೃಷ್ಟಿಯಾಗುತ್ತಿದೆ. ಭಾಷೆಯು ಬೆಳೆಯುತ್ತಿರುವುದು. ಆವಶ್ಯಕತೆಗೆ ತಕ್ಕಂತೆ ಇತರ ಭಾಷೆಗಳ ಶಬ್ದಗಳು ಸೇರಿಹೋಗುವುದು ಎಲ್ಲಾ ಭಾಷೆಗಳಲ್ಲಿಯೂ ಇದೆ. ಇಂಗ್ಲಿಷ್-ಹಿಂದಿಯ ಅನೇಕಾನೇಕ ಶಬ್ದಗಳು ಈಗಾಗಲೇ ಬಂದುಹೋಗಿವೆ; ಅವನ್ನು ಆಕ್ಷೇಪಿಸಲಾಗುವುದಿಲ್ಲ. ಆದರೆ ಬರೆಯುವುದನ್ನು ತ್ರುಟಿಯಿಲ್ಲದೆ ಬರೆದರೆ ಏನೂ ಹಾನಿಯಿಲ್ಲ. ತಪ್ಪಾಗಿ ಬರೆದರೆ ಕಿವಿಗಿಂಪಾಗಿರುವುದಿಲ್ಲ. ಮುದ್ರಣಸ್ಖಾಲಿತ್ಯಗಳೂ (printers' devils) ಈಗೀಗ ಹೇರಳವಾಗಿವೆ. ದೊಡ್ಡಕ್ಷರದ ಶಿರೋನಾಮದಲ್ಲಿಯೂ ಆವರಣಪತ್ರಗಳಲ್ಲಿಯೂ ಇಂತಹ ಕೋತಿಗಳು ಬಿದ್ದುಹೋಗುವುದುಂಟು. ಉದಾಹರಣೆಗಾಗಿ—ವಿಶೇಷ, ದೋಷ, ಜನಾರ್ಧನ, ದಂಢನೆ, ಭೋಸರು, ಭೋದನೆ, ಬೇಧ, ಉಜ್ಜಾರಣೆ ಇತ್ಯಾದಿಗಳಲ್ಲಿ ಲೇಖಕರಿಗೆ ಆಗಾಗ ಕೈತಪ್ಪುಗಳಾಗುತ್ತಿವೆ. ಸ್ತ್ರೀಲಿಂಗವಾಚ್ಯಗಳು ಶುದ್ಧವಾಗಿರುವುದಿಲ್ಲ. ಇವನ್ನು ಸಂಪಾದಕರೂ ಪ್ರೂಫ್‌ರೀಡರ್‌ಗಳೂ ತಿದ್ದಬಹುದು. ಈ ರೀತಿಯ ತಪ್ಪುಗಳು ಬಂದರೆ ಭಾಷಾಪ್ರೇಮಿಗಳಿಗೆ ಅತೀವ ಬೇಸರವೂ, ಸಾಹಿತ್ಯಕ್ಕೆ ಹಾನಿಯೂ, ಉದಾಹರಣೆಯೆಂದು ತಿಳಿದು ಅನುಕರಿಸುವ ವಿದ್ಯಾರ್ಥಿಗಳಿಗೂ ಭ್ರಮೆಯೂ ಆಗುವುವು. ಜಾಹಿರಾತು (Advertisements) ಗಳಲ್ಲಂತೂ ಅದೊಂದು ವಿಚಿತ್ರ ಕೋಶವೇ ಆಗಿಹೋಗಿದೆ. ಅಂದು ಗಡಿಯಾರದ ವಿಜ್ಞಾಪನೆ ಕೊಡುತ್ತ 'ರೆಗ್ಯುಲೇಟರ್' ಗಡಿಯಾರವನ್ನು 'ಕಾಲನೇಮಿ'ಯೆಂದು ಕರೆದು ಒಂದು ಕಂಪೆನಿಯು ಅಮರವಾಗಿದೆ! ಕೆಲವೆಡೆಗಳಲ್ಲಿ ಸಂಸ್ಕೃತದ ಅನುಕರಣಗಳಿವೆ. 'ಕೈಗಾರಿಕಾ ಸಂಘ' ಇತ್ಯಾದಿ ಸಂಸ್ಕೃತದಂತೆ ಗಂಭೀರವಾಗಬೇಕೆಂದು ಕಸಿ ಮಾಡುವ ಹವ್ಯಾಸವೂ ಕಾಣುತ್ತಿದೆ. ಇದಕ್ಕಿಂತ ಅಚ್ಚ ಹೊನ್ನಗನ್ನಡದ ತಿಳಿನುಡಿಗಳಿಂದ ಹೇಳಿದರೆ ಸಾಲದೆ? ಎರವಾಗಿ ತಂದ ಆ ಭೂಷಣವು ಶಾಶ್ವತವಲ್ಲ; ಗೌರವವನ್ನು ಹೆಚ್ಚಿಸುವುದೂ ಇಲ್ಲ. ಕೊಂಗ್ರೆಸ್ ಅಧ್ಯಕ್ಷರನ್ನು 'ರಾಷ್ಟ್ರಪತಿ' ಎಂದು ಉಲ್ಲೇಖಿಸುವ ಪ್ರಥೆಯು ಕೆಲವು ಪತ್ರಿಕೆಗಳಲ್ಲಿದೆ. ಇದು ತೀರಾ ತಪ್ಪು. 'ರಾಷ್ಟ್ರಸಭಾಪತಿ' ಮತ್ತು 'ರಾಷ್ಟ್ರಪತಿ'ಗಳಲ್ಲಿ ಎಷ್ಟೊಂದು ಅಂತರವಿದೆ! ವೃತ್ತಪತ್ರಿಕೆಗಳೂ ಸಾಹಿತ್ಯದ ಶ್ರೀವೃದ್ಧಿಗೆ ಮುಖ್ಯ ಸಾಧನಗಳಾಗಿರುವುದರಿಂದ ಅವುಗಳ ಭಾಷೆಯೂ ಧೋರಣೆಗನುಗುಣವಾಗಿ ಶುದ್ಧವಾಗಿದ್ದು ಒಂದು ಶ್ರೇಣಿ (standard)ಯನ್ನು ಇಟ್ಟುಕೊಂಡಿರುವುದು ಶ್ರೇಯಸ್ಕರವು. ಹಾಗಲ್ಲದೆ ಈಗಿರುವ ಉಚ್ಛೃಂಖಲತೆಯು ಮುಂದರಿದರೆ ಸಾಹಿತ್ಯಕ್ಕೆ ತುಂಬಾ ಹಾನಿಯಾಗುವುದರಲ್ಲಿ ಸಂದೇಹವಿಲ್ಲ. ಪ್ರಾಂತೀಯ ಭೇದಗಳ ಕುರಿತು ಚರ್ಚೆಗೆಡೆಯಿಲ್ಲ. ಎಲ್ಲಾ ಭಾಷೆಗಳಲ್ಲಿಯೂ ಈ ಪ್ರಭೇದ ಇದ್ದೇ ಇದೆ. ಆದರೆ ಒಂದೊಂದು ಪ್ರಾಂತಕ್ಕೂ ಈ ರೀತಿಯ ಉಚ್ಚ ಶ್ರೇಣಿಯಿರುವುದೊಳ್ಳಿತು. ವೃತ್ತಿಕಾರ್ತರು ಈ ಕಡೆಗೆ ಲಕ್ಷ್ಯಕೊಡುವರೆ?

ಪುನರ್ ನವಯೌವನ
ಪ್ರತಿಯೊಂದು
ಪ್ರಾಣಸ್ಥಾನೇಂದ್ರಿಯಕ್ಕೆ
ಒಕಾಸಾದಿಂದ



1. ಈ ಮಾಂಸಗ್ರಂಥಿಯು ನಿಮ್ಮ ಜ್ಞಾನ, ಮೆದುಳಿನ ಶಕ್ತಿ ಮತ್ತು ಇಂದ್ರಿಯಚೈತನ್ಯವನ್ನು ಅಂಕೆಯಲ್ಲಿಟ್ಟುಕೊಳ್ಳುತ್ತದೆ.
2. ಈ ಮಾಂಸಗ್ರಂಥಿಯು ನಿಮ್ಮ ದೇಹದ ಬೆಳವಣಿಗೆ ಮತ್ತು ಆಕಾರವನ್ನು ಅಂಕೆಯಲ್ಲಿಟ್ಟುಕೊಳ್ಳುತ್ತದೆ.
3. ಈ ಮಾಂಸಗ್ರಂಥಿಯು ಹೃದಯ ಮತ್ತು ರಕ್ತ ಚಲನವನ್ನು ಅಂಕೆಯಲ್ಲಿಟ್ಟುಕೊಳ್ಳುತ್ತದೆ.
4. ಈ ಮಾಂಸಗ್ರಂಥಿಯು ಆಹಾರ ಮತ್ತು ಸಕ್ಕರೆಯ ಜೀರ್ಣಶಕ್ತಿಯನ್ನು ಅಂಕೆಯಲ್ಲಿಟ್ಟುಕೊಳ್ಳುತ್ತದೆ, ಮತ್ತು ಹಸಿವೆಯನ್ನು ವರ್ಧಿಸುತ್ತದೆ.
5. ಈ ಮುಖ್ಯ ಮಾಂಸಗ್ರಂಥಿಯು ಇಂದ್ರಿಯ ಚೈತನ್ಯ. ಮತ್ತು ಮನುಷ್ಯಶಕ್ತಿಯ ಬೆಳವಣಿಗೆ ಮತ್ತು ಪರಿಪೂರ್ಣತೆಯನ್ನು ಅಂಕೆಯಲ್ಲಿಟ್ಟುಕೊಳ್ಳುತ್ತದೆ.

ಒಕಾಸಾ ಹೇಗೆ ವರ್ತಿಸುತ್ತದೆ

ಒಕಾಸಾದ ಲಕ್ಷ್ಯವಿಡತಕ್ಕ ಗುಣಕಾರಿ ಪರಿಣಾಮದ ರಹಸ್ಯವು ಒಕಾಸಾವು ಒಂದೇ ಸವನೆ ಮೇಲ್ಕಾಣಿಸಿದ 5 ಮಾಂಸಗ್ರಂಥಿಗಳಿಗೂ ಸಾಧ್ಯವಾದಷ್ಟು ಉತ್ತಮವಾದ ಚೈತನ್ಯದಾಯಕ ವಿಧಾನವನ್ನು ಒದಗಿಸುವ ವಿಚಾರದಲ್ಲಿ ಅಡಕವಾಗಿರುತ್ತದೆ. ಈ ಶಾಸ್ತ್ರೀಯವೂ, ಸ್ವಾಭಾವಿಕವೂ ಆದ ರೀತಿಯಲ್ಲಿ ಕ್ಷಯವಾಗುವ ಮಾಂಸಗ್ರಂಥಿಗಳು ಪುನಃ ಚುರುಕಾಗುತ್ತವೆ ಮತ್ತು ನರಗಳು ಹೊಸ ಶಕ್ತಿ ಮತ್ತು ಸ್ಥಿತಿಸ್ಥಾಪಕ ಗುಣ ಹೊಂದುತ್ತವೆ.

ಒಕಾಸಾದ ಉಪಯೋಗದಿಂದ ನೀವು ನಿಶ್ಚಿತವಾಗಿಯೂ
ಯೌವನ ಮತ್ತು ಆರೋಗ್ಯಕರವಾಗಿ ಇರುವಿರಿ.
ಇಂದೇ ಒಕಾಸಾವನ್ನು ತೆಗೆದುಕೊಳ್ಳಲು ಆರಂಭಿಸಿರಿ.
ಕಳಕೊಂಡ ಚೈತನ್ಯ ಮತ್ತು ಶಕ್ತಿಯನ್ನು ಪುನಃ ಪಡೆಯಿರಿ.
ಒಕಾಸಾ ಎಲ್ಲಾ ಪ್ರಾಮುಖ್ಯ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲೂ ಸಿಗುತ್ತದೆ.
ಸಂಪೂರ್ಣ ಮಾಹಿತಿಪತ್ರಗಳಿಗೆ ಇವರಿಗೆ ಬರೆಯಿರಿ:—
OKASA CO., Ltd., 12, Rampart Row, Fort, P.O. Box No. 396, Bombay.

(೧೫ನೇ ಪುಟದಿಂದ)

ಸೇವಿಸಿರಿ. ಸೊಪ್ಪು, ತರಕಾರಿಗಳು (ಸಾತ್ವಿಕ), ಹಣ್ಣುಗಳೂ, ಜೀರ್ಣಾಂಗಗಳ ಶಕ್ತಿಯನ್ನು ಹೆಚ್ಚಿಸುವುವು. ಜೀರ್ಣಶಕ್ತಿಯು ಕಡೆಗೆ ಲಕ್ಷ್ಯವಿಟ್ಟು ದಿನಕ್ಕೆರಡು ವೇಳೆ ಮಾತ್ರ ಆಹಾರವನ್ನು ಸ್ವೀಕರಿಸಿರಿ. ಎರಡು ಊಟಗಳ ಮಧ್ಯೆ ಕೊತ್ತಂಬರಿ ಕಷಾಯವನ್ನು ಕುಡಿಯುವುದು ಉತ್ತಮ; ಬೇರೆ ಯಾವ ಆಹಾರವನ್ನೂ ಸ್ವೀಕರಿಸಬೇಡಿ. ರಾತ್ರಿ ತಂಪು ಆಹಾರ (ಮೊಸರು, ಸಾಸಿಮೆ) ವನ್ನು ತ್ಯಜಿಸಿರಿ. ರಾತ್ರಿ ಮಲಗುವ ಅರ್ಧ ಗಂಟೆಯ ಮೊದಲು ಎರಡು ಯಾ ಮೂರು ಸಿದ್ಧಿಬಿಸಿ ನೀರನ್ನು ಕುಡಿಯುವುದುತ್ತಮ. ಮಾಂಸಾಹಾರವನ್ನು ವರ್ಜಿಸಿರಿ.

೬. ವ್ಯಾಯಾಮವಿಮುಖತೆ—ಇಡೀ ದಿನ ಪೌಷ್ಟಿಕ ಆಹಾರಗಳನ್ನು ಮೆಲುಕಾಡುತ್ತಿದ್ದು ಗುಮ್ಮನಂತೆ ಕುಳಿತಿರುವುದರಿಂದ ಮಲಬದ್ಧತೆಯಾಗುವುದು. ಮಲಬದ್ಧತೆಯ ನಿವಾರಣೆಗೆ ನಿರ್ಮಲಗಾಳಿಯಲ್ಲಿ ಮಂತ್ರ ಸಹಿತ ಸೂರ್ಯನಮಸ್ಕಾರ—ಪ್ರಾಣಾಯಾಮ — ಉಡ್ಡಾಣ—ನೌಲಿ—ಶೀರ್ಷಾಸನಗಳು ಅತ್ಯುತ್ತಮವಾದುವು.

೭. ಚರ್ಮದ ಮಲಿನತೆ—ಚರ್ಮವನ್ನು ಸ್ವಚ್ಛವಿಟ್ಟಂತೆ ರಕ್ತವೂ ನಿರ್ಮಲವಾಗಿ ಆರೋಗ್ಯವು ಹೆಚ್ಚುವುದು.

೮. ನಿದ್ದೆಗೆಡುವುದು—ಅರ್ಧರಾತ್ರಿಯ ಮೊದಲಿನ ನಿದ್ದೆಗೆಡುವುದು; ಬೆಳಿಗ್ಗೆ ಒಂಭತ್ತು ಗಂಟೆಯ ವರೆಗೆ ಮಲಗುವುದು; ಹಗಲುನಿದ್ರೆ, ಇವೆಲ್ಲಾ ಜೀರ್ಣಾಂಗಗಳ ಶಕ್ತಿಯನ್ನು ಕುಗ್ಗಿಸುವುವು. ಸ್ವಪ್ನಹೀನವಾದ ಗಾಢನಿದ್ರೆ ಬರುವವನಿಗೆ ಮಲಬದ್ಧತೆಯು ಎಂದೂ ಅಂಟಿಕೊಳ್ಳದು.

ಮಲಬದ್ಧತೆಯು ಪ್ರಥಮ ಚಿಕ್ಕ ರೋಗವಾಗಿ ಕಂಡರೂ, ಮುಂದೆ ಇದರಿಂದ ಯಾವ ಯಾವ ಭಯಂಕರ ರೋಗಗಳು ಉಂಟಾಗಬಹುದೆಂದು ಊಹಿಸುವುದೂ ಅಸಾಧ್ಯ. ಕ್ಷಯ, ಹೃದ್ರೋಗಗಳು, ಮೆದುಳು, ಮೆದುಳು ಬಳ್ಳಿಯ ಸಂಬಂಧವಾದ ಸಾವಿರಾರು ರೋಗಗಳುಮಾನವನನ್ನು ಆವರಿಸಿ, ಯಾವ ಔಷಧಕ್ಕೂ ರೋಗವು ಜಗ್ಗದೆ, ಕ್ರಮೇಣ ರೋಗಿಯನ್ನು ಮೃತ್ಯುಮುಂದಿರಕ್ಕೇ ಎಳೆದೊಯ್ಯುವುವು.

ಸಹೋದರರೇ! ನೀವು ದಿನನಿತ್ಯ ಎರಡು ಸಲ ಊಟ ಮಾಡುತ್ತಿದ್ದಲ್ಲಿ ಎರಡು ಸಲ ಮಲವಿಸರ್ಜನೆಗೆ ಹೋಗಲೇ ಬೇಕು. ಚೆನ್ನಾಗಿ ಮಲವಿಸರ್ಜನೆಯಾಗದಿದ್ದರೆ ಊಟ ಮಾಡಬೇಡಿರಿ; ಜಲಪಾನಮಾಡಿ, ಮೈಯಿಂದ ಧಾರೆಕಟ್ಟಿ ಬೆವರಿಳಿಯುವ ವರೆಗೆ ವ್ಯಾಯಾಮವನ್ನು ಮಾಡಿ, ಒಡನೆಯೆ ಶೀರ್ಷಾಸನವನ್ನು ಮಾಡಿರಿ. ಕೂಡಲೇ ಮಲವಿಸರ್ಜನೆಯಾಗಲೇಬೇಕು—ಖಂಡಿತವಾಗಿಯೂ ಆಗುವುದು. ನೀವು ಚಾ, ಕಾಫಿ ಮೊದಲಾದ ಹೋಟೆಲು ಪಾನಗಳನ್ನು ಸೇವಿಸುತ್ತಿದ್ದರೆ, ಹೊಗೆಸೊಪ್ಪಿನ ವೀಳ್ಯ ಹಾಕುತ್ತಿದ್ದರೆ ಬೀಡಿ, ಸಿಗರೇಟುಗಳನ್ನು ಸೇದುತ್ತಿದ್ದರೆ, ಇವನ್ನೆಲ್ಲಾ ತ್ಯಜಿಸಬಲ್ಲಿರಾ? ತ್ಯಜಿಸುವಷ್ಟು ಆತ್ಮಶಕ್ತಿಯು ನಿಮ್ಮಲ್ಲಿದೆಯೇ?

ನಿಮ್ಮ ರಕ್ತವನ್ನು ಪುಷ್ಟಿಗೊಳಿಸಿ

ಕಳೆಗುಂದಿದ ರಕ್ತ ಮತ್ತು ರಕ್ತ ಕಡಿಮೆಯಾಗಿರುವಿಕೆಯ ಎಲ್ಲಾ ಸಂದರ್ಭಗಳಲ್ಲಿ— **ಹೆಪಿಲೆಕ್ಸ್**ನ ಆಶ್ಚರ್ಯಕರವಾದ ಪರಿಣಾಮವು— ರಕ್ತವನ್ನು ಕ್ರಮಗೊಳಿಸಲೂ ಪುಷ್ಟಿಗೊಳಿಸಲೂ ಅತ್ಯಗತ್ಯವಾಗಿರುವ ತಾಜಾ **ಕಲಿಜಸಾರವನ್ನು ಕಬ್ಬಿಣ, ಕ್ವಿನೀನು, ಕ್ಯಾಲ್ಶಿಯಂ, ಪೊಟ್ಯಾಶಿಯಂ** ಇತ್ಯಾದಿಗಳೊಡನೆ ಒಳಗೊಂಡಿರುವುದರಿಂದಾಗಿರುತ್ತದೆ. ನೀರು, ಹಾಲು ಅಥವಾ ಹಣ್ಣಿನ ರಸದಲ್ಲಿ ಸೇವಿಸಿ,

ಹೆಪಿಲೆಕ್ಸ್— ತೂಕವನ್ನು ಹೆಚ್ಚಿಸುತ್ತದೆ ಮತ್ತು ಚೈತನ್ಯವನ್ನು ಕಳೆಗೊಳಿಸುತ್ತದೆ.

HEPILEX

ಸೋಲ್ ಏಜೆಂಟರು:
ಲಕ್ಷ್ಮೀದಾಸ್ ದಯಾಭಾಯಿ ಮತ್ತು ಕಂಪೆನಿ,
ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,
6, ಫ್ರಿನ್ಸ್‌ಸೆಸ್ ಸ್ಟ್ರೀಟ್, ಮುಂಬಾಯಿ.



ಈ ಹತ್ಯಾಪರಾಧವ್ಯಾರದು?

ಗರ್ಭಾಶಯರೋಗಗಳನ್ನು ಹೊರಗೋಡಿಸಲಿಕ್ಕೆ ದ್ವಾರಿ ಹುಡುಕದಿದ್ದ್ದಲಕೆಯದೇ ಎಂದು ಸತ್ಯವು ಪ್ರಶಿಧ್ವನಿಗೊಡುತ್ತಿದೆ.

ಆಕೆಯ ಅಜಾಗರೂಕತೆಯಿಂದ ಯಾವುದೋ ಒಳಗೊಳಗೇ ಕತ್ತು ಹಿಸುಕಿ ಕೊಂದಂತೆ ಸಹಜಸಂತಾನವು ಆಕೆಗಿಲ್ಲದೇ ಹೋಗುತ್ತಿದೆ.

ಗರ್ಭಾಶಯರೋಗಗಳನ್ನು ಹೊರಗೋಡಿಸಿ ಆರೋಗ್ಯ ಸಂಪಾದಿಸಿದ ಸ್ತ್ರೀಗೆ ಸಹಜವಾದ ಸಂತಾನಸೌಖ್ಯವು ಲಭಿಸುತ್ತದೆ.

ಗರ್ಭಾಶಯರೋಗನಿವಾರಣೆಗೆ "ಲೋಧ್ರ" ವಿಟ್ಟದ್ದೇ ಹೆಸರು.

ಸಂತಾನಸಂಜೀವಿನಿ—ಆರೋಗ್ಯಪ್ರದಾಯಿನಿ "ಲೋಧ್ರ."

ಕೇಸರಿ ಕುಟೀರಂ, ಮದ್ರಾಸು.

ಉಡುಪಿ ಶ್ರೀ ಕೃಷ್ಣ ಭವನ, ಮಂಗಳೂರು.

ಹೆಡ್ ಆಫೀಸು:—ಮೌಂಟ್ ರೋಡ್, ಮದ್ರಾಸ್
ಬ್ರಾಂಚ್:—ಗಣಪತಿ ಹೈಸ್ಕೂಲಿನ ಸಮೀಪ

ಅನುಭವಸ್ಥ ಬ್ರಾಹ್ಮಣರಿಂದ ವಿಧಿಯುಕ್ತವಾಗಿ ಸಿದ್ಧಗೊಳಿಸಲ್ಪಡುವ ಉತ್ತಮವಾದ ತಿಂಡಿತಿನಸು ಮತ್ತು ಭೋಜನ!

ವಿದ್ಯುದ್ದೀಪಗಳುಳ್ಳ ಚೊಕ್ಕಟ ಕೊಠಡಿಗಳು. ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು.

ಯಾತ್ರಿಕರಿಗೂ ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸಗೃಹ!

ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ಪೂರ್ಣ ತೃಪ್ತಿಗೊಳಿಸುವಂಥವುಗಳೇ.

ಪ್ರೊಪ್ರೈಟರ್:—ಕೆ. ಕೃಷ್ಣರಾವ್.

ಪ್ಲೀಹ ಮತ್ತು ಯಕೃತ್ತಿನ ಬೆಳವಣಿಗೆಯಿಂದ ಮಕ್ಕಳನ್ನು ಕಾಪಾಡಿರಿ.

ಬಾಲಸಂಜೀವಿನಿಯನ್ನು ಉಪಯೋಗಿಸಿರಿ.

(ರಿಜಿಸ್ಟರ್ಡ್)

ಉತ್ತಮ, ಖರೆ ಮತ್ತು ತಾಜಾ ಆದ ಅದೊಂದೇ
ವಿಜಯನಗರಂ ಔಷಧ.

ವಿ. ಸೂ. ಅನೇಕ ಡಾಕ್ಟರರೂ, ಹೆತ್ತವರೂ 'ಬಾಲಸಂಜೀವಿನಿ' ಮಾತ್ರ ಈ ಭಯಂಕರ ರೋಗವನ್ನು ಎಷ್ಟೇ ಕಠಿಣತರದ್ದಾಗಿದ್ದರೂ ಫಲಕಾರಿಯಾಗಿ ಗುಣಪಡಿಸಬಲ್ಲುದೆಂದು ಅನುಭವ ಮಾಡಿಕೊಂಡಿರುವರು. ಅನೇಕ ಮಕ್ಕಳು ಇತರ ಎಲ್ಲಾ ಔಷಧಗಳನ್ನು ಉಪಯೋಗಿಸಿ, ಗುಣವನ್ನು ಪಡೆಯದೆ, ಇದನ್ನುಪಯೋಗಿಸಿ ಸಂಪೂರ್ಣ ಗುಣಲಾಭ ಪಡೆದಿರುವರು.

ಪಿಳ್ಳೈ ಪಾಪಯ್ಯ್ಯ ಪಾತ್ರುಡು ಮತ್ತು ಸಹೋದರ,
(ವಿಜಯನಗರಂ ಸಂಸ್ಥಾನದ ಆಯುರ್ವೇದ ಪಂಡಿತರು),
98—99 ಬ್ರೋಡೀಸ್ ರೋಡ್, ಮೈಲಾಪುರ್, :: ಮದ್ರಾಸು.
(ರಾಮಕೃಷ್ಣ ಮುತಿದ ಎದುರು).

"ದಿ ಮೂಲ್ಕಿ ಗ್ರೌಂಡ್ ರೇಫ್‌ಲ್"

(ಮೂಲ್ಕಿ ಹಾಯ್ ಸ್ಕೂಲಿನ ಸಹಾಯಾರ್ಥ)

ಎ. ಬಿ. ಶೆಟ್ಟಿ, ಎಸ್ಕ್ವಾಯರ್, ಎಂ. ಎಲ್. ಸಿ.,
ಪ್ರೆಸಿಡೆಂಟ್.

ಡಾಕ್ಟರ್ ಯಂ. ಆರ್. ಕಾಮತ್, ಎಲ್. ಎಂ ಪಿ
ವೈಸ್-ಪ್ರೆಸಿಡೆಂಟ್.

ಬಿ. ಭೋಜ ರಾವ್, ಎಸ್ಕ್ವಾಯರ್,
ಕಾರ್ಯದರ್ಶಿ.

ಲೆಖ್ಖ ಆಖೈರಿ ತಾರೀಕು **25-1-1937.** ಸೋಡ್ತಿ ತೆಗೆಯುವ ತಾರೀಕು **31-1-1937.**

ಟಿಕೇಟು 1ರ ಖರೀದಿ ಆಣೆ ನಾಲ್ಕು ಮಾತ್ರ.

20 ಟಿಕೇಟುಗಳಿರುವ ಪುಸ್ತಕಕ್ಕೆ ರೂ. 5—0—0 ಮಾತ್ರ.

ಜನರಲ್ ಸಮಿತಿಯ ಇತರ ಸದಸ್ಯರು:

1. ಮಾ। ರಾ। ರಾ। ಎಮ್. ಆರ್. ಪೂಂಜ, ಅವರ್ಗಳ್. 2. ಚಾರ್ಲ್ಸ್ ಪಿ. ಅರಾನ್ಹಾ, ಎಸ್ಕ್ವಾಯರ್. ಮಾ। ರಾ। ರಾಗಳಾದ 3, ಜೋಳ ವಾಸುದೇವ ರಾವ್. 4. ವಿ. ನರಸಿಂಹ ಕಾಮತ್. 5. ವಿ. ಕೆ. ಪ್ರಭು. 6. ಎಮ್. ಚಂದಯ ಶೆಟ್ಟಿ. 7. ಕೆ. ರಾಜು ಹೆಗ್ಡೆ. 8. ಯು. ಕೃಷ್ಣ ರಾವ್. 9. ಯು. ಕೃಷ್ಣರಾಯ ಶೆಣೈ. 10. ಎಮ್. ಕೆ. ಬಸಪ್ಪ, ಅವರ್ಗಳ್. 11. ಎಮ್. ಬಿ. ಇದ್ದಿನಬ್ಬ, ಎಸ್ಕ್ವಾಯರ್. ಮಾ। ರಾ। ರಾಗಳಾದ 12. ಎಚ್. ಶ್ರೀನಿವಾಸ ಎ. ಶೆಣೈ. 13. ಎಚ್. ಸುಬ್ಬ ಚಂಪಾ. 14. ಎಮ್. ಕೆ. ಪೂವಪ್ಪ. 15. ಎಮ್. ಆರ್. ಸುವರ್ಣ. 16. ಕೆ. ಯು. ಪೈ, ಬಿ. ಎ. 17. ಯು. ದೇವರಾಯ ಶೆಣೈ. 18. ಪಂಡಿತ್ ಎಚ್. ವಾಸುದೇವಯ್ಯ. 19. ಪಿ. ಜೋಗಪ್ಪ ಕಾಮತ್. 20. ಬಿ. ಪದ್ಮನಾಭ ಭಟ್, ಅವರ್ಗಳ್. 21. ಆರ್. ಅರಾನ್ಹಾ, ಎಸ್ಕ್ವಾಯರ್. ಮಾ। ರಾ। ರಾಗಳಾದ 22. ಕೆ. ಕೃಷ್ಣ ರಾವ್, ಬಿ. ಎ., ಎಲ್. ಟಿ. 23. ಕೆ. ಅಣ್ಣಪ್ಪ ಭಟ್‌ಜೀ. 24. (ಡಾಕ್ಟರ್) ಎಮ್. ಉಮೇಶ ರಾವ್, ಎಲ್. ಎಮ್. ಎಂಡ್ ಎಸ್. 25. (ಡಾಕ್ಟರ್) ಕೆ. ಶ್ಯಾಮ ಶೆಟ್ಟಿ, ಎಲ್. ಎಮ್. ಪಿ. 26. ಯು. ವಿ. ಶೆಣೈ, ಅವರ್ಗಳ್. 27. ವೆರಿ ರೆವರೆಂಡ್ ಜೋಜ್ಫ್ ಮೆನೆಜಸ್, ಡಿ. ಡಿ. (ವಿಕಾರ್).

ಟಿಕೇಟು ಪುಸ್ತಕ ಇತ್ಯಾದಿ ವಿವರಕ್ಕೆ ಕಾರ್ಯದರ್ಶಿಯವರಿಗೆ ಬರಕೊಳ್ಳಿರಿ.

ಕೆಮೆಲ್ ಮತ್ತೂ ರಾಕ್ಸೀ ಫೌಂಟನ್ ಪೇನುಗಳು.



ಈ ಪೇನುಗಳು ಇಷ್ಟೊಂದು ಪ್ರಖ್ಯಾತಿಯನ್ನೂ, ಜನಪ್ರೀತಿಯನ್ನೂ ಸಂಪಾದಿಸಲು ಕಾರಣಗಳೇನು ಬಲ್ಲಿರಾ? ಈ ಕೆಳಗಿನ ಗುಣವಿಶೇಷಗಳೇ!—

(1) ಮುರಿಯಲಾರದ ಕೊಳವೆ.
(2) ಮೊದಲನೆ ತರಗತಿಯ 14 ಕ್ಯಾರೆಟಿನ ಬಂಗಾರದ ನಿಬ್ಬು; ಅದರೊಂದಿಗೆ 'ಇರಿಡಿಯಮ್ ಪಾಯಿಂಟ್'
(3) ಮೊದಲನೆಯ ತರಗತಿಯ ರೋಲ್ಡ್ ಗೋಲ್ಡಿನ ಸುತ್ತುಂಗುರ ಮತ್ತೂ 'ಕ್ಲಿಪ್'ಗಳು.
(4) ದೋಷರಹಿತವಾದ ಸಂಪೂರ್ಣ ರಚನೆ.
(5) ಇಚ್ಛಾನುಸಾರದ ಉಪಯೋಗಕ್ಕೆ ಗ್ಯಾರೆಂಟಿ.
(6) ಜನಪ್ರೀತಿಯನ್ನು ಸಂಪಾದಿಸಿದ ಯಾವತ್ತು ಬಣ್ಣಗಳಲ್ಲಿ, ಪಾರದರ್ಶಕವಾದ ಎಲ್ಲ ಮಾದರಿಗಳಲ್ಲಿ ದೊರೆಯುತ್ತವೆ.

Sole Distributors:—

HORNBY FOUNTAIN PEN DEPOT,
204, Hornby Road, Fort,
BOMBAY.

12, 18-8. Tel. CAMELPEN.

ಡಬ್ಲ್ಯು. ಥರ್ ಹೆಮೋರ್ಹಾಯ್ಡಲ್ ಆಯಿಂಟ್‌ಮೆಂಟ್



ಮೂಲವ್ಯಾಧಿಗೆ

ರಕ್ತ ಸುರಿಯುವ ಅಥವಾ ಸುರಿಯುವಂಥಾದ್ದು, ಒಡಕುಗಳು, ವ್ರಣ, ನೋವುವ ಹುಣ್ಣು, ಕೆಲವೇ ಲೇಪನಗಳು ಶುಭ್ರಗೊಳಿಸುವಾಗಲೇ ಗುಣಪಡಿಸುತ್ತವೆ.

ಡಬ್ಲು. ಥರ್ ಹೆಮೋರ್ಹಾಯ್ಡಲ್ ಆಯಿಂಟ್‌ಮೆಂಟ್.

ನಿಮ್ಮ ಕೆಮಿಸ್ಟರಿಂದ ಪಡೆಯಿರಿ.

ಕ್ರಯ ಸಳಿಗೆಯೊಂದಕ್ಕೆ ರೂ. 1/12/-. ಅಂಚೆವೆಚ್ಚ ಬೇರೆ.

ಸೋಲ್ ಏಜೆಂಟರು:
ಲಕ್ಷ್ಮೀದಾಸ್ ದಯಾಭಾಯಿ ಮತ್ತು ಕಂಪೆನಿ,
ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್,
6, ಫ್ರಿನ್ಸ್‌ಸೆಸ್ ಸ್ಟ್ರೀಟ್, ಮುಂಬಾಯಿ.

ಸೌಂದರ್ಯಪ್ರೇಮ

(ಎಸೆಸ್. ಬಿ. ಟಿ. ಜಿ. ಕೃಷ್ಣ)

ಸೌಂದರ್ಯಕ್ಕೆ ಅನೇಕ ರೂಪಗಳಿವೆ. ಪ್ರಾಕೃತಿಕ ಸೌಂದರ್ಯ, ಸ್ತ್ರೀ ಅಥವಾ ಪುರುಷರ ಸೌಂದರ್ಯ, ವಿಚಾರ ಅಥವಾ ಕಲ್ಪನಾ ಸೌಂದರ್ಯ, ಕಲಾರಚನಾ ಸೌಂದರ್ಯ ಇತ್ಯಾದಿ. ಸೌಂದರ್ಯಕ್ಕೆ ಹೇಗೆ ಅನೇಕ ರೂಪಗಳಿವೆಯೋ ಹಾಗೆಯೇ ಮನುಷ್ಯರ ಸೌಂದರ್ಯ ಪ್ರೇಮದಲ್ಲೂ ಭಿನ್ನ ಭಿನ್ನ ರುಚಿಗಳಿರುತ್ತವೆ. ಕೆಲವರಿಗೆ ಸಂಗೀತಪ್ರೇಮವಿದ್ದರೆ ಕೆಲವರಿಗೆ ಚಿತ್ರಕಲೆಯ ಪ್ರೇಮವಿರುತ್ತದೆ; ಮತ್ತೆ ಕೆಲವರು ಪ್ರಾಕೃತಿಕ ಸೌಂದರ್ಯಕ್ಕೆ ಮನಸೋತಿರುತ್ತಾರೆ. ಆದರೆ ನಾನೀಗ ಬರೆಯುವುದು ಕೇವಲ ಎರಡೇ ತರದ ಸೌಂದರ್ಯಪ್ರೇಮುಗಳ ವಿಷಯವಾಗಿ. ಸ್ತ್ರೀಯ್ಯರ್ಲ್ಲಿ ಈ ಎರಡು ಪ್ರಕಾರದ ಪ್ರೇಮುಗಳಿರುವುದು ಅತ್ಯಾವಶ್ಯಕವಾಗಿದೆ. ಮೊದಲನೆಯದು ವೈಯಕ್ತಿಕ ಸೌಂದರ್ಯದ ಪ್ರೇಮ (Love of Personal beauty); ಎರಡನೆಯದು ಗೃಹಸೌಂದರ್ಯದ ಪ್ರೇಮ.

ಮೊದಲನೆಯ ತರದ ಸೌಂದರ್ಯಪ್ರೇಮವನ್ನು ಎರಡು ಭಾಗಗಳಲ್ಲಿ ವಿಭಾಗಿಸಬಹುದು. (೧) ಶಾರೀರಿಕ ಸೌಂದರ್ಯ ಪ್ರೇಮ ಮತ್ತು (೨) ಅಲಂಕಾರಿಕ ಸೌಂದರ್ಯ ಪ್ರೇಮ. (Love of decorative beauty) ಸಮಸ್ತ ಶರೀರದ ಸೌಂದರ್ಯ ಮತ್ತು ಆರೋಗ್ಯದ ವಿಷಯದ ಪ್ರೇಮುವೇ ಶರೀರ ಸೌಂದರ್ಯ ಪ್ರೇಮುದ ತಾತ್ಪರ್ಯವಾಗಿದೆ. ಇಂಥಾ ಸೌಂದರ್ಯಕ್ಕೆ ಕೇವಲ ಮುಖದ ಸೌಂದರ್ಯವೇ ಸಾಲದು. ಶರೀರದ ಪ್ರತ್ಯೇಕ ಅಂಗವೂ ಸುಂದರ ಹಾಗೂ ಸುಘಟಿತವಾಗಿರಬೇಕು. ಮುಖ ಮತ್ತು ಶರೀರದ ಸೌಂದರ್ಯದಲ್ಲಿ ಒಂದರ ವಿನಹ ಮತ್ತೊಂದು ಉಳಿಯಲಾರದಷ್ಟು ದೊಡ್ಡ ಸಂಬಂಧವಿದೆ. ಮುಖವು ಸುಂದರವಾಗಿದ್ದರೂ ದೇಹವು ಸುಂದರವಾಗಿಲ್ಲದಿದ್ದರೆ ಮುಖದ ಲಕ್ಷಣವು ಕೆಟ್ಟು ಹೋಗುತ್ತದೆ. ಆದರೆ ಸುಂದರ ದೇಹವಿದ್ದು ಸಾಧಾರಣ ಮುಖವಿದ್ದರೂ ಸಹ ಮನೋಹರವಾಗಿ ತೋರುತ್ತದೆ. ಶಾರೀರಿಕ ಸೌಂದರ್ಯದ ದೊಡ್ಡ ಶತ್ರುಗಳೆಂದರೆ ಕಾಯಿಲೆ ಹಾಗೂ ಆಲಸ್ಯ. ಇವೆರಡನ್ನೂ ದೂರವಿಡುವುದು ಬಲು ಸುಲಭ. ಸ್ವಾಸ್ಥ್ಯನಿಯಮಗಳನ್ನು ಪಾಲಿಸಿಕೊಂಡು ಉಚಿತ ರೀತಿಯಿಂದ ಯಾವಾಗಲೂ ವ್ಯಾಯಾಮವನ್ನು ಮಾಡಿದುದೇ ಆದರೆ ಇವೆರಡೂ ಹತ್ತಿರ ಸುಳಿಯಲಾರವು.

ಸ್ವಾಸ್ಥ್ಯ ಸುಧಾರಿಸಲು ಆಹಾರದ ವಿಷಯದಲ್ಲಿ ಹೆಚ್ಚಿನ ಧ್ಯಾನವಿಡುವುದು ಅಗತ್ಯವಾಗಿದೆ. ಹಣ್ಣುಗಳನ್ನೂ ಕಾಯಿಪಲ್ಯಗಳನ್ನೂ ಹೆಚ್ಚಾಗಿ ಸೇವಿಸಬೇಕು. ಅನ್ನ ಮಾಂಸ ಮತ್ತು ರೊಟ್ಟಿಗಳನ್ನು ಉಚಿತ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು. ತಿನ್ನುವ ಪದಾರ್ಥಗಳಲ್ಲಿ ಯಾವ ಯಾವ ಗುಣಗಳಿವೆ, ಊಟದಲ್ಲಿ ಯಾವ್ಯಾವ ಪದಾರ್ಥ ಎಷ್ಟೆಷ್ಟಿರಬೇಕು. ಮತ್ತು ಅವನ್ನು ಯಾವ ತರದಿಂದ ಅಡಿಗೆ ಮಾಡಿದರೆ ಅಧಿಕ ಲಾಭವಾಗಬಹುದು ಇತ್ಯಾದಿಗಳು ಪ್ರತಿಯೊಬ್ಬ ಬಾಲಿಕೆಯೂ ಸ್ತ್ರೀಯೂ ತಿಳಿದಿರಬೇಕಾದ ವಿಷಯಗಳಾಗಿವೆ. ಭೋಜನ ಸಂಬಂಧಿ ನಿಯಮುಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು. ಬೇಕಾದುದಕ್ಕಿಂತ ಹೆಚ್ಚು ಎಂದೂ ಊಟಮಾಡಬಾರದು. ಬೇಕಾದುದಕ್ಕಿಂತ ಹೆಚ್ಚಾಯ್ತು ಎಂಬುದರ ಸೂಚನೆಯೇ ತೇಗು ಬರುವುದಾಗಿದೆ. ಯುರೋಪಿನಲ್ಲಿ ತೇಗುವುದು ಶಿಷ್ಟಾಚಾರದ ನಿಯಮಗಳಿಗೆ ವಿರೋಧವಾಗಿದೆ. ಏಕೆಂದರೆ ತೇಗುವುದು ಹೊಟ್ಟೆಬಾಕತನದ ಲಕ್ಷಣ. ನಮ್ಮ ದೇಶದಲ್ಲಂತೂ ಜನರು ತೇಗು ಬಂದರೂ ಸಹ ಹೊಟ್ಟೆಯ ಬಟ್ಟೆಗಳನ್ನು ಸಡಲಿಸಿಕೊಂಡು ಮತ್ತೂ ಮತ್ತೂ ತಿನ್ನುತ್ತಿರುತ್ತಾರೆ. ಇದರಿಂದ ಅನೇಕ ಪ್ರಕಾರದ ಕಾಯಿಲೆಗಳುಂಟಾಗುವುದಲ್ಲದೆ ಆಜನ್ಮಪರಿಯಂತ ಒಂದಲ್ಲ ಒಂದು ನಮೂನೆಯ ರೋಗಕ್ಕೆ ವಶರಾಗಿಕೊಂಡೇ ಇರಬೇಕಾಗುತ್ತದೆ. ಆದುದರಿಂದ ಊಟದ ವಿಷಯವಾಗಿ ಪ್ರತಿಯೊಬ್ಬ ಓದುಬರಹ ತಿಳಿದ ಸ್ತ್ರೀಯೂ ಆ ಸಂಬಂಧವಾದ ಪುಸ್ತಕಗಳನ್ನು ಓದಿ ತಿಳಿದುಕೊಳ್ಳಬೇಕು.

ರಾತ್ರಿ ಊಟವಾದೊಡನೆಯೇ ನಿದ್ರೆ ಮಾಡುವ ಪದ್ಧತಿಯು ಅನೇಕರಲ್ಲಿದೆ. ಇದರಿಂದ ಹೊಟ್ಟೆಯ ಸಂಬಂಧವಾದ ಕಾಯಿಲೆಗಳ ಉತ್ಪತ್ತಿಯಾಗುತ್ತದೆ-ನಿದ್ರೆ ಸರಿಯಾಗಿ ಬರುವುದಿಲ್ಲ-ಭಯಂಕರ ಸ್ವಪ್ನಗಳು ಕಾಣುತ್ತವೆ. ಇತ್ಯಾದಿ, ಇತ್ಯಾದಿ. ರಾತ್ರೆ ಊಟ ಮಾಡಿ ಮಲಗಬೇಕಾದರೆ ಕಮ್ಮಿ ಪಕ್ಷ ಎರಡು ಗಂಟೆಗಳ ಅಂತರವಾದರೂ ಇರಬೇಕು. ಹೀಗೆ ಮಾಡುವದರಿಂದ ಚೆನ್ನಾಗಿ ನಿದ್ರೆ ಬರುವುದಲ್ಲದೆ ಆರೋಗ್ಯವೂ ಉತ್ತಮವಾಗುವುದು. ಸ್ವಪ್ನವಿಹೀನನಿದ್ರೆಯೇ ಸೌಂದರ್ಯದ ಪರಮೌಷಧ.

ಶಾರೀರಿಕ ಸೌಂದರ್ಯಕ್ಕೆ ವ್ಯಾಯಾಮವೂ ಒಂದು ಸಾಧನ. ಪ್ರತಿದಿನವೂ ಸ್ವಚ್ಛವಾಗಿ ಗಾಳಿಯಾಡುವ ಸ್ಥಳದಲ್ಲಿ ವ್ಯಾಯಾಮ ಮಾಡಬೇಕು. ಪ್ರತ್ಯೇಕ ಅಂಗಗಳಿಗೂ ವ್ಯಾಯಾಮವಾಗಬೇಕು. ವಿಶೇಷವಾಗಿ ಸೊಂಟ ಮತ್ತು ಹೊಟ್ಟೆಗೆ ವ್ಯಾಯಾಮ ಅತ್ಯಗತ್ಯ. ಇವುಗಳಲ್ಲಿ ಬಹು ಬೇಗ ಸ್ಥೂಲತೆಯು ಬರುವುದರಿಂದ ಮುಖವು ಕಾಂತಿಹೀನವಾಗುವುದು. ಓಡುವುದು ಮತ್ತು ಜೋರಾಗಿ ನಡೆಯುವುದು ಸಹ ಶರೀರಕ್ಕೆ ಬಹಳ ಒಳ್ಳೆಯದು. ಮೆಲ್ಲ ಮೆಲ್ಲನೆ ನಡೆದರೆ ವ್ಯಾಯಾಮವಾಗುವುದಿಲ್ಲ. ಪ್ರತಿಯೊಬ್ಬ ಮಹಿಳೆಗೂ ತನ್ನ ಶರೀರವನ್ನು ಸುಂದರವೂ ಸುಘಟಿತವೂ ಮಾಡಿಕೊಳ್ಳಬೇಕೆಂಬ ಬಯಕೆ ಇರಬೇಕು. ಯುರೋಪಿನಲ್ಲಿ ಸ್ತ್ರೀಯರಿಗಾಗಿ ಸ್ವಾಸ್ಥ್ಯ ಮತ್ತು ಸೌಂದರ್ಯಗಳನ್ನು ಹೆಚ್ಚಿಸುವ ಶಿಕ್ಷಣವನ್ನು ಕೊಡುವ ಸಲುವಾಗಿಯೇ ಅನೇಕ ಸಂಘಗಳಿವೆ. ನಮ್ಮಲ್ಲೂ ಈ ತರದ ಸಂಸ್ಥೆಗಳ ಆವಶ್ಯಕತೆಯಿದೆ.

ಶರೀರದ ಸೌಂದರ್ಯವನ್ನು ಹೆಚ್ಚಿಸುವ ವಸ್ತುಗಳಲ್ಲಿ ಒಡವೆ-ವಸ್ತುಗಳ ಸ್ಥಾನವು ಮುಹ ಕ್ಷಪೂರ್ಣಡ್ಡಾಗಿದೆ. ಆದುದರಿಂದ ಪ್ರತಿಯೊಬ್ಬ ಸ್ತ್ರೀಯೂ ಯಾವ ಬಣ್ಣದ ವಸ್ತ್ರ-ತನಗೊಪ್ಪುತ್ತದೆ, ಯಾವ ಬಣ್ಣದ ಜೊತೆಯಲ್ಲಿ ಯಾವ ಬಣ್ಣ ಉಪಯೋಗಿಸಬೇಕು ಎಂಬುದರ ವಿಷಯ ತಿಳಿದುಕೊಂಡಿರಬೇಕು. ಲಲಿತೆಗೆ ನೀಲಿ ಸೀರೆ ಬಲು ಚೆನ್ನಾಗಿ ಒಪ್ಪಿದರೆ ಕಮಲೆಗೂ ಅದು ಒಪ್ಪಬೇಕೆಂತಿಲ್ಲ. ಪ್ರತಿಯೊಂದು ವಸ್ತುಗಳೂ ಅವುಗಳವುಗಳ ಉಚಿತ ಸ್ಥಳಗಳಲ್ಲಿದ್ದರೆ ಮಾತ್ರ ಚೆನ್ನಾಗಿ ಕಾಣುತ್ತವಷ್ಟೆ. ಹಾಗೆಯೇ ಅವುವರ ಸೌಂದರ್ಯ ವಿಕಾಸಿತವಾಗುವುದಕ್ಕೆ ಅನುಕೂಲವಾದ ವಸ್ತ್ರ ಧಾರಣೆ ಮಾಡಲು ಕಲಿಯುವುದು ಸಹ ಒಂದು ಕಲೆಯಾಗಿದೆ. ಧನಿಕ ಕುಟುಂಬದ ಸ್ತ್ರೀಯರು ಒಡನೆ ವಸ್ತುಗಳಿಗಾಗಿ ಬಹಳ ಹಣವನ್ನು ಖರ್ಚುಮಾಡುತ್ತಾರೆ. ಆದರವರು ಅವುಗಳನ್ನು ಚುನಾಯಿಸುವುದರಲ್ಲಿ ಸುರುಚಿಯನ್ನುಪಯೋಗಿಸುವುದು ಕಡಿಮೆ. ಇದೇ ಪ್ರಕಾರವಾಗಿ ಅವರು ಒಡವೆಗಳಲ್ಲಿಯೂ ರುಚಿಗೆಡೆಗೊಡದೆ ಹೆಚ್ಚು ಕ್ರಯದ ವಸ್ತುವಾದುದರಿಂದ ಸುಂದರವಾಗಿಯೇ ಇವೆ ಎಂದು ತೊಟ್ಟುಕೊಳ್ಳುತ್ತಾರೆ. ಆದರೆ ಇದರಿಂದ ಅವರ ಸೌಂದರ್ಯದ ಶೋಭೆಯು ಹೆಚ್ಚುವುದರ ಬದಲು ಕಮ್ಮಿಯಾಗುತ್ತದೆ. ಹುಡುಗಿಯರಿಗೆ ಚಿತ್ರಕಲೆಯನ್ನು ಕಲಿಸುವುದರಿಂದ ಅವರಿಗೆ ಅಲಂಕಾರ, ಭೂಷಣ ಮತ್ತು ರಂಗುಗಳ ಸಾಮಂಜಸ್ಯಗಳ ವಿಷಯದಲ್ಲಿ ತಿಳುವಳಿಕೆ ಉಂಟಾಗುತ್ತದೆ.

ಶಾರೀರಿಕ ಸೌಂದರ್ಯದ ವಿಷಯ ಹೀಗಾಯಿತು. ಇನ್ನು ಗೃಹಸೌಂದರ್ಯ—ಮನೆಯನ್ನು ಸುಂದರವಾಗಿಡುವುದೂ ಒಂದು ಕಲೆಯೇ ಆಗಿದೆ. ಹುಡುಗಿಯರೆಲ್ಲರೂ ಕಲಿಯಬೇಕಾದ ವಿಷಯವಿದು. ಸರ್ವಸಾಧಾರಣವಾಗಿ ಬೇಕಾದಷ್ಟು ಸ್ಥಳ ಮತ್ತು ಬಹು ಮೂಲ್ಯ ಪದಾರ್ಥಗಳಿದ್ದರೂ ಕೂಡ ಅನೇಕ ಮನೆಗಳು ನೋಡಲು ಸುಂದರವಾಗಿರುವುದಿಲ್ಲ. ಪ್ರತಿಯೊಂದು ವಸ್ತುವೂ ಅದರ ಉಚಿತ ಸ್ಥಾನದಲ್ಲಿಡಲ್ಪಟ್ಟರೇ ಮನೆಯನ್ನು ಶೃಂಗರಿಸಲು ಸಾಧ್ಯವಾಗುವುದು. ಯಾವ ವಸ್ತುವನ್ನು ಎಲ್ಲಿಡಬೇಕು ಮತ್ತು ಯಾವುದನ್ನು ಎಲ್ಲಿಟ್ಟರೆ ಹೆಚ್ಚು ಸುಂದರವಾಗಿ ತೋರಬಹುದು ಎಂಬುದನ್ನು ಧ್ಯಾನದಲ್ಲಿಟ್ಟುಕೊಂಡೇ ಕೆಲಸವಾಡಬೇಕು.

ಲಂಡನಿನಲ್ಲಿ ಪ್ರತಿವರ್ಷವೂ ಒಂದು (Ideal Home Exhibition) ಆದರ್ಶ ಗೃಹ ಪ್ರದರ್ಶನ ನಡೆಯುತ್ತದೆ. ಅದನ್ನು ನೋಡಿ ಅಲ್ಲಿನ ಸ್ತ್ರೀಯರು ಹೊಸ ಹೊಸ ವಿಷಯಗಳನ್ನು ಕಲಿತು ತಮ್ಮ ಮನೆಯ ಸೌಂದರ್ಯವನ್ನು ಹೆಚ್ಚಿಸಲು ಪ್ರಯತ್ನಪಡುತ್ತಾರೆ. ನಮ್ಮ ದೇಶದಲ್ಲಿ ಇಂಥಾ ಯಾವ ಪ್ರಯತ್ನಗಳೂ ಇಲ್ಲ. ಸ್ಥಾನೀಯ ಸಂಸ್ಥೆಗಳು ಈ ತರದ ವಿಷಯಗಳಿಗೆ ನಿಗ ಕೊಡಬೇಕು.

ಗೃಹಸೌಂದರ್ಯ ಪ್ರೇಮಿಗಳು ಹೂಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು. ಪ್ರಪಂಚದಲ್ಲಿ ಹೂಗಳಿಗಿಂತ ಸುಂದರವಾದುದು ಇನ್ನೊಂದಿಲ್ಲ. ಹೂಗಳಿಂದ ಗೃಹಸೌಂದರ್ಯ ವೃದ್ಧಿ ಹೊಂದುತ್ತದೆ. ಹಸುರು ಮೈದಾನದ ಶೋಭೆಯು ಮನೋರಂಜಕವಾಗಿರುವುದೇ ಅಲ್ಲದೆ ಕಣ್ಣುಗಳಿಗೆ ಸಹ ಲಾಭ ಮತ್ತು ಸುಖದಾಯಕವಾಗಿದೆ.

ಮೊಗಲ ಬಾದಷಹರಿಗೆ ಗೃಹಸೌಂದರ್ಯದಲ್ಲಿ ಬಹಳ ಪ್ರೇಮವಿತ್ತು. ಅವರು ಹಸುರು ಮೈದಾನ ಮತ್ತು ಸುಂದರ ಉದ್ಯಾವನ ರಚನೆಗಾಗಿ ಹಣವನ್ನು ನೀರಿನಂತೆ ಚಲ್ಲುತ್ತಿದ್ದರು. ಅವರ ಸೌಂದರ್ಯಪ್ರೇಮುದ ಸಾಕ್ಷಿಯೋ ಎಂಬಂತೆ ಇಂದು ಸಹ ತಾಜಮಹಾಲು ತಲೆಯೆತ್ತಿ ನಿಂತಿದೆ. ಹೂಗಿಡಗಳನ್ನು ಬೆಳೆಸುವುದೂ, ಹೂಗಳನ್ನು ಹೂವಿನ ಪಾತ್ರೆಗಳಲ್ಲಿ ಸುರುಚಿಪೂರ್ಣವಾಗಿ ಇರಿಸುವುದೂ ಮಾಲಿಗಳ ಕೆಲಸವೆಂದು ಹಲವರ ಭಾವನೆಯಿದೆ. ವಾಸ್ತವವಾಗಿ ನೋಡಿದರೆ ಅದೂ ಒಂದು ಕಲೆಯಾಗಿದೆ. ಮನೆಯು ಸುಂದರವಾಗಿದ್ದರೆ ಮನಸ್ಸಿನಲ್ಲಿ ಶಾಂತಿಯೂ ಕೆಲಸವಾಡಲು ಮನಸ್ಸೂ ಉಂಟಾಗುತ್ತದೆ.

ಈ ತರದ ಸೌಂದರ್ಯಪ್ರೇಮುಗಳಿಂದ ಸ್ತ್ರೀಯರಿಗೆ ಇನ್ನೊಂದು ಲಾಭವೇನೆಂದರೆ-ಅವರ ಸಮಯವು ಈ ಕೆಲಸಗಳಲ್ಲಿ ವ್ಯಯವಾಗುವುದರ ಜೊತೆಗೆ ಮನೋರಂಜನವೂ ಆಗುವುದು. ಹೆಚ್ಚಾಗಿ ಹಣವಂತರ ಮನೆಯ ಹೆಂಗಸರು ತಮ್ಮ ಸಮಯವನ್ನು ಕೂತುಕೊಂಡು ಹರಟೆ ಕೊಚ್ಚುವುದರಲ್ಲೋ, ಪರನಿಂದೆಯಲ್ಲೋ ಇಲ್ಲವೇ ಮಲಗುವುದರಲ್ಲೋ ಕಳೆದು ಬಿಡುತ್ತಾರೆ. ಅವರು ತಮ್ಮ ಆ ಸಮಯವನ್ನು ಈ ತರದ ಕೆಲಸಗಳಲ್ಲಿ ಕಳೆದುದೇ ಆದರೆ ಅವರಿಗೆ ಹರ್ಷ ಮಾತ್ರವೇ ಅಲ್ಲದೆ ಲಾಭವೂ ಅನಾಯಾಸವಾಗಿ ದೊರೆಯುವುದು.

ಸೌಂದರ್ಯಪ್ರೇಮುದ ಬೀಜವು ಎಲ್ಲರಲ್ಲೂ ಇದೆ. ಆದರೆ ಅದು ಚಿಗಿತು ಗಿಡವಾಗುವುದಕ್ಕೆ ಉಚಿತ ಶಿಕ್ಷಣೆಯ ಆವಶ್ಯಕತೆಯಿದೆ. ಸ್ತ್ರೀಯರ ಸಹಾಯಕ್ಕಾಗಿ ಯುರೋಪಿನಲ್ಲಿ ಸೌಂದರ್ಯವೃದ್ಧಿಯ ವಿಷಯದ ಲೇಖ, ನಕ್ಷೆ ಹಾಗೂ ಚಿತ್ರಗಳಿರುವ ಪತ್ರಿಕೆಗಳು ಪ್ರಿಂಟಾಗುತ್ತವೆ. ನಮ್ಮಲ್ಲೂ ಇಂತಹ ಪತ್ರಿಕೆಗಳಿರಬೇಕು.

ಏಕೆಂದರೆ, ಯಾವಾಗ ನಮ್ಮ ಸ್ತ್ರೀಯರಲ್ಲಿ ಸೌಂದರ್ಯಪ್ರೇಮವು ಹೆಚ್ಚುವುದೋ ಆಗಲೇ ಅವರು ಗೃಹದೇವಿಯರಾಗಲು ಯೋಗ್ಯರಾಗುವರು.

(ವಿಶಾಲ ಭಾರತದ ಒಂದು ಲೇಖನದ ಆಧಾರದಿಂದ.)

ಅತ್ಯಾಶ್ಚರ್ಯಕರವಾದ ಇಲೆಕ್ಟ್ರೋ-ಟಾನಿಕ್ ಉಪಚಾರ

ಇಂದ್ರಿಯದೌರ್ಬಲ್ಯ, ಎಲ್ಲಾ ತರದ ನರಗಳ ರೋಗಗಳು, ನಿದ್ರೆಯಿಲ್ಲದಿರುವಿಕೆ, ಮೆದುಳಿನ ಅಶಕ್ತತೆ, ನೆನಪು, ಮತ್ತು ಮನೋದಾರ್ಢ್ಯ ಕಡಿಮೆಯಾಗುವಿಕೆ ಇತ್ಯಾದಿಗಳಿಗೆ

ಚೈತನ್ಯ, ಮೆದುಳಿನ ಶಕ್ತಿ ಮತ್ತು ಆರೋಗ್ಯವನ್ನು ತೀವ್ರವಾಗಿಯೂ, ಏನೊಂದು ಬಾಧೆಯಿಲ್ಲದ ರೀತಿಯಲ್ಲಿಯೂ ಉಂಟುಮಾಡುವ, ಶಕ್ತಿವಂತವಾದ ಚೈತನ್ಯದಾಯಕ ಪದಾರ್ಥಗಳನ್ನುಳ್ಳ ಈ ಅಶ್ಚರ್ಯಕರವಾದ ಟಾನಿಕ್ ಗುಳಿಗೆಗಳ ವಿಸ್ಮಯಕರನಾದ ಗುಣಕಾರಿ ಪರಿಣಾಮವನ್ನು ಒಂದೇ ದಿನದಲ್ಲಿ ಕಂಡುಕೊಳ್ಳುವಿರಿ. ಉಷ್ಣಕಾಲದ ಅಶಕ್ತತೆಯು ಮಾಯವಾಗುವುದು, ನಿಮ್ಮ ಜೀರ್ಣಶಕ್ತಿ, ಜೀವಸದ ಸುಖ ಮತ್ತು ಮುಖದ ಕಾಂತಿ ಎಣಿಕೆಗಿಂತಲೂ ಅಪರಿಮಿತವಾಗಿ ವರ್ಧಿಸುವುದು—ಚುರುಕಾದ ಮಾನಸಿಕ ಮತ್ತು ಶಾರೀರಕ ಉದ್ಯೋಗಗಳಲ್ಲಿ ನಿರತರಾದವರಿಗೆ ಅದರ್ಶಪ್ರಾಯವಾದುದು. ಅವನ್ನು ಇಂದೇ ಉಪಯೋಗಿಸಿರಿ—ಹೊಸ ಮನುಷ್ಯರಾಗಿರಿ!

ಕ್ರಯ: 25 ಮಾತ್ರೆಗಳ ಒಂದು ಬಾಟಲಿಗೆ ರೂ. 1—4—0. 40 ಮಾತ್ರೆಗಳ ಒಂದು ಬಾಟಲಿಗೆ ರೂ. 2—0—0. ವಿ. ಪಿ. ಚಾರ್ಜು ಪ್ರತ್ಯೇಕ.

ಪ್ರೊ. ಜೇಮ್ಸರ ಇಲೆಕ್ಟ್ರೋಟೋನಿಕ್ ಪಿಲ್ಸ್

ಉಚಿತ ಮಾದರಿ. 2 ದಿನಗಳ ಉಪಯೋಗದ ಮಾದರಿ ಬಾಟ್ಲಿಯು 4 ಆಣೆಗಳ ಅಂಚೆ ಚೀಟುಗಳನ್ನು ಕಳುಹಿಸಿದಲ್ಲಿ ಧರ್ಮಾರ್ಥವಾಗಿ ರವಾನಿಸಲ್ಪಡುವುದು.
ವೇದನೆಯನ್ನು ಕೂಡಲೇ ಉಪಶಮನಗೊಳಿಸುತ್ತದೆ.

"ಆಡ್‌ಮನ್ಸ್ ಸ್ಯಾಪ್ಪೆಸ್ಸ್ ಸಾಲ್ವ್" (ಬಾಮ್) (ರಿಜಿಸ್ಟರ್ಡ್)

ನೀವು ಆದರ ಪರಿಣಾಮವನ್ನು ಕಂಡು ಆಶ್ಚರ್ಯಪಡುವಿರಿ. ಆದು ಯಾವದೇ ತರದ ಹೊರ ವೇದನೆಯಾಗಿರಲಿ, ಈ ಆಶ್ಚರ್ಯಕರವಾದ ಬಾಮನ್ನು ಕೂಡಲೇ ಸವರಿದಲ್ಲಿ ತೀವ್ರ ಉಪಶಮನವು ಸಿಗುವುದು. ಇಂದೇ ಒಂದು ಭರಣಿಯನ್ನು ಉಪಯೋಗಿಸಿರಿ. ಆ ಮೇಲೆ ನೀವು ಆದನ್ನು ಬಿಡಲಾರಿರಿ. ಆದು ಆಶ್ಚರ್ಯಕರವಾಗಿದೆ. ಎಲ್ಲೆಲ್ಲಿಯೂ ಸಿಗುತ್ತದೆ.
ಕ್ರಯ: ಭರಣಿಯೊಂದರ ರೂ. 1-0-0, ವಿ. ಪಿ. ಚಾರ್ಜು ಪ್ರತ್ಯೇಕ. ಟಪ್ಪಾಲು ಖರ್ಚಿಗಾಗಿ 2 ಆಣೆಗಳ ಅಂಚೆಚೀಟಿನೊಡನೆ ಬರೆದರೆ ಉಚಿತವಾದ ಮಾದರಿಯು ಸಿಗುವುದು.

Sole Agents:—**Anglo-Indian Drug & Chemical Co.,**
285, Juma Masjid, Bombay No. 2.

ಪರ್ಮಾಸನ್ ಮಾತ್ರೆಗಳು ಉನ್ಮಾದಕ್ಕೆ ಸಂಜೀವನ

ಇದೀಗ ಆದ್ವಿತೀಯ ಸಿದ್ಧೌಷಧ. ಈಗ ಚಾಲ್ತಿಯಲ್ಲಿರುವ ಹಿಂದುಸ್ಥಾನದ ಮತ್ತು ಆಂಗ್ಲೇಯ ತ್ಸೆಗಳು, ಹುಚ್ಚು, ವಿಪ್ರಾಭಂಗ, ಮನೋಭ್ರಾಂತಿ, ಹಿಸ್ಟೇರಿಯಾ ಮತ್ತು ಅಪಸ್ಮಾರ ಮುಂತಾದ ಎಲ್ಲಾ ಗಳಿಗೆ ವಿಫಲವಾದಲ್ಲಿ, ಕೊನೆಗೆ ಒಂದಾವರ್ತಿಯಾದರೂ **ಪರಮಾಸನ್ ಮಾತ್ರೆಗಳನ್ನು** ಉ ೋಗಿಸಿ ಖಾತ್ರಿ ಮಾಡಿರಿ. ಇದನ್ನು ರೋಗಿಗಳಿಗೆ ಉಪಯೋಗಿಸಿ ಇದರ ಆಶ್ಚರ್ಯಕರವಾದ ಗುಣ ನ್ನು ನೋಡಿ, ಅನೇಕ ಪಂಡಿತ, ಡಾಕ್ಟರುಗಳು ಹೊಗಳಿ ಕೊಟ್ಟ ಸರ್ಟಿಫಿಕೇಟುಗಳು ಇದರ ಕೀರ್ತಿ ನ್ನು ವರ್ಣಿಸುತ್ತವೆ. ಈ ಮಾತ್ರೆಗಳಿಂದ ಚಿಕಿತ್ಸೆಮಾಡಿದರೆ ರೋಗಿಗಳನ್ನು ಎಂದೇಂದಿಗೂ ಮೋಟಲ್ ತ್ರೆಗೆ ಕಳುಹಿಸುವ ಆಗತ್ಯವಿರದು. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 4—0—0 ಮಾತ್ರ, ವ್ಯಾಪಾರಿಗೆ ಕಮಿಷನ್ ಕೊಡಲಾಗುವುದು.

ಮಂಗಳೂರಿನಲ್ಲಿ **ಕಾರ್ನಾಡ್ ಶಿವರಾವ್**, ಮಾರ್ಕೆಟ್ ರೋಡ್
ಇವರಲ್ಲಿ ಮಾತ್ರೆಗಳು ಮಾರಾಟಕ್ಕೆ ದೊರೆಯುವವು.

C. V. KAMATH,
Hysteria & Mental Expert, Post Udipi.

ಸೊಕ್ಕಿದ ನರಗಳಿಗೆ ಪಟುತ್ವವೀವುದು

ಜೀರ್ಣಶಕ್ತಿ ಮತ್ತು ದೇಹಬಲ ಹೆಚ್ಚಿಸುವ ಔಷಧಗಳಲ್ಲಿ ಅಲೆಂಬಿಕ್ ಹೆಮೋ ದ್ರಾಕ್ಸೋಮಾಲ್ ಶ್ರೇಷ್ಠವಾದದ್ದು.

ಇದು ಬಲವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸಿ ನರಗಳಿಗೆ ಪಟುತ್ವವನ್ನು ಕೊಡುವುದೇ ಅಲ್ಲದೆ ಜೀವನಸೌಖ್ಯವನ್ನನುಭವಿಸಲು ಸಹಾಯಮಾಡುವುದು.

ಹೆಮೋ-ದ್ರಾಕ್ಸೊ-ಮಾಲ್ಟ್

ಅಲೆಂಬಿಕ್ ಕೆಮಿಕಲ್ ವರ್ಕ್ಸ್, ಲಿಮಿಟೆಡ್.

ಮುಂಬಯಿ ಬರೂಡಾ ಮದರಾಸು.

WANTED

In the South Kanara District young and ambitious ien on very liberal terms, to represent the BHARAT NSURANCE COMPANY, LTD., LAHORE. An excellent pportunity to earn a decent living.

pply to:—

DUTT & CO., *Chief Agents,* KARWAR.

ಪಂಡಿತ ಜವಹರಲಾಲರ ಆತ್ಮಕಥೆ

೨೦೦ ಪುಟಗಳು! ಎರಡು ಸಂಪುಟಗಳು!!

ಡೆಮ್ಮಿ. ಅಷ್ಟಪತ್ರಾಕಾರ. 1ನೇ ಸಂಪುಟ ತಾ. 1—12—'36. 2ನೇ ಸಂಪುಟ 1—12—'36. ಹೊರಬೀಳುವುವು. ಟಪಾಲು ಖರ್ಚು ಪ್ರತ್ಯೇಕ.

ಅತ್ಯುತ್ತಮ ಪ್ರತಿ	ರೂ. ೧೦—೦—೦	ಅತ್ಯುತ್ತಮ ಪ್ರತಿ	ರೂ. ೯೦—೦—೦
ವಾಚನಾಲಯ ಪ್ರತಿ	,, ೭—೦—೦	ವಾಚನಾಲಯ ಪ್ರತಿ	,, ೬—೦—೦
ಸಾಮಾನ್ಯ ಪ್ರತಿ	,, ೫—೦—೦	ಸಾಮಾನ್ಯ ಪ್ರತಿ	,, ೪—೮—೦

30—11—'36 ತಾ. ಒಳಗೆ ಹಣ ಕಳುಹಿಸುವವರಿಗೆ.

ಟಪಾಲು ಖರ್ಚು ಮುಫತ್ತು.

ಹಣವನ್ನು ನೇರೆ ಕಳುಹಿಸಬೇಕು. ಏಜಂಟರನ್ನು ನೇಮಿಸಿಲ್ಲ.

ಮುಂಗಡವಾಗಿ ಆರ್ಡರುಗಳನ್ನು ಕೊಟ್ಟು ವ್ಯಾಪಾರ ನಡೆಸುವ ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುವುದು.

ಪ್ರಕಾಶಕರು:—ಸಿ. ಅಶ್ವತ್ಥನಾರಾಯಣರಾವ್, ಬಿ. ಎ.,
ಸಂಪಾದಕರು: "ನವಜೀವನ" ಮತ್ತು "ಮಕ್ಕಳ ಪುಸ್ತಕ",
ಬಳೇಪೇಟೆ, ಬೆಂಗಳೂರು ಸಿಟಿ.

ಸಲಿಗೆ ಮಾಡಿಕೊಳ್ಳಿರಿ

'ವ್ಯವಸ್ಥೆ' ಎಂಬ ಶಬ್ದವು ಈಗಿನ ದಿನಗಳಲ್ಲಿ ತಪ್ಪದೆ ಜನರ ನಾಲಿಗೆಯಲ್ಲಿದೆ. 'ದುಡುಕಿ ಲಿಬಿಲಿ ಮಾಡುವ' ಸಮಾಚಾರವೇ ಇಲ್ಲ. ಡ್ಡ ಮನುಷ್ಯರು ಪ್ರಪಂಚದ ದೊಡ್ಡ ದೊಡ್ಡ ಷಯಗಳನ್ನು ಕುರಿತು ವ್ಯವಸ್ಥೆಮಾಡುವುದ ಲ್ಲಿ ಉದ್ಯುಕ್ತರಾಗಿದ್ದಾರೆ; ಆದರೆ ದಿನಚರ್ಯೆ ಸಾಮಾನ್ಯ ಮತ್ತು ಚಿಲ್ಲರೆ ವಿಷಯಗಳಲ್ಲಿ ವಸ್ಥೆ ಮಾಡಲು ಕೈಹಚ್ಚುವವರು ಎಷ್ಟು ಂದಿ?

ಜೀವನದ ಉಪಯುಕ್ತ ವಸ್ತುಗಳು ಎಷ್ಟೆ ತಮಾನ್ಯವಾಗಿರಲಿ, ಅವುಗಳ ಕಡೆಗೆ ಎಷ್ಟೊ ಯಂಜಾಗ್ರತೆಯೂ ಸಿದ್ಧತೆಯೂ ಬೇಕಾಗಿವೆ; ದಕ್ಕೆನೇ 'ವ್ಯವಸ್ಥೆ' ಎನ್ನುತ್ತಾರೆ. ಉದಾಹರಣೆ ಾಗಿ ಸಾಮಾನ್ಯ ರೂಢಿಯಲ್ಲಿರುವ ಮಧ್ಯಾ ್ನದ ಚಾ ಕುಡಿಯುವ ಕ್ರಮವನ್ನು ನೀವು ನಂಪ್ರತಿ ಬಹಳ ಆತುರದಿಂದ ಹಾರ್ಯೆಸುತ್ತೀ ಲ್ಲ! ಅದರ ಒಂದು ಪ್ರಶ್ನೆಯನ್ನು ಎತ್ತೋಣ. ಂಥ ವಾಡಿಕೆಯ ಕಾರ್ಯವು ಕ್ಷಣಪ್ಪಕ್ಕೆ ೂಪುಗೊಳ್ಳುವುದಿಲ್ಲ; ಮತ್ತು ನೀವು ಕುಡಿಯುವ ಚಾ ಅಜಾಗ್ರತೆಯಿಂದ ತಯಾರಿಸಲ್ಪಟ್ಟಿ ್ದರೆ ಅದನ್ನು ಕುಡಿದು ನಿಮಗೆ ಸುಖವಿಲ್ಲ. ಚಾ ಒಳ್ಳೇ ರೀತಿಯಿಂದ ತಯಾರಿಸುವುದೆಂದರೆ ಹೇಗೆ ನೋಡಿದರೂ ಅದು ಒಂದು ವ್ಯವಸ್ಥಿತ ಪ್ರಯತ್ನವೆನ್ನಬೇಕು.

ಚಾ ಕುಡಿಯುವುದೆಂಬುದು ನಿಮ್ಮ ದಿನಚರಿಯಲ್ಲಿ ರೂಢಿಯಲ್ಲಿರುವ ಅಭ್ಯಾಸವೆಂದು ನೀವೇ ಬಲ್ಲಿರಿ. ಹೀಗಾಗಿ ಅದನ್ನು ತಯಾರಿಸುವುದು ಕೂಡ ರೂಢಿಯ ಕ್ರಮವೆಂದು ನೀವು ನೆನಸಬಹುದು. ಆದರೆ ಅದು ಅಷ್ಟು ಚಿಲ್ಲರೆ ಕೆಲಸವಲ್ಲ. ಚಾ ತಯಾರಿಸುವ ವ್ಯವಸ್ಥಿತ ಕ್ರಮದ ತತ್ವಗಳನ್ನು ಅಲಕ್ಷಿಸುವನರಿಂದ ತಯಾರಿಸಲ್ಪಡುವ ಚಾ ಕುಡಿಯುವುದರಿಂದ ಏನೇನೂ ಸುಖ ದೊರೆಯಲಾರದು.

ಈ ವ್ಯವಸ್ಥಿತ ಕ್ರಮವು ಅತಿ ಸುಲಭ. ಚಾ ಹಾಳು ರೀತಿಯಿಂದ ತಯಾರಿಸುವುದೇ ಕಷ್ಟ; ಅದಕ್ಕಿಂತಲೂ ಒಳ್ಳೇದಾಗಿ ತಯಾರಿಸುವುದು ಮತ್ತಷ್ಟು ಸುಲಭ. ಅದಕ್ಕೆ ಬೇಕಾದುದು ಇಷ್ಟೆ—ವಿಚಾರಪರವಾದ ಮೆದುಳು, ಚಟುವಟಿಕೆಯುಳ್ಳ ಎರಡು ಕೈಗಳು. ಹಾಗಿದ್ದರೆ ಸುಖವಾಗಿ ಕುಡಿಯಬಹುದಾದ ಚಾ ಪಾನವು ಬೇಕಾದಾಗ ಸಿಗುವುದಿಲ್ಲವೇನು? ಯಾಕೆಂದರೆ ಅದನ್ನು ತಯಾರಿಸುವ ರೀತಿಯಲ್ಲಿ ತಯಾರಿಸುವುದಕ್ಕೆ ಸಾಕಷ್ಟು ಗಮನ ಕೊಡುವುದಿಲ್ಲ, ಅದರ ಕ್ರಮಗಳನ್ನು ಅನುಸರಿಸುವುದಿಲ್ಲ.

ಪ್ರಥಮ ವಿಚಾರವೇನೆಂದರೆ ಒಳ್ಳೆ ಚಾತಿಯ ಚಾಸೊಪ್ಪನ್ನು ಮಾತ್ರ ಉಪಯೋಗಿಸಬೇಕು. ಒಂದು ರಾತ್ಲು ಒಳ್ಳೆ ಚಾಸೊಪ್ಪಿನಿಂದ ಕಡಿಮೆ ಎಂದರೆ ೨೦೦ ಕಪ್‌ಗಳಿಗಿಂತ ಹೆಚ್ಚು ಚಾ ತಯಾರಿಸಬಹುದು. ಒಳ್ಳೆ ಚಾ ಕಟ್ಟಕಡೆಗೆ ಕಡಿಮೆ ಖರ್ಚು ಬೀಳುವುದು; ಆದರೂ ಹೆಚ್ಚು ರುಚಿಕರವಾಗಿದೆ. ಆದರೆ ತೇವವುಳ್ಳ ಗಾಳಿಗೆ ಒಡ್ಡಿದ ಎಷ್ಟೆ ಒಳ್ಳೆ ಚಾಸೊಪ್ಪು ಆದರೂ ಕೊನೆಗೆ ಅದರ ಸ್ವಾದ ಕೆಡುವುದು. ಆದ್ದರಿಂದ ಗಾಳಿ ಸೋಂಕದ ಪೊಟ್ಟಣದೊಳಗೆ ಅದನ್ನು ಯಾವಾಗಲೂ ಇಡಬೇಕು.

ಸಾಮಾನ್ಯವಾದ ಕಂದು ಬಣ್ಣದ ಪಿಂಗಾಣಿ ಚಾ ಪಾತ್ರೆಯಲ್ಲಿ ಹಾಕಿಯೇ ಒಳ್ಳೆ ಚಾ ಪಾನವನ್ನು ತಯಾರಿಸಬೇಕು. ಚಾ ತಯಾರಿಸುವ ಮುಂಚೆ ಪಾತ್ರೆಯನ್ನು ಚೆನ್ನಾಗಿ ತೊಳೆದು ಅದನ್ನು ಉಪಯೋಗಿಸುವ ಮುಂಚೆ ಒಣಗಿಸಬೇಕು.

ಕಷಾಯ ಮಾಡುವುದಕ್ಕೆ ಶುದ್ಧವಾದ ನೀರನ್ನು ಮಾತ್ರ ಉಪಯೋಗಿಸಬೇಕೆಂಬದು ಸ್ಮರಣೆಯಲ್ಲಿಡತಕ್ಕ ಮುಖ್ಯ ಅಂಶ; ಆ ಶುದ್ಧ ನೀರನ್ನು ಸರಿಯಾಗಿ ಕುದಿಸಬೇಕು. ಸುಖಕರವಾದ ಚಾ ಪಾನವು ಸಿಗಬೇಕಾದರೆ ಮುಖ್ಯ ಗುಟ್ಟು ಇದೇ.

ಅನಂತರ ಬರುವುದು ಕಷಾಯದ ಪ್ರಶ್ನೆ. ಚಾ ಕಷಾಯ ಹೊರಡುವ ಮುಂಚೆ ಚಾದಾನಿಯನ್ನು ಬೆಚ್ಚಗಿಟ್ಟರೆ ಒಳ್ಳೇದು. ಇದಕ್ಕಾಗಿ, ಒಣಗಿದ ಸೊಪ್ಪನ್ನು ಚಾದಾನಿಯಲ್ಲಿ ಹಾಕುವ ಮುಂಚೆ ಆ ಪಾತ್ರೆಯನ್ನು ಬಿಸಿನೀರಿನಿಂದ ಮುಕ್ಕುಳಿಸುವುದು ಒಳ್ಳೇದು.

'ತಲಾ ಒಬ್ಬರಿಗೊಂದು ಚಂಚಾ, ಕೊಸರಿಗೊಂದು ಚಂಚಾ' ಈ ಹಳೆ ವಾಡಿಕೆಯೇ ಚಾ ಸೊಪ್ಪನ್ನು ಅಳೆಯುವುದಕ್ಕೆ ಉತ್ತಮ ಕ್ರಮ. ಮೊತ್ತಮೊದಲು ಚಾಸೊಪ್ಪನ್ನು ಹಾಕಿ ಅನಂತರ ಅದರ ಮೇಲೆ ಕುದಿಯುವ ನೀರನ್ನು ಹೊಯ್ಯಬೇಕು; ಅಲ್ಲದೆ ಬಿಸಿನೀರಲ್ಲಿ ಚಾಸೊಪ್ಪನ್ನು ಕದಡುವುದು ಉತ್ತಮ ವಿಧಾನವಲ್ಲ. ಕಷಾಯ ಹೊರಡುವುದಕ್ಕೆ ನಾಲ್ಕು ಮಿನಿಟಾದರೂ ಸಮಯ ಕೊಡಬೇಕು. ಇಷ್ಟು ಸಮಯ ತಡೆಯದೆ ಚಾವನ್ನು ಕಪ್‌ಗಳಲ್ಲಿ ಸುರಿದರೆ 'ಚಾ'ದ ಗುಣಗಳೆಲ್ಲ ಕಳೆದುಹೋಗುವವು.

ರುಚಿಯಿಂದ ಸೇವಿಸುವ ಒಂದು ಕಪ್ಪು ಚಾ ತಯಾರಿಸುವುದಕ್ಕೆ ಬೇಕಾದ ಅನುಭವ ಇಷ್ಟೆ. ಉಳಿದುದೆಲ್ಲ ಅವರವರ ಇಚ್ಛೆ. ಕೆಲವರಿಗೆ ಚಾಸೊಪ್ಪಿಗೆ ಹಾಲು ಮತ್ತು ಸಕ್ಕರೆ ಕೂಡಿಸುತ್ತಾರೆ. ಕೆಲವರು ಸಕ್ಕರೆ ಮತ್ತು ಹಾಲು ಇಲ್ಲದೆನೆ ಕುಡಿಯುತ್ತಾರೆ. ಇನ್ನಿತರರು ಬರೆ ಚಾ ಪಾನಕ್ಕೆ ಒಂದಿಷ್ಟು ಲಿಂಬೆ ರಸ ಬೆರಸುತ್ತಾರೆ. ಬೇರೆ ಬೇರೆ ಜನರು ಬೇರೆ ಬೇರೆ ಸಾಹಿತ್ಯಗಳನ್ನು ಬೆರೆಸಬಹುದು. ಆದರೆ ಎಷ್ಟಿದ್ದರೂ ಅಜಾಗ್ರತೆಯಿಂದ ಹಾಳಾಗಿ ತಯಾರಿಸಿದ ಚಾ ಪಾನಕದ ರುಚಿಯನ್ನು ಮಾರ್ಪಡಿಸಲು ಈ ರೀತಿಯು ಬೆರಿಕೆಯಿಂದ ಉತ್ತಮವಾಗುವುದಿಲ್ಲ.

ನಿಮ್ಮ ಜೀವನಕ್ರಮದಲ್ಲಿ ಚಾ ಪಾನಕ್ಕೆ ಪ್ರತ್ಯೇಕವಾದ ಒಂದು ಸ್ಥಾನವು ದೊರೆತಿದೆ. ಸುಧಾರಿತ ಜನರ ಹಾಗೂ ಜನಸಾಮಾನ್ಯರ ಜೀವನದಲ್ಲಿ ಇದು ಬೆರೆತುಹೋಗಿದೆ. ಶ್ರೀಮಂತರಾಗಲಿ ಬಡವರಾಗಲಿ ತಮ್ಮ ದಿನಚರಿಯ ಜೀವನಕ್ಕೆ ಒಂದು ಬಗೆಯ ಸುಖವೂ ಆನಂದವೂ ಸಿಗುವುದಕ್ಕಾಗಿ ಇದನ್ನೆ ಸೇವಿಸುತ್ತಾರೆ. 'ಜನರ ಮನಸ್ಸೆಲ್ಲಾ ಈ ಚಾಕಪ್ಪಿನಲ್ಲಿ ಸಮತಾವಾದದಿಂದ ಐಕ್ಯವಾಗಿದೆ.'

ಸ್ವಂತ ಮನೆಯಲ್ಲಾಗಲಿ, ಹೊರಗಾಗಲಿ, ಗೆಳೆಯರ ಗುಂಪಿನಲ್ಲಾಗಲಿ ಆದಷ್ಟು ಪ್ರಯತ್ನ ಮಾಡಿ, ಚಾ ಕುಡಿಯುವುದು ಒಂದು ವ್ರತವೆಂಬಂತೆ ಮಾಡಿಕೊಂಡ ನೀವು ಇಂಥ ಸುಖವನ್ನು ಕೊಟ್ಟು ಜೀವನಕ್ಕೆ ಒಂದು ಬಗೆಯ ಉತ್ತೇಜಕವಾದ ಚಾ ಪಾನವನ್ನು ತಯಾರಿಸುವ ಕಾರ್ಯದಲ್ಲಿ ಅಸಡ್ಡೆ ಮಾಡಬೇಕೇ?

ಅಷ್ಟೇ ಅಲ್ಲ, ಸರಿಯಾಗಿ ತಯಾರಿಸಿದ ಒಂದು ಕಪ್ ಚಾ ತೆಪ್ಪಗೆ ಕುಳಿತು ಸೇವಿಸುವಾಗ ನೀವು ಒಂದು ಬಗೆಯ ಶಾಂತಿಯನ್ನು ಪಡೆಯುತ್ತೀರಿ; ಹಾಗೆಯೇ ಇತರರಿಗೆ ನಿಮಂತ್ರಣ ಕೊಟ್ಟಾಗ ಅವರು ನಿಮ್ಮೊಂದಿಗೆ ಒಂದು ಬಗೆಯ ಸುಖವನ್ನು ಪಡೆದು ಸಹಭಾಗಿಗಳಾಗಬೇಕೆಂದೇ ನಿಮ್ಮ ಉದ್ದೇಶವಲ್ಲವೇ!

ಈಗ ಜಾಗರೂಕತೆಯಿಂದ ಚಾ ಪಾನವನ್ನು ತಯಾರಿಸುವ ವಿಷಯದಲ್ಲಿ ನಾವು ಏಕೆ ಒತ್ತಿ ಹೇಳುತ್ತೇವೆಂದು ನಿಮಗೆ ಗೊತ್ತಾಗುವುದು. ಚಾಸೆಸ್ಸು ಪ್ರಚಾರಕರು ತಮ್ಮ ಪ್ರಚಾರ ಕಾರ್ಯದ ಸಂದರ್ಭದಲ್ಲಿ ಸುಮಾರು ಎರಡು ಮಿಲ್ಲಿಯ ಕಪ್ ಚಾ ಧರ್ಮಾರ್ಥವಾಗಿ ಕೊಡುತ್ತಾರೆ. ಮತ್ತು ಬಹಳ ಜಾಗ್ರತೆಯಿಂದ ತಯಾರಿಸಿದ ಚಾ ಪಾನವನ್ನು ಹಂಚಲಿಕ್ಕೆ ಎಡೆಬಿಡದೆ ಪ್ರಯತ್ನಿಸುತ್ತಾರೆ. ಹೀಗಾಗಿ ಭಾರತೀಯ ಚಾದ ಒಂದು ಕಪ್ಪನ್ನು ಧರ್ಮಾರ್ಥವಾಗಿ ಸೇವಿಸುವ ಪ್ರತಿಯೊಬ್ಬ ಗಂಡಸು, ಹೆಂಗಸು, ಅಥವಾ ಕೂಸು ಕೂಡಾ ಚೆನ್ನಾಗಿ ತಯಾರಿಸಿದ ಚಾ ಸೇವನೆಯಿಂದ ಮಾತ್ರವೇ ಸಿಗಬಹುದಾದ ಆನಂದದ ಅನುಭವವನ್ನು ಹೊಂದುತ್ತಾರೆ. ಇದನ್ನು ಹೊಂದುವ ಪುಣ್ಯವು ನಿಮ್ಮ ಕೈಯಲ್ಲಿಯೂ ಇದೆ, ಇತರರೂ ಇದರಲ್ಲಿ ಭಾಗವಹಿಸಬಹುದು. ಆದ್ದರಿಂದ ಭಾರತೀಯ ಚಾದೊಂದಿಗೆ ನೀವೂ ಸಲಿಗೆ ಬೆಳೆಯಿಸಿರಿ. ಇತರರಿಗೂ ಸಲಿಗೆ ಬೆಳೆಯುವಂತೆ ಯತ್ನಿಸಿರಿ.

ಸ್ತನೋಸ್ತೇಧಃ

STHANO STHEDAH THE MALAYALA OUSHADHA CO., POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗ ಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವುದು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣ ಪರತ

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧನಾಮ 'ಸ್ತನೋಸ್ತಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ, ಕಠಾರುಣನಾದ ಚಿಂತೆಯಿಂದಲೂ, ಪಾಯಿಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲುಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರು ಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು. ದೇಹದೊಳಗೆ ಹೋಗುವ ಔಷಧಿಯು ಶರೀರವೈಢ್ಯಿಯನ್ನೂ ಸ್ತನಗಳ ಪೌಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತಧ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ. 3.

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲೆಬಾರು.

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.

1. ಮುಟ್ಟುದೋಷ, 2. ಸಂತತಿ ಪ್ರತಿಬಂಧಕ, 3. ಧಾತುಪುಷ್ಟಿ, 4. ಲಿಂಗವೃದ್ಧಿ, 5. ಸ್ತ್ರೀರೋಗ, 6. ಕ್ಷಯ ಸಂಹಾರಿ, 7. ವಾತರೋಗ.

THE GENERAL INSURANCE BANK OF INDIA LIMITED,
MANGALORE.

ESTD. 1933.

BENEFIT AMOUNT PAID EXCEEDS RS. 20,950/— AS ON 30TH JUNE 1936. RESERVE FUND EXCEEDS RS. 7,360/—

WE HAVE THREE SCHEMES FOR YOU

LIFE **MARRIAGE** **BIRTH**

ADMISSION FEE RS. 5/8/- ONLY.

(By Instalments if required)

MONTHLY PREMIUM RUPEE ONE ONLY.

Chairman:— M. R. Ry. Philip J. Chandran, Avgl., B. A., Retired Dt. Registrar and Assistant Registrar of Joint Stock Companies, S. K., Mangalore.

WANTED SPECIAL AGENTS AND REPRESENTATIVES ON LIBERAL TERMS.

For Full Prospectus and Agency Terms please apply to:—

THE GENERAL INSURANCE BANK OF INDIA LIMITED,
H. O. MANGALORE, S. K.

Mangalore, 1—11—1936.

P. K. MENON, *Secretary.*

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ಕಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ **ದ್ರಾಕ್ಷಾಮೃತ** ಮೊದಲನೇ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೀಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ಸಪ್ಪವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅಸ್ಥಿ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ಸ್ವಪ್ನಭಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಬಲವಾಗಿ, ಮುಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮುಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಮಿಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಪ್ರಮಾಣ:—ನಸಿಕಿಸಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೪॥ ರೂ. ೧ ಡಜನ್ ಬಾ. ಬೆಲೆ ೧೨ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಸ್ಟು ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು-ಮಿಜಾರಕರ ಬ್ರದರ್ಸ, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ, ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ಶಂಕಸೇಟೆ. ‖ ಕಾರ್ಕಳ—ವ್ಹಿ. ವ್ಹಿ. ಶೆಣೈ. ಕುಂದಾಪುರ-ಕೆ. ಆರ್. ಭಡಜೀ. ಕಾಸರಗೋಡು—ಕೆ. ರಾಮು ನಾಯ್ಕ ಮತ್ತು ಭಕ್ತ ಬ್ರದರ್ಸ್.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೊರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

MODERN PRINTING AT MODERATE RATES!

CONSULT

The Saraswathi Printing Works, Limited,

CANTONMENT, MANGALORE.

ಮಂಗಳೂರು ಪೇಟೆಯ [illegible] ತಿ ಧಾರಣೆ

ಹೊಸ ರಾತಿ	...	2—13	2—
ವಾಸ್ಕತಿ ಅಕ್ಕಿ ಮುಡಿ ೧ಕ್ಕೆ	...	3— 6	3—
ಹಳ್ಳು ಸುಗ್ಗಿ	...	3— 0	3—14
ಅಪ್ಪಲ್ ಬೆಳ್ತಿಗೆ ,, ೧,,	...	4— 4	4—12
ಗುಡ್ಡೆ ಬೆಳ್ತಿಗೆ ,, ,,	...	3—10	4— 0
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	6— 0	7— 0
ಗೋದಿ ಗೋಣಿ ೧ಕ್ಕೆ	...	8— 8	10— 4
ಹುರುಳಿ ,, ,,	...	3— 2	5— 8
ಕಡಲೆ ,, ,,	...	7—10	9— 0
ತೊಗರಿ ,, ,,	...	9— 0	9— 8
ತೊಗರಿಬೇಳೆ ಗೋಣಿ ೧ಕ್ಕೆ	...	11— 0	19— 0
ಉದ್ದು ಮುಡಿ ೧ಕ್ಕೆ	...	4— 4	—
ಹೆಸರು ,, ,,	...	4— 0	—
ರಾಗಿ ಗೋಣಿ ೧ಕ್ಕೆ	...	4— 0	5— 0
ಊರು ಬೆಲ್ಲ ಖಂಡಿ ೧ಕ್ಕೆ	...	30— 0	35— 0
ಉಪ್ಪು ಗೋಣಿ ,,	...	4— 8	4—12
ಹೊಬ್ರಿ ಖಂಡಿ ,,	...	60—	70
ಹೊಬ್ರಿ ಹಿಂಡಿ ಖಂಡಿ ೧ಕ್ಕೆ	...	27— 0	2
ಎಳ್ಳಂಡಿ ಖಂಡಿ ೧ಕ್ಕೆ	...	22— 8	
ಹೊಬ್ರಿ ಎಣ್ಣೆ ಮಣ ೧ಕ್ಕೆ	...	4—15	
ಎಳ್ಳೆಣ್ಣೆ ಡಬ್ಬಿಗೆ	...	—	
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	—	6—
ಮೋರಿಸ್ ಸಕ್ಕರೆ ಮಣ ೧ಕ್ಕೆ	...	3— 9	—
ಮೆಣಸಿನ ಕಾಯಿ ಮಣ ೧ಕ್ಕೆ	...	3— 8	—
ಸಾಸಿವೆ ಮುಡಿ ೧ಕ್ಕೆ	...	5— 4	6— 0
ಕೊತ್ತಂಬರಿ ಮುಡಿ ೧ಕ್ಕೆ	...	2— 8	3— 0
ನೇಟಿವ ಕಾಫಿ ಖಂಡಿ ೧ಕ್ಕೆ	...	140— 0	150— 0
ನೇಟಿವ ಪೀಬರಿ ಕಾಫಿ ಖಂಡಿ ೧ಕ್ಕೆ	...	160— 0	170— 0
ಮೂನ್‌ಸೂನ್ ಏ ಏ ಕಾಫಿ ಖಂಡಿ ೧ಕ್ಕೆ	...	170— 0	175— 0
ಬಿಳಿ ಗೋಟು ಅಡಿಕೆ ಖಂಡಿ ೧ಕ್ಕೆ (ಹಳ್ಳು)		100— 0	115— 0
ಕಾಳುಮೆಣಸು ಖಂಡಿ ೧ಕ್ಕೆ	...	95— 0	102— 8
ಮೂಲಕ್ಕೆ ಮಣ ೧ಕ್ಕೆ ಕೊಡಗು	...	45— 0	55— 0
,, ,, ,, ಸಕಲೇಶಪುರ	...	35— 0	45— 0
,, ,, ,, ಬೀಜ	...	40— 0	50— 0
ಗೇರುಬೀಜ ಮುಡಿ ೧ಕ್ಕೆ	...	4— 2	—
ಬತ್ತ ಮುಡಿ ೧ಕ್ಕೆ	...	1— 4	1— 8
ಎಳ್ಳು ಮುಡಿ ೧ಕ್ಕೆ	...	5— 0	5— 4
ತುಪ್ಪ ಮಣ ೧ಕ್ಕೆ	...	17— 0	18— 0
ಕಬ್ಬಿಣ ಖಂಡಿ ೧ಕ್ಕೆ	...	35— 0	37— 8
ತಾಂಬ್ರ ತಗಡು ಮಣ ೧ಕ್ಕೆ	...	9—12	9—14
ಪವಸು ೧ಕ್ಕೆ	...	22— 8	—
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	12— 8	14— 0
ಚೀನಿ ಬೆಳ್ಳಿ ಸೇರು ೧ಕ್ಕೆ	...	17— 8	18— 0
ಹಿತ್ತಾಳೆ ತಗಡು ಮಣ ೧ಕ್ಕೆ	...	1	
ಹೊಸತ್ತು ಬೆಳಗೋಟು ಖಂಡಿ ೧ಕ್ಕೆ	...		
ಮಂಗಳೂರು ಹಂಚು I ಕ್ಲಾಸ್—1000ಕ್ಕೆ			
,, ದಂಬಿಗಳು ,, ,,			
ನೆಲಕ್ಕೆ ಹಾಸುವ ಇಟ್ಟಿಗೆಗಳು ,, ,,			

ಮಂಗಳೂರಿನ ವಾತಾವರಣ [illegible]

ತಾರೀಕು	ಉಷ್ಣತೆ ಡಿಗ್ರಿ	ಹಿಮೋಷ್ಣತೆ ಡಿಗ್ರಿ	ವೃಷ್ಟಿ (ಇಂಚು) 24 ತಾಸುಗಳಲ್ಲಿ	ನವೆಂಬರ 17ರಿಂದ	ಎಪ್ರಿಲ್‌ರಿಂದ
17-11-36	90.4	75.9	—		
18-11-36	87.2	76.1	—		
19-11-36	89.0	76.0	0.45		
20-11-36	86.4	75.7	—		
21-11-36	90.4	74.3	—		
22-11-36	92.2	74.7	0.10		
23-11-36	92.0	73.9	—	0.55	148.09

ಮಂಗಳೂರಿನಲ್ಲಿ ರೈಲು ಬಂಡಿಗಳ ಸಮಯ.

ಗಾಡಿಗಳು		ಹೊರಡುವ	ಘಂಟೆ	ತಲಪುವ	ಘಂಟೆ
ಮಿಕ್ಸೆಡ್		ಬೆಳಿಗ್ಗೆ	5-55	ರಾತ್ರಿ	8-55
ಕಾಂಜಂಗಾಡ್ ಪ್ಯಾಸಂಜರ್		ಬೆಳಿಗ್ಗೆ	8-25	ಮಧ್ಯಾಹ್ನ	1-20
ಮಲಬಾರ್ ಎಕ್ಸ್‌ಪ್ರೆಸ್		ಬೆಳಿಗ್ಗೆ	9-50	ಸಂಜೆ	4-20
ಫಾಸ್ಟ್‌ಪೆಸೆಂಜರ್		ಮಧ್ಯಾಹ್ನ	12-45	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸಂಜರ್		ಮಧ್ಯಾಹ್ನ	3-20	ಸಂಜೆ	6-15
ಶಟಲ್		ಸಂಜೆ	5-25	ಬೆಳಿಗ್ಗೆ	9-20

ಹಾಸ್ಯಾರ್ಣವ

ಇನ್ಸ್‌ಪೆಕ್ಟರ್:—(ಒಬ್ಬ ವಿದ್ಯಾರ್ಥಿಯೊಡನೆ ಲೆಕ್ಕದಲ್ಲಿ ಪ್ರಶ್ನೆ ಕೇಳುತ್ತಾ—) ನಾನು ನಿನ್ನ ತಂದೆಗೆ ೫೦೦ ರೂಪ್ಯಾಗಳನ್ನು ಸೇಕಡ ೬ರಂತೆ ಕೊಟ್ಟರೆ ಆತನು ಆರು ತಿಂಗಳಲ್ಲಿ ನನಗೆ ಒಟ್ಟು ಎಷ್ಟು ಹಣ ಕೊಡಬೇಕು?

ವಿದ್ಯಾರ್ಥಿ:—ಏನೂ ಕೊಡಲಿಕ್ಕಿಲ್ಲ.

ಇನ್ಸ್‌ಪೆಕ್ಟರ್:—ಹೂ! ನಿನಗೆ ಲೆಕ್ಕವು ಸ್ವಲ್ಪವೂ ಗೊತ್ತಿಲ್ಲ ವೆಂದು ತೋರುತ್ತದೆ.

ವಿದ್ಯಾರ್ಥಿ:—ಸ್ವಾಮೀ, ನನಗೆ ಗೊತ್ತುಂಟು. [illegible] ತಂದೆಯು ಒಬ್ಬನಿಂದ ಹಣ ಪಡಕೊಂಡರೆ ಹಿಂದೆ ಕೊಡುವುದ[illegible]

ಮಾರ್ಗೊ ಸೋಪ್

ಬೇಸಿಗೆಯ ಕಾಲಕ್ಕೂ ಚರ್ಮದ ಮೃದುತ್ವಕ್ಕೂ
ಅತ್ಯುತ್ಕೃಷ್ಟವಾದುದು.

ಇದೇ ಪ್ರಥಮವಾದ ಮತ್ತೂ ಅಗಿರತಕ್ಕ ಒಂದೇ ಒಂದು "ನೀಮ್" ಸಾಬೂನು.

ಎಲ್ಲೆಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಮತ್ತು ಸ್ಥಳೀಯ ಸ್ಟೋಕಿಸ್ಟರಲ್ಲಿ ದೊರೆಯುತ್ತದೆ.

"ನೀಮ್" ಟೂತ್‌ಪೇಸ್ಟ್

ಭಾರತೀಯರು ಅನಾದಿಕಾಲದಿಂದಲೂ ಹಲ್ಲುಜ್ಜುವುದಕ್ಕೆ ಉಪಯೋಗಿಸುವ "ನೀಮ್" ಬೇವಿನ ಕಡ್ಡಿಯ ವಿಷಹಾರಿಯಾದ ಮತ್ತು ಸ್ತಂಭಕವಾದ ಗುಣಗಳಿ ಅವರ ಆರೋಗ್ಯಕರವಾದ ಹಲ್ಲುಗಳ ಗುಟ್ಟೆಂದು ತಿಳಿಯಲಾಗಿದೆ.

ಕಾಲ್ಕೆಮಿಕೊ ನೀಮ್ ಟೂತ್‌ಪೇಸ್ಟ್

ಬೇವಿನ ಕಡ್ಡಿಯ ಎಲ್ಲಾ ಗುಣಗಳನ್ನು ಉಳ್ಳುದಾಗಿದೆಯಲ್ಲದೆ ಪರಿಣಾಮಕಾರಿಯಾಗಿ ಹಲ್ಲನ್ನು ಶುದ್ಧಗೊಳಿಸುವದಕ್ಕೆ ಆಧುನಿಕ ದಂತ ವೈದ್ಯ ಶಾಸ್ತ್ರಕ್ಕೆ ತಿಳಿದಿರುವ ಪದಾರ್ಥಗಳನ್ನು ಒಳಕೊಂಡಿದೆ.

ಸೀಸವಿಲ್ಲದ ಟಿನ್ನಿನ ಕೊಲ್ಲ್ಯಾಪ್ಸಿಬಲ್ ಟ್ಯೂಬುಗಳಲ್ಲಿದೆ.

ದಂತನುಂಜನವನ್ನು ಅಪೇಕ್ಷಿಸುವವರ ಉಪಯೋಗಕ್ಕಾಗಿ ನಮ್ಮ
ಮಾರ್ಗೊಪ್ರಿಸ್ "ನೀಮ್ ಹಲ್ಲುಪುಡಿ"

ಕೆ. ವೆಂಕಟೇಶ ಬಾಳಿಗ, ಗೋಳಿಕಟ್ಟೆ ಬಜಾರ್.
ಯು. ಆರ್. ಶೆಣೈ ಎಂಡ್ ಸನ್ಸ್, ರಥಬೀದಿ.
ಸ್ಕೂಲ್ ಬುಕ್ ಕೋ, ರಥಬೀದಿ.

ಐತಿಹ್ಯ.

ಯಶಸ್ವಿಯಾದ ಪ್ರತಿಯೊಂದು ಸಾಹಸೋದ್ಯಮದ ಬೆನ್ನೆಲುಬು ಐತಿಹ್ಯವೇ. ಮುಖ್ಯ ಶಕ್ತಿಯಾದ—ಐತಿಹ್ಯವು, ಆಲ್ಲಿಲ್ಲದಿದ್ದರೆ, ಸಂಸ್ಥೆಗಳೂ ಮನುಷ್ಯವರ್ಗದಂತೆ, ನಶಿಸಿಹೋಗುತ್ತವೆ. ಮೂವತ್ತು ವರ್ಷಗಳ ಯಶಸ್ವಿನ ಆಡಳಿತದ ಕಾಲದಲ್ಲಿ "ನ್ಯಾಶನಲಿನ" ಐತಿಹ್ಯವು ಬೆಳೆಯುತ್ತ ಬಂದಿದೆ. "ನ್ಯಾಶನಲ್" ಇಂದೇನಾಗಿದೆಯೋ, ಆ ಸ್ಥಾನಕ್ಕೆ ತಂದಿರಿಸಿದುದು ಅದೇ.

ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,

ಹೆಡ್ ಆಫೀಸ್: ಕಲ್ಕತ್ತಾ.

ಏಜೆನ್ಸಿ ಪರತ್ತು ಮೊದಲಾದುವುಗಳಿಗೆ ಬರೆದುಕೊಳ್ಳಿ:—

ಂಗ್ ಸೆಕ್ರಟರಿ,
ಫೀಸ್,
ಟ್, ಮಧುರೆ.

ಬ್ರಾಂಚ್ ಸೆಕ್ರಟರಿ,
ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,
362, ಚೈನಾ ಬಜಾರ್ ರೋಡ್,
ಎಸ್ಪ್ಲನೇಡ್, ಮದ್ರಾಸ್.

ದಿ ಸಬ್ ಬ್ರಾಂಚ್ ಸೆಕ್ರಟರಿ,
ದೇವಾಂಗ ಬ್ಯಾಂಕ್ ಬಿಲ್ಡಿಂಗ್ಸ್,
ಕೆಂಪೇ ಗೌಡ ರೋಡ್,
ಬೆಂಗಳೂರು ಸಿಟಿ.

ಬೆಂಕಿ, ವೋಟರು ಮತ್ತೂ ಕೆಲಸಗಾರರ
ಪರಿಹಾರಗಳ ವಿಮೆಯ ಸಂಬಂಧ
ಏಸೋಶಿಯೇಟೆಡ್
ನ್ಯಾಶನಲ್ ಫಯರ್ ಎಂಡ್ ಜನರಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್‌ನ್ನು ಕೇಳಿ.



ನಮ್ಮಲ್ಲಿ ಈ ಕೆಳಗಿನ ಸಾಮಾನುಗಳನ್ನು ದಾಸ್ತಾನು ಮಾಡಿರುತ್ತದೆ:—

1. ಪೆಟ್ರೊಮೆಕ್ಸ್ ದೀಪಗಳು ಮತ್ತು ಲಾಂಟನುಗಳು.
2. ಎವರ್‌ರೆಡಿ ಮತ್ತು ಡಯಮೆಂಡ್ ಟೋರ್ಚಸ್, ಸೆಲ್ಸ್ ಮತ್ತು ಪ್ರೈಮಸ್ ಸ್ಟವ್‌ಗಳು.
3. ಎಲ್ಲಾ ತರದ ಜರ್ಮನ್ ಮತ್ತು ದೇಶೀ ಮೆಂಟಲುಗಳು.

ಕೂಡಲೇ ನಮ್ಮ ಕೆಟಲಾಗನ್ನು ಪಡೆದುಕೊಳ್ಳಿರಿ.
ಥರ್ಮಾರ್ಥವಾಗಿ ರವಾನಿಸುವೆವು.
ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಕೊಳ್ಳಿರಿ.

ಎಸ್. ಎನ್. ಗಾಂಧಿ,
ಧ್ರಾಂಗಧ್ರಾವಾಲಾ, ಪ್ಯಾಡೊನಿ,
ಗೊಡಿಜೀಸ್ ಸ್ಕೂಲ್, ಬೊಂಬಿ, 3.
P. O. Box No. 3050.

THE BANK OF MANGALORE, LTD.

MANGALORE.

Head Office:- **Mangalore.**

ESTD. 1931.

Branches:- **Mangalore, Panemangalore, Mudabidri & Padubidri.**

Chairman:- **Philip J. Chandran,** B. A.,
Retd. Dt. Registrar & Asst. Registrar of Joint Stock Companies.

On & from 1st of November 1936 Fixed Deposits will be received at following rates of interest.

For	3	months	4 %
„	6	„	4½ %
,	12	„	5½ %
„	24	„ & upwards	6 %

Interest Payable Quarterly.

U. R. Pai,
N. Upendra Pai,
Managing Directors.